Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ–16 । ಸಂಚಿಕೆ–51 । ಡಿಸೆಂಬರ್ 12–18, 2022 । ಪುಟ 16 । ರೂ. 10/–
Volume: 16 | Issue:51 | December 12-18, 2022 | Pages:16 | Price: 10/-
https://janashakthi.wordpress.com e-mail : js_weekly@yahoo.com





ಜಗತ್ತನ್ನು ಸೆಳೆಯುತ್ತಿರುವ ಜಾಗತಿಕ ಫುಟ್ಬಾಲ್ ಹಬ್ಬ

ಮೂರು ಚುನಾವಣೆ: ಗೆದ್ದದ್ದು ಒಂದು ಕಳೆದುಕೊಂಡದ್ದು ಎರಡು



ಸರ್ಕಾರಿ ನೌಕರರ ಪಿಂಚಣಿ ಹಣ ಶೇರು ಮಾರುಕಟ್ಟೆಗೆ

ಶಿಕ್ಷಣ ಕ್ಷೇತ್ರದಲ್ಲಿ ಕೋಮುವಾದದ ಅಪಾಯ

ಸಿಐಟಿಯು ಸಮ್ಮೇಳನಕ್ಕೆ ಉತ್ಸಾಹದ ತಯಾರಿ


17th CITU ALL INDIA CONFERENCE
BENGALURU | 18-22 JAN 2023
Unite and Fight for Pro People Policies

ಬ್ರಿಟಿಷ್ ಸಾಮ್ರಾಜ್ಯಶಾಹಿ–ವಿರೋಧಿ ಸಂಯುಕ್ತ ರಂಗ ಛಿದ್ರವಾದರೂ ಚಿಂತೆಯೇನಿಲ್ಲ ಎಂದು ಸಾರಿದವರು!

'ವೀರ' ಸಾವರ್ಕರ್– ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಭಾಗ–7



ಡಾ.ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಸಾವರ್ಕರ್ ಅವರ ರಾಜಕೀಯ ಚಟುವಟಿಕೆಗಳ ಮೇಲೆ ನಿಷೇಧವಿದ್ದರೂ ಹಿಂದೂ ಮಹಾಸಭಾವನ್ನು ಪುನರ್‌ಸಂಘಟಿಸಲು ಅವಕಾಶ ನೀಡಲಾಯಿತು

ಸಾವರ್ಕರ್ ಅವರನ್ನು ಯೆರವಾಡಾ ಜೈಲಿನಿಂದ ಜನವರಿ 6, 1924ರಂದು ಎರಡು ಷರತ್ತುಗಳ ಮೇಲೆ ಬಿಡುಗಡೆ ಮಾಡಲಾಯಿತು. ಮೊದಲ ಷರತ್ತಿನ ಪ್ರಕಾರ, "ಸಾವರ್ಕರ್ ಅವರು ರತ್ನಗಿರಿ ಜಿಲ್ಲೆಯಲ್ಲೇ ವಾಸ ಮಾಡಬೇಕು ಮತ್ತು ಸರ್ಕಾರದ ಅನುಮತಿಯಿಲ್ಲದೇ ಆ ಜಿಲ್ಲೆಯ ಗಡಿ ದಾಟಿ ಹೊರಗೆ ಹೋಗಬಾರದು". ಎರಡನೇ ಷರತ್ತು "ಅವರು ಸಾರ್ವಜನಿಕವಾಗಿ ಅಥವಾ ಖಾಸಗಿಯಾಗಿ ಸರ್ಕಾರದ ಅನುಮತಿಯಿಲ್ಲದೆ ಐದು ವರ್ಷಗಳ ಕಾಲ ಯಾವುದೇ ರೀತಿಯ ರಾಜಕೀಯ ಚುವಟಿಕೆಗಳಲ್ಲಿ ತೊಡಗಬಾರದು".36 ಆದರೆ, ಧನಂಜಯ ಕೀರ್ ಅವರು ಬರೆದಿರುವ ಸಾವರ್ಕರ್ ಜೀವನಚರಿತ್ರೆಯಲ್ಲಿನ ವಿವರಣೆಗಳ ಪ್ರಕಾರ ಹಿಂದೂ ಮಹಾಸಭಾ ಸಂಘಟಿಸಲು ಮತ್ತು ಮುಸ್ಲಿಂ ಹಾಗೂ ಕ್ರಿಶ್ಚಿಯನ್ನರ ವಿರುದ್ಧ ಪ್ರಚಾರ ಮಾಡುವುದಕ್ಕೆ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು. ಬಿಡುಗಡೆಯಾದ ಎರಡು ವಾರಗಳ ಒಳಗೇ ಆ ಆತ್ಮಕತೆ ಹೀಗೆ ಹೇಳುತ್ತದೆ:

> ರತ್ನಗಿರಿ ಹಿಂದೂ ಮಹಾಸಭಾವನ್ನು ಹೊರಗೆ ಕಾಣುವಂತೆ ಬಾಬಾರಾವ್ ಸಾವರ್ಕರ್ ಅವರ ಪ್ರಭಾವ ಹಾಗೂ ಪ್ರಯತ್ನಗಳ ಮೂಲಕ ಸ್ಥಾಪಿಸಲಾಯಿತು ಎಂದು ಹೊರನೋಟಕ್ಕೆ ಕಂಡರೂ, ವಾಸ್ತವದಲ್ಲಿ, ಸಾವರ್ಕರ್ ಅವರ ಪ್ರೋತ್ಸಾಹದಿಂದಲೇ ಅದು ನಡೆಯಿತು. ಹಿಂದೂಗಳನ್ನು ಒಂದು ಸುಸಂಘಟಿತ ಅಖಂಡವಾಗಿ ಸಂಘಟಿಸುವುದು, ಕ್ರೋಡೀಕರಿಸುವುದು ಮತ್ತು ಒಂದುಗೂಡಿಸುವುದು, ಮತ್ತು ಯಾವುದೇ ನ್ಯಾಯವಲ್ಲದ ಆಕ್ರಮಣವನ್ನು ಪರಿಣಾಮಕಾರಿಯಾಗಿ ವಿರೋಧಿಸಲು ಸಮರ್ಥರಾಗುವಂತೆ ಮಾಡುವುದು ಸಭಾದ ಪ್ರಮುಖ ಗುರಿಯಾಗಿತ್ತು.37

ಬಹಳ ಮುಖ್ಯವಾಗಿ, 'ಅನ್ಯಾಯವಲ್ಲದ ಆಕ್ರಮಣ' ಎಂಬುದು ಬ್ರಿಟಿಷರ ಆಳ್ವಿಕೆಯನ್ನು ಕುರಿತ ಉಲ್ಲೇಖವಾಗಿರದೆ, ಅದು ಮುಸ್ಲಿಮರ ಹಾವಳಿ ಎಂಬರ್ಥವನ್ನು ಪಡೆಯುತ್ತದೆ. ಆಗಸ್ಟ್ 24 ರಂದು ಸಾವರ್ಕರ್ ಅವರು ನಾಸಿಕ್ ನ ಒಂದು ಸನ್ಮಾನ ಸಮಾರಂಭದಲ್ಲಿ ಭಾಗವಹಿಸಲು (ರತ್ನಗಿರಿಯಲ್ಲಿ ಪ್ಲೇಗ್ ರೋಗ ಕಾಣಿಸಿಕೊಂಡಿದ್ದರಿಂದ ಅವರಿಗೆ ಹೊರಗೆ ಹೋಗಲು ಅನುಮತಿ ಸಿಕ್ಕಿತ್ತು) ಅವಕಾಶ ನೀಡಲಾಗಿರುತ್ತದೆ. ಆ ಸಮಾರಂಭವನ್ನು ಹಿಂದೂ–ಮುಸ್ಲಿಂ ಐಕ್ಯತೆಯನ್ನು ವಿರೋಧಿಸುವ ಬಿ.ಎಸ್.ಮೂಂಜೆ ಮತ್ತು ಎನ್.ಸಿ.ಕೇಲ್ಕರ್ ಅವರು ಸಂಘಟಿಸಿದ್ದರು. ಈ ಸಮಾರಂಭದಲ್ಲಿ ಸಾವರ್ಕರ್ ಅವರಿಗೆ ಒಂದು ನಿಧಿ ಸಮರ್ಪಿಸಲಾಯಿತು ಮತ್ತು ಗಮನಾರ್ಹ ಸಂಗತಿಯೆಂದರೆ, "ಶಂಕರಾಚಾರ್ಯ ಅವರು ತಮ್ಮ ಅನುಗ್ರಹದೊಂದಿಗೆ ಮಹಾನ್ ದೇಶಭಕ್ತನಿಗೆ ಒಂದು ಗೌರವದ ಉಡುಪನ್ನು ಕಳಿಸಿದ್ದರು".38

ಸಾವರ್ಕರ್ ಅವರ ಹಿಂದುತ್ವ ಕಾರ್ಯಸೂಚಿಯಲ್ಲಿ ಹೇಗೆ ದ್ವಂದ್ವಾರ್ಥ ಇರಲಿಲ್ಲವೋ ಹಾಗೆಯೇ ಬ್ರಿಟಿಷರ ತಂತ್ರಗಳಲ್ಲಿಯೂ ಕೂಡ ಅದಿರಲಿಲ್ಲ. ಅವರು ನಾಸಿಕ್‌ನಲ್ಲಿ ಇದ್ದಾಗಿನ ವಿವರಣೆಯಲ್ಲಿ ಕೀರ್ ಅವರು ಸಾವರ್ಕರ್ ಜೀವನಚರಿತ್ರೆಯಲ್ಲಿ ಅದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಕೀರ್ ಪ್ರಕಾರ:

> ಸಾವರ್ಕರ್ ಅವರು ಹಿಂದೂ ಸಮಾಜವನ್ನು ಮೇಲೆತ್ತುವ ತಮ್ಮ ಕಾರ್ಯವನ್ನು ನಾಸಿಕ್‌ನಲ್ಲಿಯೂ ಮಾಡಿದರು. ನಾಸಿಕ್‌ನಲ್ಲಿ ಅವರು ಉಳಿದುಕೊಂಡಿದ್ದಾಗ ಮಹರ್ ಹಿಂದೂಗಳನ್ನು ಆಘಾಖಾನಿ ಮೊಹಮ್ಮದರ ಪ್ರಲೋಭನೆಯಿಂದ ಕಾಪಾಡಿದರು. ಸರ್ಕಾರದ ಅನುಮತಿಯೊಂದಿಗೆ ಅವರು ಭಾಗೂರ್, ತ್ರ್ಯಂಬಕ್, ಯೇಲಾ ಹಾಗೂ ನಗರ್ ಗಳಿಗೆ ಭೇಟಿ ನೀಡಿದರು ಮತ್ತು ಅವರ ನೂತನ ಹಿಂದೂ ಸಂಘಟನಾತ್ಮಕ ಸಿದ್ಧಾಂತವನ್ನು ಜನರ ನಡುವೆ ಪ್ರಚಾರ ಮಾಡಿದರು.39

ರಾಜಕೀಯ ಚಟುವಟಿಕೆಗಳಿಗೆ ಕಾನೂನಿನ ನಿರ್ಬಂಧವಿದ್ದರೂ ಸಾವರ್ಕರ್ ಅವರು ತಮ್ಮ ಸಂಕುಚಿತ ಮನೋವೃತ್ತಿಯ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಿರಲಿಲ್ಲ. ಕೀರ್ ಮುಂದುವರಿದು ಹೇಳುತ್ತಾರೆ:

> ಸಾವರ್ಕರ್ ಅವರು ಕ್ರಮೇಣವಾಗಿ ಹಿಂದೂ ಮಹಾಸಭಾದ ಮೂಲಕ ಜನರಲ್ಲಿ ತಮ್ಮ ನೂತನ ಸಿದ್ಧಾಂತದ ಉಪದೇಶ ನೀಡಿದರು. ನೂತನ ಸಿದ್ಧಾಂತದ ಆವೇಶದೊಂದಿಗೆ ರತ್ನಗಿರಿಯ ಹಿಂದೂಗಳು ಶಕ್ತಿ, ಬಲವರ್ಧನೆ ಮತ್ತು ಐಕ್ಯತೆಯನ್ನು ಆರಾಧಿಸಲು ಶುರುಮಾಡಿದರು. ಅಂತಹ ಅಪ್ಪಟ ಹಿಂದೂ ಚಳುವಳಿಯು ಗಾಂಧೀವಾದಿ ಮುಸ್ಲಿಂಪರ ಉತ್ಸಾಹಿಗಳ ಮಾನಸಿಕ ಸ್ಥಿಮಿತತೆಯನ್ನು ಅಲುಗಾಡಿಸಿದ್ದು ಸ್ವಾಭಾವಿಕವಾಗಿತ್ತು.40

ಸಾವರ್ಕರ್ ಅವರು ಹಿಂದೂ ಕೋಮುವಾದವನ್ನು 'ಸರಿಯಾದದ್ದು' ಮತ್ತು ಹಿಂದೂ ಪ್ರತ್ಯೇಕತಾವಾದವನ್ನು 'ರಾಷ್ಟ್ರೀಯವಾದ' ಎಂದು ಸಮರ್ಥಿಸಿದರು; ಇಂತಹ ರಾಜಕೀಯ ಚಟುವಟಿಕೆಗಳನ್ನು ಯಾವುದೇ ತಡೆಯಿಲ್ಲದೆ ಮುಂದುವರಿಸಲು ಅವರಿಗೆ ಬ್ರಿಟಿಷರು ಏಕೆ ಅವಕಾಶ ಮಾಡಿಕೊಟ್ಟರು ಎನ್ನುವುದು ಬಹಳ ಬೇಗ ಸ್ಪಷ್ಟವಾಯಿತು. ಭಾರತದ ಸ್ವಾತಂತ್ರ್ಯ ಚಳುವಳಿಗೆ ಹಿಂದೂ–ಮುಸ್ಲಿಂ ಐಕ್ಯತೆ ತೀರಾ ಅಗತ್ಯವಿದ್ದ ಸಂದರ್ಭದಲ್ಲಿ ಹೆಚ್ಚೆಚ್ಚು ಹೊಸ ಹೊಸ ಸಂಘರ್ಷಗಳನ್ನು ಅಗೆದು ಹೊರತರಲಾಗುತ್ತಿತ್ತು. ಮಸೀದಿಗಳ ಎದುರಿನಲ್ಲಿ ಹಾಡುಗಳನ್ನು ನುಡಿಸಿ ಗಂಭೀರ ಘರ್ಷಣೆಗಳಿಗೆ ಕಾರಣವಾದ್ದನ್ನು ಮೊದಲು ರತ್ನಗಿರಿಯಲ್ಲಿ ನೋಡುವಂತಾಯಿತು. ಹಿಂದೂ–ಮುಸ್ಲಿಂ ಘರ್ಷಣೆಗಳಿಗೆ ಕಾರಣವಾಗುವ ಈ ನಿತ್ಯನೂತನ ಆವಿಷ್ಕಾರವು ನಂತರದಲ್ಲಿ ಎಂದೆಂದಿಗೂ ಎರಡು ಕೋಮುಗಳ ನಡುವಿನ ಕೋಮು ಗಲಭೆಗಳಿಗೆ ಕಾರಣವಾದವು. ಮಸೀದಿಗಳಲ್ಲಿ ಪ್ರಾರ್ಥನೆ ನಡೆಯುತ್ತಿರುವಾಗ ಹಾಡುಗಳನ್ನು ನುಡಿಸುವ ಹಿಂದೂ ಚಳುವಳಿಯ ಮುಂಚೂಣಿಯಲ್ಲಿ ಸಾವರ್ಕರ್ ಇರುತ್ತಿದ್ದರು.

ಸಾರ್ವಜನಿಕವಾಗಿ ಶುದ್ಧಿಗೊಳಿಸುವ ಅಥವಾ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರನ್ನು ಹಿಂದೂಗಳಾಗಿ ಮತಾಂತರಗೊಳಿಸುವ ಕ್ರಿಯೆಗಳು ಎಲ್ಲಾ ಧರ್ಮೀಯರನ್ನು ಒಂದುಗೂಡಿಸುವ ಸಂಯುಕ್ತ ಸ್ವಾತಂತ್ರ್ಯ ಚಳುವಳಿಯ ಪ್ರಯತ್ನಗಳಿಗೆ ಭಾರಿ ಹಾನಿಯನ್ನು ಉಂಟುಮಾಡಿದವು. ಬ್ರಿಟಿಷ್ ದೊರೆಗಳಿಗೆ ತೀರಾ ಅಪ್ಯಾಯಮಾನವಾದ ಈ ವಿಷಯವು ಅಂತಿಮವಾಗಿ 1920 ರ ಅಸಹಕಾರ ಚಳುವಳಿಯ ಚೈತನ್ಯವನ್ನೇ ಉಡುಗಿಸಿದ ನಂಜಾಗಿ ಪರಿಣಮಿಸಿತು. 'ಮರುಮತಾಂತರವು (ಶುದ್ಧಿಯು) ಹಿಂದೂ ಸಮಾಜವನ್ನು ಒಟ್ಟುಮಾಡಿತು ಮತ್ತು ಬಲಪಡಿಸಿತು' ಎಂದು ಸಾವರ್ಕರ್ ನಂಬಿದರು.41 "ಸಂಘಟನಾವಾದದ ಮೂಲ ಸ್ರೋತವಾದ ಶುದ್ಧಿ ಅಥವಾ ಮರುಮತಾಂತರ ಚಳುವಳಿಯು ರತ್ನಗಿರಿಯಲ್ಲಿ ಸಾವರ್ಕರ್ ಅವರಿಂದಲೇ ಉದ್ಘಾಟನೆಗೊಂಡಿತು ಮತ್ತು ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲೂ ಉತ್ಕಟ ಮಟ್ಟ ತಲುಪಿತು"42 ಎನ್ನುವುದನ್ನೂ ಕೂಡ ನಾವು ಕೀರ್ ಅವರಿಂದ ತಿಳಿಯುತ್ತೇವೆ. ಸಾವರ್ಕರ್ ಶುದ್ಧಿ ಚಳುವಳಿಯನ್ನು 'ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲೂ' ನಡೆಸಿದರು ಎನ್ನುವುದನ್ನು, ಇಂತಹ ಸಂಕುಚಿತ ಮನೋವೃತ್ತಿಯ ಚಳುವಳಿಗಳು ಸಮಕಾಲೀನ ರಾಷ್ಟ್ರೀಯ ರಾಜಕೀಯ ದೃಶ್ಯವನ್ನು ಕೋಮುವಾದೀಕರಣಗೊಳಿಸುವಲ್ಲಿ ಯಶಸ್ವಿಯಾದವು ಮತ್ತು ಇದರಲ್ಲಿ ಕೋಮುವಾದಿ ಗುಂಪುಗಳ ನಡುವಿನ ಪೈಪೋಟಿ ಒಂದು ಸಂಯುಕ್ತ ಸ್ವಾತಂತ್ರ್ಯ ಹೋರಾಟಕ್ಕೆ ಅವಕಾಶವೇ ಇಲ್ಲದಂತೆ ಮಾಡಿತು ಎಂಬ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು.

ತೋರಿಕೆಗೆ, ಸಾವರ್ಕರ್ ಅವರ ಚಟುವಟಿಕೆಗಳಿಗೆ ನಿರ್ಬಂಧವಿತ್ತಾದರೂ, ಅವರ ಸಂಕುಚಿತ ಮನೋವೃತ್ತಿಯ ಹಿಂದೂ ಪ್ರತ್ಯೇಕತಾವಾದಿ ಚಟುವಟಿಕೆಗಳಿಗೆ ನಿರ್ಬಂಧ ಇರಲೇ ಇಲ್ಲ. ಅಷ್ಟೇ ಅಲ್ಲದೆ, ಅವರು ಗಾಂಧಿಯ "ಹಿಂದೂ–ಮುಸ್ಲಿಂ ಐಕ್ಯತೆಯ ಗೀಳಿನ" ವಿರುದ್ಧ ನಿಯತಕಾಲಿಕವಾಗಿ ಬರೆಯುತ್ತಾ ಹೋದರು ಮತ್ತು ಮೋತಿಲಾಲ್ ನೆಹರೂರವರನ್ನು ಕೂಡ ಅವರು ಬಿಡಲಿಲ್ಲ".43 ಕೀರ್ ಅವರು ಮುಂದುವರಿದು ಹೇಳುತ್ತಾರೆ:

> ಸಾವರ್ಕರ್ ಅವರು ರತ್ನಗಿರಿಯಲ್ಲಿ ಉಳಿದುಕೊಂಡಿದ್ದು ಅಖಿಲ ಭಾರತ ಮಟ್ಟದಲ್ಲಿ ಪ್ರಸಿದ್ಧರಾದ ಹಲವಾರು ಪಂಡಿತರನ್ನು ಮತ್ತು ದೇಶಪ್ರೇಮಿಗಳನ್ನು ಆಕರ್ಷಿಸಿತ್ತು. ಆರಂಭದ ದಿನಗಳಲ್ಲಿ ಭೇಟಿಯಾದ ಮೊದಲಿಗರಲ್ಲಿ ಆರ್.ಎಸ್.ಎಸ್.ನ ಮಹಾನ್ ಸಂಸ್ಥಾಪಕರಾದ ಡಾ.ಕೆ.ಬಿ.ಹೆಡ್ಗೆವಾರ್. ಮಾರ್ಚ್ 1925 ರಲ್ಲಿ ಶಿರ್‌ಗ್ಗಾಂವ್‌ನಲ್ಲಿ ಅವರಿಬ್ಬರ ಸಂದರ್ಶನ ನಡೆಯಿತು. ಸಾವರ್ಕರ್ ಅವರ ಮೌಲಿಕವಾದ ಕೃತಿ ಹಿಂದುತ್ವ ಆಗ ತಾನೆ ಬಿಡುಗಡೆಯಾಗಿತ್ತು; ಅದು ಹಿಂದು ರಾಷ್ಟ್ರೀಯವಾದದ ತತ್ವಗಳನ್ನು ಹಾಗೂ ಹಿಂದೂ ರಾಷ್ಟ್ರದ ಪರಿಕಲ್ಪನೆಯನ್ನು ನೀಡಿತ್ತು; ಮತ್ತು ಮಹಾನ್ ಬುದ್ಧಿಶಾಲಿಗಳ ಹಾಗೂ ಮಹಾನ್ ಹೃದಯವಂತರ ಮನಸೂರೆಗೊಂಡಿತ್ತು ಹಾಗೂ ಹುರಿದುಂಬಿಸಿತ್ತು.44

ಬ್ರಿಟಿಷರಿಗೆ ಸಹಾಯ ಮಾಡುವ ಮೂಲಕ ಸಾವರ್ಕರ್
ಭಾರತ ಬಿಟ್ಟು ತೊಲಗಿ ಚಳುವಳಿಗೆ ದ್ರೋಹ ಬಗೆದರು

1942 ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಸಾವರ್ಕರ್ ನೇತೃತ್ವದ ಹಿಂದೂ ಮಹಾಸಭಾವು ತೀರಾ ವಿಶ್ವಾಸದ್ರೋಹದ ಹಾಗೂ ವಿಚ್ಛಿದ್ರಕಾರಿ ಪಾತ್ರವನ್ನು ವಹಿಸಿತ್ತು. ಕಾಂಗ್ರೆಸ್ ಕಾರ್ಯಕರ್ತರು ಮತ್ತು ಬಹಳ ದೊಡ್ಡ ಸಂಖ್ಯೆಯಲ್ಲಿ ಭಾರತದ ಜನಸಮುದಾಯವು ವಸಾಹತುಶಾಹಿ ದೊರೆಗಳ ಅಪರಿಮಿತ ದಮನ ಎದುರಿಸುತ್ತಿದ್ದಾಗ ಮತ್ತು ಸರ್ಕಾರದ ಸಂಸ್ಥೆಗಳನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾಗ, ಬ್ರಿಟಿಷ್ ದೊರೆಗಳ ಜತೆ ಸಹಕರಿಸಲು ಹಿಂದೂ ಮಹಾಸಭಾ ತೀರ್ಮಾನ ಮಾಡಿತು. 1942 ರಲ್ಲಿ ಕಾನ್ಪುರದಲ್ಲಿ ನಡೆಯುತ್ತಿದ್ದ ಹಿಂದೂ ಮಹಾಸಭಾದ 24 ನೇ ಅಧಿವೇಶನದಲ್ಲಿ ಹಿಂದೂ ಮಹಾಸಭಾವು ಬ್ರಿಟಿಷ್ ದೊರೆಗಳೊಂದಿಗೆ ಸಹಕರಿಸುವ ತಂತ್ರಗಾರಿಕೆಯ ರೂಪರೇಷೆಯನ್ನು ಸಾವರ್ಕರ್ ಅವರು ಹೀಗೆ ವಿವರಿಸಿದರು:

> ಎಲ್ಲಾ ಪ್ರಾಯೋಗಿಕ ರಾಜಕೀಯದ ಪ್ರಮುಖ ತತ್ವವಾದ ಸ್ಪಂದನಶೀಲ ಸಹಕಾರದ ನೀತಿಯನ್ನು ಹಿಂದೂ ಮಹಾಸಭಾವು ಪಾಲಿಸುತ್ತದೆ. ಮತ್ತು ಅದರ ಆಧಾರದಲ್ಲಿ, ಹಿಂದೂ ಸಂಘಟನಾವಾದಿಗಳಾದ ಎಲ್ಲರೂ, ಕೌನ್ಸಿಲರುಗಳು, ಸಚಿವರು, ಶಾಸಕರು ಮತ್ತು ಯಾವುದೇ ಮುನಿಸಿಪಲ್ ಅಥವಾ ಯಾವುದೇ ಸಾರ್ವಜನಿಕ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಅಂತಹ ಸರ್ಕಾರಿ ಅಧಿಕಾರದ ಕೇಂದ್ರಗಳನ್ನು ಹಿಂದೂಗಳ ರಕ್ಷಣೆಗಾಗಿ ಮತ್ತು ಅವರ ನ್ಯಾಯಯುತ ಹಿತಾಸಕ್ತಿಯನ್ನು ಪ್ರೋತ್ಸಾಹಿಸಲು ಕೂಡ, ಬೇರೆಯವರ ಹಿತಾಸಕ್ತಿಗಳಿಗೆ ಧಕ್ಕೆ ಬರದಂತೆ, ಬಳಸಿಕೊಳ್ಳುವ ದೃಷ್ಟಿಕೋನ ಹೊಂದಿರುವವರು ನಮ್ಮ ದೇಶಕ್ಕೆ

ಪುಟ 4 ಕ್ಕೆ

ಮಿಥ್ಯೆ 1 –'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎನ್ನುವ ಹಿಂದುತ್ವ ಪ್ರಚಾರಕರ ಮಿಥ್ಯೆಯನ್ನು ಪರಿಶೀಲಿಸುತ್ತ ಕಾಲಾಪಾನಿ ಅಥವಾ ಕರಿನೀರು ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ ಗೂಡಿನಂತಿರುವ ಸಣ್ಣ ಕೋಣೆಯಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎನ್ನುವ ಲೇಖಕರು, ಸೆಲ್ಯುಲರ್ ಜೈಲು ಅಂದರೆ ಕೇವಲ ಸಾವರ್ಕರ್ ಕತೆ ಅಲ್ಲ ಎನ್ನುತ್ತಾರೆ. ಸ್ವತಃ ಸಾವರ್ಕರ್ ತಮ್ಮ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. ಆದರೆ ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅವರು ಅಲ್ಲಿ ಪಡಬೇಕಾದ ಘೋರ ಯಾತನೆಯಿಂದ ಸಂಪೂರ್ಣವಾಗಿ ಕುಗ್ಗಿದ ಅವರು ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿ ಈಗ ಉಳಿಯಲಿಲ್ಲ.. ತಮ್ಮ ರಾಜಕೀಯ ಬದುಕಿನ ಎರಡನೇ ಘಟ್ಟದಲ್ಲಿ ನವಂಬರ್ 14, 1913 ರಂದು ಸಾವರ್ಕರ್ ಸ್ವತಃ ಒಂದು ಕ್ಷಮಾಯಾಚನೆಯ ಅರ್ಜಿಯನ್ನು ಸಲ್ಲಿಸಿದರು. ಅಸಹಕಾರ ಚಳುವಳಿ ಮತ್ತು ಖಿಲಾಫತ್ ಚಳುವಳಿಯ ಸಂದರ್ಭದಲ್ಲಿನ ಹಿಂದೂ-ಮುಸ್ಲಿಂ ಐಕ್ಯತೆಯು ಬ್ರಿಟಿಷ್ ದೊರೆಗಳನ್ನು ಗಲಿಬಿಲಿಗೊಳಿಸಿದ್ದರಿಂದಾಗಿ ಸಾವರ್ಕರ್ ಅಂಥವರ ಕೋಮುವಾದಿ ಹಸ್ತಕ್ಷೇಪಗಳು ಕೋಮುವಾದಿ ವಿಭಜನೆಗಳನ್ನು ಹೆಚ್ಚು ಮಾಡುವಲ್ಲಿ ಅವರಿಗೆ ಸಹಾಯಕವಾಗಿದ್ದ ಮುಸ್ಲಿಂ-ವಿರೋಧಿ ಸಿದ್ಧಾಂತವನ್ನು ಬೆಳೆಸಿದ್ದಕ್ಕಾಗಿ ಸಾವರ್ಕರ್ ಅವರನ್ನು ಪುರಸ್ಕರಿಸಬೇಕೆಂದು ಬ್ರಿಟಿಷರು ನಿರ್ಧರಿಸುತ್ತಾರೆ ಮತ್ತು ಅದಕ್ಕಾಗಿಯೇ ಸಾವರ್ಕರ್ ಅವರನ್ನು ಬಿಡುಗಡೆ ಮಾಡುತ್ತಾರೆ. ಎನ್ನುವುದನ್ನು ಯಾರೂ ಅರ್ಥಮಾಡಿಕೊಳ್ಳಬಲ್ಲರು.

ಸಂಪಾದಕೀಯ

ಗಡಿ ಉದ್ವಿಗ್ನತೆ: ಸಂಕುಚಿತ ರಾಜಕಾರಣ ಸಲ್ಲದು

ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವಿನ ಗಡಿ ವಿವಾದ ತ್ವೇಷ ಮತ್ತೊಮ್ಮೆ ರಾಜಕೀಯ ಹಿತಾಸಕ್ತಿಗಳ ತೆರೆಗೆ ಬಂದಿದೆ. ಗಡಿಭಾಗದ ಅದರಲ್ಲೂ ಬೆಳಗಾಂ ಜಿಲ್ಲೆಯಲ್ಲಿರುವ ಸುಮಾರು 814 ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಬೇಡಿಕೆಯನ್ನು ಮಹಾರಾಷ್ಟ್ರ ಸರ್ಕಾರ ಮಂಡಿಸುತ್ತಾ ಬಂದಿದೆ. ಕರ್ನಾಟಕ ಸರಕಾರ ಇದನ್ನು ನಿರಾಕರಿಸಿದೆ. ಗಡಿ ವಿವಾದ ಈ ಹಿಂದೆಯೇ ಇತ್ಯರ್ಥವಾದ ವಿಷಯವಾಗಿದ್ದು ನ್ಯಾ. ಮಹಾಜನ್ ಆಯೋಗದ ವರದಿಯನ್ನು ಒಪ್ಪಿಯಾದ ಮೇಲೆ ವಿವಾದದ ಅಗತ್ಯ ಇಲ್ಲ ಎಂದು ಕರ್ನಾಟಕ ಪ್ರತಿಪಾದಿಸಿದೆ. ಈ ವಾದ– ವಿವಾದ ಹಳೆಯದು. ಮತ್ತು ಇದು ಸರ್ವೋಚ್ಚ ನ್ಯಾಯಾಲಯದ ಮುಂದಿದೆ ಕೂಡ. ಹೀಗಿದ್ದರೂ ಅಧಿಕಾರದಲ್ಲಿರುವವರಿಗೆ ಏನಾದರೂ ತೀವ್ರ ಬಿಕ್ಕಟ್ಟುಗಳು, ಹಗರಣಗಳು ಎದುರಾದಾಗಲೆಲ್ಲ ಗಡಿ ವಿವಾದದಂತಹ ಪ್ರಶ್ನೆಗಳನ್ನು ಮತ್ತೆ ಎತ್ತಿ ಉದ್ವಿಗ್ನತೆ ಉಂಟುಮಾಡುವುದು ಹೊಸದೇನಲ್ಲ. ಇದನ್ನು ಜನರ ಗಮನ ಬೇರೆಡೆಗೆ ಸೆಳೆಯುವ ಸುಲಭದ ತಂತ್ರವನ್ನಾಗಿ ಮಾಡಿಕೊಳ್ಳಲಾಗಿದೆ. ಈಗಲೂ ಕಳೆದ ಸುಮಾರು ಎರಡು ವಾರಗಳಿಂದ ಗಡಿ ಪ್ರದೇಶದಲ್ಲಿ ಒಂದಿಲ್ಲೊಂದು ರೀತಿಯ ಗಲಾಟೆ, ಉದ್ವಿಗ್ನತೆ ನಡೆಯುತ್ತಲೇ ಬಂದಿವೆ. ಗಡಿ ಭಾಗದ ಕೆಲವರ ಮೇಲೆ ಹಲ್ಲೆಗಳು ನಡೆದಿವೆ. ಬಸ್ ಗಳ ಸಂಚಾರಕ್ಕೆ ವ್ಯತ್ಯಯವಾಗಿದೆ. ವಾಹನಗಳಿಗೆ ಮತ್ತು ಒಂದಿಷ್ಟು ಆಸ್ತಿಗೆ ಹಾನಿಯೂ ಸಂಭವಿಸಿದೆ. ಇವು ಅತ್ಯಂತ ಅನಪೇಕ್ಷಿತ, ನಡೆಯಬಾರದ ಘಟನೆಗಳಾಗಿವೆ. ಭಾರತದ ಒಕ್ಕೂಟದ ಎರಡು ರಾಜ್ಯಗಳೇ ಆಗಿರುವ, ಕರ್ನಾಟಕ ಮಹಾರಾಷ್ಟ್ರ ನೆರೆಹೊರೆ ರಾಜ್ಯಗಳ ಜನತೆ ಹೀಗೆ ಬಡಿದಾಡುವುದು ಐಕ್ಯತೆಗೆ ಮಾರಕ. ಇಂತಹ ಕೃತ್ಯಕ್ಕೆ ಎಳಸುವ ಯಾರೇ ಆಗಲಿ ಖಂಡನಾರ್ಹರು, ದಂಡನಾರ್ಹರು.

ಬಾಂಬೆ ಪ್ರೆಸಿಡೆನ್ಸಿ ಯ ಭಾಗವಾಗಿದ್ದ ಬೆಳಗಾವಿ 1957 ರಿಂದ ಭಾಷಾವಾರು ಪ್ರಾಂತ್ಯಗಳ ರಚನೆಯ ಭಾಗವಾಗಿ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾಯಿತು. ಈ ಇಡೀ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಮಹಾರಾಷ್ಟ್ರ ಸರಕಾರ ಒತ್ತಾಯಿಸಿತು. ಅದಕ್ಕಾಗಿ ಆಯೋಗ ಒಂದನ್ನು ರಚಿಸಬೇಕು ಎಂಬ ಬೇಡಿಕೆಯ ಹಿನ್ನೆಲೆಯಲ್ಲಿ ಅಂದಿನ ಭಾರತ ಸರ್ಕಾರ ಸುಪ್ರೀಂಕೋರ್ಟಿನ ನ್ಯಾಯಮೂರ್ತಿ ಮಹಾಜನ್ ಅವರ ನೇತೃತ್ವದಲ್ಲಿ 1960 ಜುಲೈ 5 ರಂದು ಆಯೋಗವನ್ನು ರಚಿಸಿತು. ನಾಲ್ಕು ತಜ್ಞ ಸದಸ್ಯರ ಈ ಆಯೋಗ 1967 ಆಗಸ್ಟ್ ತಿಂಗಳಿನಲ್ಲಿ ನೀಡಿದ ವರದಿಯಲ್ಲಿ ಬೆಳಗಾವಿಯು ಮೈಸೂರು ರಾಜ್ಯದಲ್ಲಿ ಉಳಿಯಬೇಕು ಎಂದು ಹೇಳಿತು. ಅದರಂತೆ ಬೆಳಗಾವಿ ಕರ್ನಾಟಕದ ಭಾಗವಾಗಿಯೇ ಇದೆ. ಆದರೆ ಮಹಾರಾಷ್ಟ್ರ ಸರ್ಕಾರ ಇದನ್ನು ವಿರೋಧಿಸುತ್ತಲೇ ಇದೆ.

ದೇಶದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗೆ ಭಾರತ ಸರ್ಕಾರ ಇರಿಸಿಕೊಂಡಿದ್ದ ಮಾನದಂಡಗಳನ್ನು ಅಂದೇ ಹಲವರು ಪ್ರಶ್ನಿಸಿದ್ದರು ಎನ್ನುವುದು ನಿಜ. ತಾಲೂಕನ್ನು ಒಂದು ಘಟಕವಾಗಿ ಇರಿಸಿಕೊಳ್ಳಬೇಕೇ ಅಥವಾ ಒಂದು ಗ್ರಾಮವನ್ನೇ ಎಂಬ ವಿಷಯದಲ್ಲಿ ತಾಲೂಕನ್ನು ಆಧಾರವಾಗಿರಿಸಿದ್ದು ಪ್ರಶ್ನಿತವಾಗಿತ್ತು. ಭಾಷಾವಾರು ಪ್ರಾಂತ್ಯಗಳ ರಚನೆಗೆ ಹೋರಾಟ ನಡೆಸಿದ್ದ ಅಂದಿನ ಅವಿಭಜಿತ ಭಾರತ ಕಮ್ಯೂನಿಸ್ಟ್ ಪಕ್ಷವು ಗ್ರಾಮವನ್ನು ಒಂದು ಘಟಕವಾಗಿ ಪರಿಗಣಿಸಬೇಕೆಂದು, ಅದು ವೈಜ್ಞಾನಿಕ ಮಾನದಂಡವೆಂದು ಖಚಿತ ಅಭಿಪ್ರಾಯ ನೀಡಿತ್ತು. ಅಭಿಪ್ರಾಯಗಳು ಹಲವಿದ್ದರೂ ಅಂತಿಮವಾಗಿ ಒಂದು ಮಾನದಂಡದಡಿ ಪ್ರಾಂತ್ಯಗಳ ರಚನೆ ಆಗಿದೆ. ಹೀಗಾಗಿ ಗಡಿ ವಿವಾದಗಳು ಕೇವಲ ಮಹಾರಾಷ್ಟ್ರ, ಕರ್ನಾಟಕ ಮಾತ್ರವಲ್ಲ ದೇಶದ ಇತರಡೆಗಳಲ್ಲಿಯೂ ಉಳಿದುಕೊಂಡು ಬಂದಿವೆ. ಆದರೆ ಒಂದು ಇತ್ಯರ್ಥಕ್ಕೆ ಬಂದ ನಂತರ ಅದನ್ನು ಕೆದಕುವುದು, ವಿವಾದವಾಗಿ ಉದ್ರೇಕಿಸುವುದು ಉಭಯಭಾಷಿಕ ಜನತೆಯನ್ನು ಎತ್ತಿ ಕಟ್ಟಿ ವಿಭಜಿಸುವುದು ಸರಿಯಲ್ಲ. ಅಂತಹ ಪ್ರಯತ್ನಗಳ ಹಿಂದೆ ಕುತಂತ್ರ ಅಡಗಿದೆ. ಇದಕ್ಕೆ ಆಸ್ಪದವನ್ನು ಯಾರೂ ಕೊಡಬಾರದು. ಒಂದು ವೇಳೆ ಅಂತಹ ಗಡಿ ಇತ್ಯರ್ಥದ ಪುನರಾವಲೋಕನ ಆಗಬೇಕಾದಲ್ಲಿ ಅದು ಅಖಿಲ ಭಾರತ ಮಟ್ಟದಲ್ಲಿಯೇ ಆಗಬೇಕಾದ ಒಂದು ಕೆಲಸ ಎನ್ನುವುದನ್ನೂ ಮರೆಯಬಾರದು. ಗಡಿಗಳನ್ನು ಪುನರ್ ನಿರ್ಧರಿಸಲು ತೊಡಗುವುದು ಇಂದಿನ ವಾಸ್ತವ ಪರಿಸ್ಥಿತಿಯಲ್ಲಿ ಜೇನುಗೂಡಿಗೆ ಕೈ ಹಾಕಿದಂತೆ ಆಗಬಹುದು ಎನ್ನುವ ಎಚ್ಚರವೂ ಅಗತ್ಯ. ಹಾಗಾಗಿ ಇರುವ ಸಮಸ್ಯೆಗಳ ಬಗ್ಗೆ ಒಂದು ಸರ್ವ ಸಮ್ಮತ ಪರ್ಯಾಯ ಪರಿಹಾರದ ಕ್ರಮಗಳತ್ತ ಚಿಂತಿಸುವುದು ಅಗತ್ಯ ಎನಿಸುತ್ತದೆ. ರಾಜ್ಯಗಳ ಮರುವಿಂಗಡಣೆ ಕಾಯ್ದೆ ಮತ್ತು 1967 ರ ಮಹಾಜನ್ ಆಯೋಗದ ವರಿದಿಯ ಪ್ರಕಾರ ಭಾಷಾವಾರು ಅಂಶಗಳ ಮೇಲೆ ಮಾಡಿದ ಗಡಿರೇಖೆಯನ್ನು ಕರ್ನಾಟಕವು ಪಾಲಿಸುತ್ತಿದೆ.

ಇಂದು ಗಡಿ ವಿವಾದವನ್ನು ಕೆದಕುವುದರಲ್ಲಿ ಸಂಕುಚಿತ ರಾಜಕೀಯ ಹಿತಾಸಕ್ತಿಗಳು ಪ್ರಬಲವಾಗಿರುವುದು ಇರುವುದು ಕಟು ವಾಸ್ತವ. ಆದರೆ ಆ ಭಾಗದಲ್ಲಿ ವಾಸಿಸುವ ಜನತೆಗೆ ಕೆಲವು ಗಂಭೀರ ಜ್ವಲಂತ ಸಮಸ್ಯೆಗಳಿರುವುಸುದೂ ಕೂಡ ಅಷ್ಟೇ ಸತ್ಯ. ಇದನ್ನು ತಳ್ಳಿ ಹಾಕುವುದು ಅಸಾಧ್ಯ. ಇಂತಹ ಹಿಂದುಳಿದಿರುವಿಕೆ, ನಿರ್ಲಕ್ಷ್ಯದಿಂದಾದ ಅತೃಪ್ತಿಯನ್ನು ವಿವಿಧ ರಾಜಕೀಯ ಹಿತಾಸಕ್ತಿಗಳು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಸಂವಿಧಾನಬದ್ಧವಾಗಿ ಅಧಿಕಾರಕ್ಕೆ ಬಂದ ರಾಜ್ಯ ಸರ್ಕಾರಗಳು ಹಾಗೂ ಭಾರತದ ಒಕ್ಕೂಟದ ಸರ್ಕಾರ ಗಡಿಭಾಗದ ಜನತೆಯ ವಿರೋಧಿ ಮನಸ್ಥಿತಿಯನ್ನೂ ಮತ್ತು ಬದುಕಿನ, ಭಾಷೆಯ, ಪ್ರಗತಿಯ ಪ್ರಶ್ನೆಗಳನ್ನು ಇತ್ಯರ್ಥ ಪಡಿಸಿ ಬೆಸೆಯುವ ಕಾರ್ಯಕ್ಕೆ ತೊಡಗಬೇಕು. ಆದರೆ ಈ ದೆಸೆಯಲ್ಲಿ ಈ ಸರ್ಕಾರಗಳು ವಿಫಲವಾಗಿವೆ. ಹಾಗೂ ವಿವಾದವನ್ನು ಜೀವಂತವಾಗಿ ಇರಿಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಿವೆ ಎಂಬುದು ನಿಚ್ಚಳ. ಇದು ದೇಶದ ಐಕ್ಯತೆ ಸಮಗ್ರತೆಗೆ ಅಪಾಯಕಾರಿಯಾಗಿದೆ.

ಈ ಸಲದ ವಿವಾದ ಹೊತ್ತಿಕೊಳ್ಳಲು ಅಂತಹ ಯಾವುದೇ ಗಂಭೀರ ಕಾರಣಗಳಿರಲಿಲ್ಲ. ಮೇಲಾಗಿ ಎರಡು ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿಯೂ ಬಿಜೆಪಿ ಪಕ್ಷದ ಅಧಿಕಾರವೇ ಇದೆ. ಅಂತಹ ಗಂಭೀರ ಸಮಸ್ಯೆಗಳು ಉದ್ಭವಿಸಿದಲ್ಲಿ ಆ ಬಗ್ಗೆ ಪರಸ್ಪರ ಚರ್ಚಿಸಿ ಸೌಹಾರ್ದಯುತವಾಗಿ ಪರಿಹಾರೋಪಾಯವನ್ನು ಕಂಡುಕೊಂಡು ಇತ್ಯರ್ಥ ಪಡಿಸಿಕೊಳ್ಳಬಹುದು. ಆದರೆ ಹೀಗೆ ಮಾಡದೆ ಮಹಾರಾಷ್ಟ್ರ ಕರ್ನಾಟಕದ ಮುಖ್ಯಮಂತ್ರಿಗಳು, ಮಂತ್ರಿಗಳು ಪರಸ್ಪರ ವೀರಾವೇಶದಿಂದ ಮಾತನಾಡಿದ ಪುರುಷಾರ್ಥವೇನು? ಈಗಾಗಲೇ ಹತ್ತಾರು ಹಗರಣ, ವ್ಯಾಪಕ ಭ್ರಷ್ಟಾಚಾರ, ಮತಾಂದತೆಯ ಉದ್ವಿಗ್ನತೆ, ಆಡಳಿತದ ವೈಫಲ್ಯ, ಹೀಗೆ ಎಲ್ಲ ರಂಗಗಳಲ್ಲಿಯೂ ಕುಸಿದಿರುವ ರಾಜ್ಯದ ಬಿಜೆಪಿ ಸರ್ಕಾರ ಚುನಾವಣೆ ಹೊಸ್ತಿಲಿನಲ್ಲಿ ಮತ ಸೆಳೆಯುವ, ಪಿ.ಎಸ್.ಐ, ಚುನಾವಣೆಯ ಅಕ್ರಮಗಳು, ಮುಂತಾದ ಹಗರಣಗಳಿಂದ ಪುಟ 4 ಕ್ಕೆ

ನೀಲಿ ಅಲೆಯ ಪ್ರತಿರೋಧ

ಈ ವಾರ

ಎಸ್.ವೈ. ಗುರುಶಾಂತ್

ಭಾರತ ರತ್ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪರಿನಿರ್ವಾಣದ ದಿನವಾದ ಡಿಸೆಂಬರ್ 6 (2022) ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಮೈದಾನದಲ್ಲಿ ಜರುಗಿದ 'ದಲಿತ ಸಾಂಸ್ಕೃತಿಕ ಪ್ರತಿರೋಧ' ದ ರಾಜ್ಯ ಸಮಾವೇಶ ಗಮನಾರ್ಹವಾಗಿದೆ. ದಲಿತ ಚಳುವಳಿಯ ಹತ್ತು ವಿವಿಧ ಸಂಘಟನೆಗಳು ಒಡಗೂಡಿದ ದಲಿತ ಸಂಘರ್ಷ ಸಮಿತಿಗಳ ದಲಿತ ಐಕ್ಯ ಹೋರಾಟ ಚಾಲನಾ ಸಮಿತಿಯ ನೇತೃತ್ವದ ಬೃಹತ್ ಸಮಾವೇಶದಲ್ಲಿ ಸಹಸ್ರ, ಸಹಸ್ರ ಸಂಖ್ಯೆಯಲ್ಲಿ ಜನತೆ ಭಾಗವಹಿಸಿ ಸಮಾವೇಶದ ಆಶಯಕ್ಕೆ ಬಲ ತುಂಬಿದ 'ನೀಲಿ ಅಲೆ' ಉಲ್ಲೇಖನೀಯ.

ಸಮಾವೇಶ ಕೈಗೊಂಡ ಹದಿನೈದು ನಿರ್ಣಯಗಳು ಮತ್ತು ಸಾಗುವ ಗುರಿ ಮುಂದಿನ ಚಳುವಳಿಯ ಮಾರ್ಗಸೂಚಿಗಳು. ವಿಶೇಷವಾಗಿ, ಈ ಸಮಾವೇಶದಲ್ಲಿ 'ಕೋಮುವಾದಿ ಶಕ್ತಿಗಳು ಮತ್ತು ರಾಜಕೀಯ ಪಕ್ಷಗಳ ಜತೆಗಿನ ನಂಟು ಕಡಿದುಕೊಂಡು ಬರುವವರಿಗೆ ಸ್ವಾಗತವಿದೆ' ಎನ್ನುವ ನಿಲುವು ದಲಿತ ಸಂಘಟನೆಗಳು ವಿಶಾಲ ನೆಲೆಯ ಅದರಲ್ಲೂ ಆಂದೋಲನದ ಸ್ವರೂಪವನ್ನು ಕಾಯ್ದುಕೊಳ್ಳುವುದಕ್ಕೆ ಆದ್ಯತೆ ನೀಡುವ ಇಂಗಿತವಿದೆ. ಇಂದು ಕೋಮುವಾದಿ ಫ್ಯಾಶಿಸ್ಟ್ ಶಕ್ತಿಗಳು ಪ್ರಜಾಸತ್ತಾತ್ಮಕ, ಮತನಿರಪೇಕ್ಷಿತ ಗಣರಾಜ್ಯವಾದ ಭಾರತವನ್ನು, ಭಾರತದ ಸಂವಿಧಾನವನ್ನು ಬುಡಮೇಲು ಮಾಡಿ ಮನುಸ್ಮೃತಿಯನ್ನು ಹೇರಲು ಹವಣಿಸುತ್ತಿರುವಾಗ ಇಂತಹ ಅಪಾಯಕಾರಿ ಶಕ್ತಿಗಳ ವಿರುದ್ಧದ ಹೋರಾಟವನ್ನು ಸ್ಪಷ್ಟ ನಿಲುವಿನೊಂದಿಗೆ ಬಲಗೊಳಿಸಿ ಎಲ್ಲಾ ಶಕ್ತಿಯನ್ನು ಕ್ರೋಢೀಕರಿಸಿ ಇನ್ನಷ್ಟು ಹರಿತಗೊಳಿಸುವುದು ಮಹತ್ವದ ಹೆಜ್ಜೆ.

ಒಟ್ಟಾರೆ ಈ ಸಮಾವೇಶದ ಆಶಯ, ನಿಲುವುಗಳು ಪಕ್ಷಗಳ ನಂಟಿನಿಂದ ಆಚೆಗೆ ನಿಂತಿರುವಾಗಲೂ ವಿಶಾಲ ಅರ್ಥದಲ್ಲಿ ರಾಜಕೀಯ ಚಿಂತನೆಗಳ ಹೊರತೇನಲ್ಲ. ಹಿಂದೆಲ್ಲಾ ದಲಿತ ಸಂಘಟನೆಗಳ ನಡುವೆ ಒಂದು ನಿರ್ಣಾಯಕ ಸಂದರ್ಭದಲ್ಲಿ ರಾಜಕೀಯ ಪ್ರವೇಶ, ಚುನಾವಣಾ ಸ್ಪರ್ದೆ ಮತ್ತು ರಾಜಕೀಯ ಸವಾಲು ಎದುರಿಸುವಲ್ಲಿ ನಿರ್ವಹಿಸಬೇಕಾದ ಕರ್ತವ್ಯದ ಸ್ವರೂಪ ಮುಂತಾದ ವಿಷಯಗಳಲ್ಲಿ ಗಂಭೀರ ನಿರ್ಣಾಯಕ ನಿಲುವು ತೆಗೆದುಕೊಂಡ ಅನುಭವ ಇದೆ. ಈ ಅಂಶಗಳು ಸಂಘಟನೆಯೊಳಗೆ ಬಿಕ್ಕಟ್ಟಿಗೂ ಕಾರಣವಾಗಿದ್ದೂ ಇದೆ. ರೈತ ಚಳುವಳಿಯೂ ಇಂತಹುದೇ ಪ್ರಶ್ನೆಯನ್ನು ಎದುರಿಸಿದೆ. ವಿಘಟನೆಗೂ ಕಾರಣವಾಗಿದೆ. ಪಕ್ಷ ರಾಜಕಾರಣದ ಹೊರತಾಗಿಯೂ ಒಂದು ಪ್ರಮುಖ ರಾಜಕೀಯ ಕರ್ತವ್ಯವನ್ನು ಜನ ಚಳುವಳಿಗಳು ಎದುರಿಸಲೇ ಬೇಕಾಗುತ್ತದೆ, ನಿರ್ವಹಿಸಲೇ ಬೇಕಾಗುತ್ತದೆ ಕೂಡ. ಇದಕ್ಕೊಂದು ಸೈದ್ಧಾಂತಿಕ ಚೌಕಟ್ಟು ಬಹು ಮುಖ್ಯ.

ಕರ್ನಾಟಕದ ದಲಿತ ಚಳುವಳಿಗೆ ತನ್ನದೇ ಆದಂತಹ ಆಳ, ಶ್ರೀಮಂತ ಅನುಭವ ಇದೆ. ಬದಲಾದ ಇಂದಿನ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸನ್ನಿವೇಶದಲ್ಲಿ ಚಳುವಳಿ ಪಡೆಯಬೇಕಾದ ಹೊಸ ಸ್ವರೂಪ ಮತ್ತು ಮಾರ್ಗದ ಕುರಿತು ಇನ್ನಷ್ಟು ಖಚಿತತೆಯೊಂದಿಗೆ ದಲಿತ ಚಳುವಳಿ ಹೆಜ್ಜೆ ಇಡುತ್ತದೆ ಎನ್ನುವ ಆಶಯ ನಮ್ಮದು. ರೈತ, ಕಾರ್ಮಿಕ ಚಳುವಳಿಗಳೊಂದಿಗೆ ಒಂದುಗೂಡಿ ಹೋರಾಡುವ ಸಮಾವೇಶದ ನಿರ್ಧಾರವೂ ಜನತೆಯ ಪ್ರಜಾಸತ್ತಾತ್ಮಕ ಆಂದೋಲನಕ್ಕೆ ಶಕ್ತಿ ತುಂಬುವಂತಹುದು.

ಈ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಬಾಬಾ ಸಾಹೇಬರ ಮೊಮ್ಮಗಳಾದ ಶ್ರೀಮತಿ ರಮಾಬಾಯಿ ಆನಂದ ತೇಲ್ತುಂಬ್ಡೆ, ಜಸ್ಟೀಸ್ ಹೆಚ್.ಎನ್.ನಾಗಮೋಹನದಾಸ್, ಪ್ರೊ. ರವಿವರ್ಮ ಕುಮಾರ್, ಡಿ.ಜಿ. ಸಾಗರ್, ಅಣ್ಣಯ್ಯ, ಸೋಮಶೇಖರ್, ಹಿರಿಯ ದಲಿತ ನಾಯಕರಾದ ಎನ್. ವೆಂಕಟೇಶ್, ಮಾವಳ್ಳಿ ಶಂಕರ್, ಹಿರಿಯ ರಂಗ ನಿರ್ದೇಶಕರಾದ ಸಿ.ಬಸವಲಿಂಗಯ್ಯ ಮುಂತಾದವರ ಮಾತುಗಳು, ಪಿಚ್ಚಳ್ಳಿ ಶ್ರೀನಿವಾಸ್, ಜನ್ನಿ, ಗೊಲ್ಲಳ್ಳಿ ಶಿವಪ್ರಸಾದ್ ರವರ ಸಾಂಸ್ಕೃತಿಕ ಸ್ಪಂದನ ದಲಿತ ಚಳುವಳಿಗೆ ಮತ್ತು ಚಳುವಳಿಯ ವಿವಿಧ ಆಯಾಮಗಳನ್ನು ತೆರೆದಿಟ್ಟಿವೆ.

ಈ ಸಮಾವೇಶ ಹಲವು ಹೊಸ ನಿರೀಕ್ಷೆಗಳನ್ನು ಹುಟ್ಟು ಹಾಕಿದೆ.




ತೊಗರಿ ಬೆಳೆಗಾರರ ರಾಜ್ಯ ಮಟ್ಟದ ವಿಚಾರ ಸಂಕಿರಣ

ರೈತರ ಹೋರಾಟಗಳು ಚುನಾವಣೆಯ ಪ್ರಮುಖ ಅಸ್ತ್ರಗಳಾಗಬೇಕು – ಕಾಂ.ಅಶೋಕ ಧವಳೆ

ಕೇಂದ್ರ ಸರ್ಕಾರವು ವಿದೇಶಗಳಿಂದ ಲಕ್ಷಾಂತರ ಟನ್ ತೊಗರಿ ಬೇಳೆಯನ್ನು ಆಮದು ಮಾಡಿಕೊಳ್ಳುತ್ತಿದೆ. ಕಾರ್ಪೋರೇಟ್ ಕಂಪನಿಗಳಿಗೆ ಲಾಭ ಮಾಡಿಕೊಡಲು ಆಮದು ಸುಂಕ ಶೂನ್ಯಕ್ಕೆ ಇಳಿಸಿದೆ. ಇದರಿಂದ ತೊಗರಿ ಬೆಳೆಗಾರರಿಗೆ ತೀವ್ರ ಸಂಕಷ್ಟ ಎದುರಾಗಿದೆ. ಇಂತಹ ಸರ್ಕಾರದ ರೈತ ವಿರೋಧಿ ನೀತಿಯನ್ನು ದೇಶದ ರೈತರು ಒಕ್ಕೊರಲಿನಿಂದ ವಿರೋಧಿಸಬೇಕಿದೆ ಎಂದು ಅಖಿಲ ಭಾರತ ಕಿಸಾನ ಸಭಾದ ರಾಷ್ಟ್ರೀಯಅಧ್ಯಕ್ಷರಾದ ಕಾಂ.ಅಶೋಕ ಧವಳೆ ಅವರು ಆಕ್ರೋಶ ವ್ಯಕ್ತಪಡಿಸಿದರು.





04 ಡಿಸೆಂಬರ್ 2022 ರಂದು ಕಲಬುರಗಿಯ ಡಾ.ಎಸ್.ಎಂ.ಪಂಡಿತ ರಂಗ ಮಂದಿರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವು ಹಮ್ಮಿಕೊಂಡಿದ್ದ ತೊಗರಿ ಬೆಳೆಗಾರರ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು.

ಕೇಂದ್ರ ಸರ್ಕಾರವು ತೊಗರಿಬೇಳೆಗೆ ರೂ.5500 ಗಳ ಬೆಂಬಲ ಬೆಲೆ ನಿಗದಿಪಡಿಸಿದೆ. ಆದರೆ ರೈತರಿಗೆ ಒಂದು ಕ್ವಿಂಟಲ್ ತೊಗರಿ ಬೇಳೆಗೆ ರೂ.8000 ರಷ್ಟು ವೆಚ್ಚವಾಗುತ್ತದೆ. ಇದರಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗುತ್ತಿದ್ದು ಕನಿಷ್ಠ ರೂ.12000 ಗಳ ಬೆಂಬಲಬೆಲೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರಧಾನಿ ನರೇಂದ್ರ ಮೋದಿ ಆಡಳಿತದ ಎಂಟು ವರ್ಷದ ಅವದಿಯಲ್ಲಿ ದೇಶದಲ್ಲಿ ಸುಮಾರು ಒಂದು ಲಕ್ಷ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲಿ ಸಾವಿರಾರು ಜನ ಕರ್ನಾಟಕದವರೂ ಇದ್ದಾರೆ. ರೈತರ ಆತ್ಮಹತ್ಯೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳೆ ಕಾರಣ. ಆದ್ದರಿಂದ ರೈತರ ಹೋರಾಟಗಳು ಮುಂದಿನ ದಿನಗಳಲ್ಲಿ ರಾಜನೀತಿಂುುಾಗಬೇಕು. ಚುನಾವಣೆಯ ಪ್ರಮುಖ ಅಸ್ತ್ರಗಳನ್ನಾಗಿಸಬೇಕು ಎಂದು ಕರೆಕೊಟ್ಟರು.

ಬ್ರಿಟಿಷರಂತೆಯೇ ಒಡೆದು ಆಳುವ ನೀತಿಯನ್ನು ಮೋದಿ, ಶಾ ಆಡಳಿತ ಮುಂದುವರೆಸಿದ್ದು, ದೇಶದಲ್ಲಿ ಜನರನ್ನು ಧರ್ಮ, ಜಾತಿ, ಭಾಷೆ ಹೆಸರಿನಲ್ಲಿ ವಿಭಜಿಸುವ ಹುನ್ನಾರ ಅವ್ಯಾಹತವಾಗಿ ನಡೆಯುತ್ತಿದೆ, ದೇಶದ ದುಡಿಯುವ ವರ್ಗ ಮತ್ತು ರೈತರನ್ನು ರಕ್ಷಿಸುವ ಕೆಲಸ ಮಾಡದಿರುವ ಇಂತಹ ಸರ್ಕಾರಗಳನ್ನು ಕಿತ್ತೆಸೆಯಲು ಜನತೆ ಸಂಕಲ್ಪ ಮಾಡಬೇಕೆಂದು ಕರೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಕಾಂ.ಟಿ.ಯಶವಂತ ಅವರು ಮಾತನಾಡುತ್ತ, ಕೇಂದ್ರ ಸರ್ಕಾರ ಮುಕ್ತ, ನಿರ್ಬಂಧ ರಹಿತ ಆಮದು ನೀತಿಯನ್ನು ರದ್ದುಪಡಿಸಬೇಕು. ಇಲ್ಲದಿದ್ದರೆ ತೊಗರಿ ಬೆಳೆಗಾರರಿಗೆ ಉಳಿಗಾಲವಿಲ್ಲ. ಕೇಂದ್ರ ಸರ್ಕಾರ 2023 ಮಾರ್ಚ ಅವಧಿವರೆಗೆ ಮುಂದುವರೆಸಿದ ಮುಕ್ತ ಆಮದು ನೀತಿಯ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಕೂಡಲೆ ಆಮದು ಆಮದು ಸುಂಕ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು. ಗೊಬ್ಬರ, ಕೀಟನಾಶಕ, ಬೀಜಗಳ ಬೆಲೆ ಏರಿಕೆಯಾದರೂ ಕೃಷಿ ಉತ್ಪನ್ನಗಳ ಬೆಲೆ ಹೆಚ್ಚಿಸದ ಪ್ರಧಾನ ಮಂತ್ರಿ ಮತ್ತು ಮುಖ್ಯ ಮಂತ್ರಿಗಳನ್ನು ದರ ಹೆಚ್ಚಿಸುವಂತೆ ಪಟ್ಟು ಹಿಡಿದು ಒತ್ತಾಯಿಸಬೇಕಿದೆ ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಕಾಂ.ಶರಣಬಸಪ್ಪ ಮಮಶೆಟ್ಟಿ ಅವರು ಮಾತನಾಡುತ್ತ, ವಿದೇಶದಿಂದ ತೊಗರಿಯನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ದೇಶದಲ್ಲಿ ಬೆಳೆಯುವ ತೊಗರಿಗೆ ಹೆಚ್ಚಿನ ಬೇಡಿಕೆ ಸಿಗದಂತಾಗಿದೆ. ಕಡಿಮೆ ಕ್ಷೇತ್ರ, ಕಡಿಮೆ ಉತ್ಪಾದನೆಯಾದರೂ ಹೆಚ್ಚಿನ ಬೆಲೆ ಸಿಗುವ ಪರಿಸ್ಥಿತಿಯಿಲ್ಲ. ಆದ್ದರಿಂದ ಆಮದು ತೊಗರಿಗೆ ಶೇ.50 ರಷ್ಟು ತೆರಿಗೆ ಹಾಕಬೇಕು. ತೊಗರಿ ಖರೀದಿಯಲ್ಲಿ ಕಾರ್ಪೋರೇಟ್ ಏಕಸ್ವಾಮ್ಯ ಕೊನೆಗಾಣಿಸಿ ಸರ್ಕಾರವೇ ನೇರವಾಗಿ ತೊಗರಿ ಖರೀದಿಸಬೇಕು. ಅತಿವೃಷ್ಟಿ, ನೆಟೆ ರೋಗದಿಂದ ನಷ್ಟ ಉಂಟಾದ ತೊಗರಿ ಬೆಳೆಗಾರರಿಗೆ ರೂ.15000/– ಪರಿಹಾರ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಕೆ.ಪಿ.ಆರ್.ಎಸ್ ನ ಜಿಲ್ಲಾ ಕಾರ್ಯದರ್ಶಿಯಾದ ಡಾ.ಸಾಯಿಬಣ್ಣ ಗುಡುಬಾ ಕಾರ್ಯಕ್ರಮ ನಿರೂಪಣೆ ಮಾಡಿದರು. ಯಾದಗಿರಿ ಜಲ್ಲಾ ಅಧ್ಯಕ್ಷರಾದ ಕಾಂ.ಚನ್ನಪ್ಪ ಆನೆಗುಂದಿ ಸ್ವಾಗತಿಸಿದರು. ವಿಜಯಪುರದ ಜಿಲ್ಲಾ ಕಾರ್ಯದರ್ಶಿಯಾದ ಕಾಂ.ಭೀಮರಾಯ ಪೂಜಾರಿ ವಂದನಾರ್ಪಣೆ ಮಾಡಿದರು.

ವೇದಿಕೆಯ ಮೇಲೆ ಕೆ.ಪಿ.ಆರ್.ಎಸ್ ನ ಕಲಬುರಗಿ ಜಿಲ್ಲಾ ಖಜಾಂಚಿಯಾದ ಸುಭಾಷ್ ಹೊಸಮನಿ, ಯಾದಗಿರಿ ಜಿಲ್ಲಾ ಕಾರ್ಯದರ್ಶಿಯಾದ ಎಸ್.ಎಂ.ಸಾಗರ, ರಾಯಚೂರ ಜಿಲ್ಲಾ ಅಧ್ಯಕ್ಷರಾದ ಡಿ.ವೀರಣ್ಣ, ಕಾರ್ಯದರ್ಶಿಯಾದ ನರಸಣ್ಣ ನಾಯಕ, ವಿಜಯಪುರ ಜಿಲ್ಲಾ ಅಧ್ಯಕ್ಷರಾದ ಅಣ್ಣಾರಾಯ ಈಳಿಗೇರ, ಕಾರ್ಯದರ್ಶಿಯಾದ ಭೀಮರಾಯ ಪೂಜಾರಿ, ಕಲಬುರಗಿ ಜಿಲ್ಲಾ ಪದಾಧಿಕಾರಿಗಳಾದ ವಿರುಪಾಕ್ಷಪ್ಪ ತಡಕಲ್, ವೆಂಕೋಬರಾವ ಜೇವರ್ಗಿ, ಶ್ರೀಮಂತ ಬಿರಾದಾರ, ಪಾಂಡುರಂಗ ಮಾವಿನಕರ್, ಪ್ರೊ.ಆರ್.ಕೆ.ಹುಡಗಿ, ಅಲ್ತಾಫ್ ಇನಾಮದಾರ್, ಜಾವೇದ್ ಹುಸೇನ್, ಎಂ.ಬಿ.ಸಜ್ಜನ್, ಸಿದ್ದಮ್ಮ ಮುತ್ತಿಗಿ ಚಿತ್ತಾಪೂರ, ಜಾಫರ್ ಖಾನ್, ಪ್ರಭು ಪ್ಯಾರಬದಿ ಚಿಂಚೋಳಿ, ರಾಯಪ್ಪ ಹುರಮುಂಜಿ, ವೀರಯ್ಯಸ್ವಾಮಿ ತರನಳ್ಳಿ ಶಹಾಬಾದ, ಪರಮೇಶ್ವರ ಕಾಂತಾ, ದಿಲೀಪ ನಾಗೋರೆ ಕಾಳಗಿ, ಪ್ರಕಾಶ ಜಾನೆ ಆಳಂದ, ಮೆಹಬೂಬಷಾ ಕಮಲಾಪೂರ, ಸಿದ್ದಣ್ಣ ಧನ್ನೂರ ಅಫಜಲಪೂರ, ಶಂಕರಲಿಂಗ ಜೇವರ್ಗಿ ಇತರರು ಇದ್ದರು.

ಕಲಬುರಗಿ, ವಿಜಯಪುರ, ಯಾದಗಿರಿ, ಬೀದರ, ರಾಯಚೂರ ಜಿಲ್ಲೆಗಳಿಂದ ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿಕಾರಿಗಳು ಮತ್ತು ರೈತರು ಆಗಮಿಸಿದ್ದು ರಂಗಮಂದಿರ ಕಿಕ್ಕಿರಿದು ತುಂಬಿತ್ತು. ಕಾರ್ಯಕ್ರಮ ಯಶಸ್ವಿಯಾಗಿ ಕೊನೆಗೊಂಡಿತು.

ಇದಕ್ಕೂ ಮೊದಲು ಎ.ಐ.ಕೆ.ಎಸ್ ನ ಅಖಿಲ ಬಾರತ ಅಧ್ಯಕ್ಷರಾದ ಕಾಂ.ಆಶೋಕ ಧವಳೆ ಅವರನ್ನೊಳಗೊಂಡು ಪದಾಧಿಕಾರಿಗಳು ಮತ್ತು ನೂರಾರು ಜನ ರೈತರು ಕಲಬುರಗಿಯ ಜಗತ್ ವೃತ್ತದಿಂದ ರಂಗಮಂದಿರದವರೆಗೆ ಬೃಹತ್ ಮೆರವಣಿಗೆ ಮೂಲಕ ಬಂದು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡರು.

ವರದಿ: ಕೋದಂಡರಾಮ



ಗಡಿ ಉದ್ವಿಗ್ನತೆ: ಸಂಕುಚಿತ ರಾಜಕಾರಣ ಸಲ್ಲದು.... ಪುಟ 3 ರಿಂದ

ಜನರ ಗಮನವನ್ನು ದಾರಿ ತಪ್ಪಿಸುವ ಆಟವನ್ನು ಆಡುತ್ತಿದೆಯೇ? ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಸಭೆಯ ಅಧಿವೇಶನದಲ್ಲಿ ತಾನು ನಾಡು-ನುಡಿಗೆ ಎಷ್ಟು ಬದ್ಧನೆಂದು ಬೊಗಳೆ ಹೊಡೆಯಲು ನಡೆಸಿದ ಪೂರ್ವ ಸಿದ್ಧತೆಯೇ ಇದು? ಎಂಬಿತ್ಯಾದಿ ಪ್ರಶ್ನೆಗಳು ಸಾರ್ವಜನಿಕರನ್ನು ಕಾಡುತ್ತಿದ್ದಲ್ಲಿ ಆಶ್ಚರ್ಯವೇನಿಲ್ಲ. ಯಾಕೆಂದರೆ ಜನರನ್ನು ಸದಾ ಹಾದಿ ತಪ್ಪಿಸುವ ಹಾಗೂ ವಿಭಜನೆಯ ರಾಜಕಾರಣದಲ್ಲಿಯೇ ತನ್ನ ಉಳಿವು ಇದೆ ಎಂದು ನಂಬಿರುವ ಪಕ್ಷದ ಕಾರ್ಯವೈಖರಿ ಅದರ ಇತಿಹಾಸದಲ್ಲಿ ಇದು ಕಾಣದಿರುವುದೇನಲ್ಲ.

ಕಳೆದೆರಡು ವಾರಗಳಲ್ಲಿ ಇಷ್ಟೆಲ್ಲಾ ಘಟಿಸುತ್ತಿದ್ದರೂ ಮಧ್ಯಪ್ರವೇಶಿಸದೇ ಮೂಕ ಪ್ರೇಕ್ಷಕನಾಗಿಯೇ ಇದ್ದ ಕೇಂದ್ರದ ಬಿಜೆಪಿ ಸರ್ಕಾರದ ವರ್ತನೆಯೂ ತೀವ್ರ ಆಕ್ಷೇಪಾರ್ಹವಾದುದು ಹಾಗೂ ಅತ್ಯಂತ ಹೊಣೆಗೇಡಿತನದಿಂದ ಕೂಡಿದ್ದಾಗಿದೆ. ನೆಲ, ಜಲ ವಿವಾದಗಳು ಸಂಭವಿಸಿದಾಗಲೂ ಮೋದಿಯವರ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ಉಭಯ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಿ ಸಂಧಾನ ಏರ್ಪಡಿಸುವುದು, ಪರಿಹಾರ ಕಂಡುಕೊಳ್ಳಲು ಸಹಾಯ ಮಾಡುವುದು ಅತ್ಯಗತ್ಯ. ಇದು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಆಗಲೇಬೇಕಾದ ಮಹತ್ವದ ಮಧ್ಯಪ್ರವೇಶ. ಆದರೆ ಮೋದಿ– ಶಾ ರವರ ನೇತೃತ್ವದ ಸರ್ಕಾರ ಈ ದೆಸೆಯಲ್ಲಿ ಪೂರ್ಣವಾಗಿ ವಿಫಲವಾಗಿದೆ. ಎಲ್ಲವೂ ಘಟಿಸಿದ ಬಳಿಕ ಇದೀಗ ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯುವ ಇಂಗಿತ ವ್ಯಕ್ತಗೊಂಡಿದೆ. ಆದರೆ ಇದು ತೀರಾ ವಿಳಂಬದಾಯಕ ಹಾಗೂ ತಡೆಯಬಹುದಾದ ಹಾನಿಯನ್ನು ತಡೆಯದೆ ಎಸಗಿದ ಕರ್ತವ್ಯ ಲೋಪ.

ಇಂದಿನ ದೇಶದ ಒಟ್ಟು ಪರಿಸ್ಥಿತಿಯಲ್ಲಿ ವಿವಾದಗಳು ಇರುವ ಉಭಯ ರಾಜ್ಯಗಳು ಬೀದಿ ಬಡಿದಾಟಕ್ಕೆ ಜನತೆಯನ್ನು ಇಳಿಸದೆ ಅಥವಾ ಅದಕ್ಕೆ ಬೆಂಬಲಿಸದೇ ಪರಸ್ಪರ ಸಮಾಲೋಚನೆ, ಸೌಹಾರ್ದ ಸಂವಾದಗಳ ಮೂಲಕ ಪರಿಹಾರ ಕಂಡುಕೊಳ್ಳಲು ಯತ್ನಿಸಬೇಕು. ಈಗಾಗಲೇ ಈ ಗಡಿ ವಿವಾದದ ಪ್ರಶ್ನೆಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಇರುವ ಕಾರಣದಿಂದಲೂ ಸಮರ್ಥವಾದ ವಾದಗಳ ಮೂಲಕ ನಿಲುವನ್ನು ಮನವರಿಕೆ ಮಾಡಿಕೊಡಬೇಕು. ಹಾಗೆಯೇ ತಮ್ಮ ಮೇಲೆ ಎರಚನಾಗುವ ಮಂಕು ಬೂದಿಯನ್ನು ಕೊಡವಿ ಜನತೆಯೂ ಸಹ ನಿಜ ಸಮಸ್ಯೆಗಳ ಬಗ್ಗೆ ಚಿಂತಿಸುವ, ಪ್ರಜಾಸತ್ತಾತ್ಮಕ ಹಾದಿಯಲ್ಲಿ ಸಾಗಬೇಕು. ವಿಭಜಕ ಶಕ್ತಿಗಳು ಸಕ್ರಿಯವಾಗಿರುವ ಈ ಕಾಲದಲ್ಲಿ ಜನತೆಯ ಒಗ್ಗಟ್ಟು ಕಾಯ್ದುಕೊಳ್ಳುವುದು ಅತಿ ಅವಶ್ಯಕವಿದೆ. ಇಂತಹ ವಿವೇಕ ಉಂಟುಮಾಡುವ, ನಿಜ ಪ್ರಶ್ನೆಗಳತ್ತ ಜನ ಮುಖ ಮಾಡುವಂತೆ ಆಳುವವರ ನೀತಿಗಳೆದುರು ಪ್ರತಿರೋಧ ಒಡ್ಡುವಂತೆ ಮಾಡುವ ಕಾರ್ಯದಲ್ಲಿ ಜನಪರ ಶಕ್ತಿಗಳು, ಪಕ್ಷಗಳು ಕಾರ್ಯ ಪ್ರವೃತ್ತ ರಾಗಲು ಇದು ಸಕಾಲವೂ ಕೂಡ.

ಬ್ರಿಟಿಷ್ ಸಾಮ್ರಾಜ್ಯಶಾಹಿ–ವಿರೋಧಿ ಸಂಯುಕ್ತ..... ಪುಟ 2 ರಿಂದ

ದೊಡ್ಡ ಮಟ್ಟದ ದೇಶಸೇವೆಯನ್ನು ಮಾಡುತ್ತಾರೆಂದು ಹಿಂದೂ ಮಹಾಸಭಾವು ವಿಶ್ವಾಸವಿಡುತ್ತದೆ. ಯಾವ ಇತಿಮಿತಿಯಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿದಿದ್ದರೂ ಸಹ, ಆ ಪರಿಸ್ಥಿತಿಯ ಅಡಿಯಲ್ಲಿ ಏನೆಲ್ಲಾ ಒಳ್ಳೆಯದನ್ನು ಮಾಡಬಹುದು ಅವನ್ನು ಮಾಡಬೇಕೆಂದು ಮಹಾಸಭಾವು ನಿರೀಕ್ಷಿಸುತ್ತದೆ ಮತ್ತು ಅಷ್ಟನ್ನು ಮಾಡಲು ವಿಫಲರಾಗದಿದ್ದರೆ, ಅವರು ತಮಗೆ ವಹಿಸಿದ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆಂದು ಮಹಾಸಭಾವು ಧನ್ಯವಾದ ಸಲ್ಲಿಸುತ್ತದೆ. ಇತಿಮಿತಿಗಳು ಕ್ರಮೇಣವಾಗಿ ಸಂಪೂರ್ಣವಾಗಿ ನಿರ್ಮೂಲವಾಗುವ ತನಕ ತಮ್ಮಷ್ಟಕ್ಕೆ ತಾವೇ ಮಿತಿಗೊಳಗಾಗುತ್ತವೆ. ಸ್ಪಂದನಶೀಲ ಸಹಕಾರದ ನೀತಿಯು ಬೇಷರತ್ತಾದ ಸಹಕಾರದಿಂದ ಆರಂಭವಾಗಿ ಕ್ರಿಯಾಶೀಲವಾದ ಮತ್ತು ಸಶಸ್ತ್ರ ಪ್ರತಿರೋಧದವರೆಗೂ ಸಕಲ ವಿಧವಾದ ದೇಶಪ್ರೇಮಿ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ, ನಮ್ಮ ವಶದಲ್ಲಿರುವ ಸಂಪನ್ಮೂಲಗಳು ಮತ್ತು ನಮ್ಮ ರಾಷ್ಟ್ರೀಯ ಹಿತಾಸಕ್ತಿಯ ಆದೇಶಕ್ಕೆ ಅನುಗುಣವಾಗಿ ಕಾಲದ ಅಗತ್ಯಕ್ಕೆ ತಕ್ಕಂತೆ ತನ್ನನ್ನು ತಾನು ಅಳವಡಿಸಿಕೊಳ್ಳುತ್ತದೆ ಕೂಡ. [ದಪ್ಪಕ್ಷರಗಳು ಮೂಲದಲ್ಲೇ ಇವೆ]45

"ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಇದೆ ಎನ್ನಲಾದ ಸಂಯುಕ್ತ ರಂಗ ಛಿದ್ರವಾದರೂ" ತನಗೆ ಚಿಂತೆಯಿಲ್ಲ ಎಂದು ಘೋಷಿಸುವಷ್ಟರ ಮಟ್ಟಿಗೂ ಸಾವರ್ಕರ್ ಹೋದರು. ಹೀಗೆ ಭಾರತ ಬಿಟ್ಟು ತೊಲಗಿ ಚಳುವಳಿಯನ್ನು ನಾಶಮಾಡಲೂ ಹೇಸುವುದಿಲ್ಲ ಎಂಬರ್ಥದ ಮಾತನ್ನಾಡಿದ ಸಾವರ್ಕರ್ ವಾಸ್ತವದಲ್ಲಿ ಅದನ್ನೇ ಮಾಡಿದರು.

(ಮುಂದುವರೆಯುವುದು)

ಮೂರು ಚುನಾವಣೆ: ಗೆದ್ದದ್ದು ಒಂದು! ಕಳೆದುಕೊಂಡಿದ್ದು ಎರಡು!!





ಇತ್ತೀಚೆಗೆ ನಡೆದ ಮೂರು ಚುನಾವಣೆಗಳು ದೇಶದ ಗಮನವನ್ನು ಸೆಳೆದಿದ್ದವು. ಫಲಿತಾಂಶ ಕೂಡಾ ಪ್ರಕಟವಾಗಿದ್ದು, ಬಿಜೆಪಿಗೆ ಗುಜರಾತ್, ಹಿಮಾಚಲ ಪ್ರದೇಶಕ್ಕೆ ಕಾಂಗ್ರೆಸ್, ದೆಹಲಿ ನಗರ ಪಾಲಿಕೆ ಆಪ್ ಪಾಲಾಗಿದೆ. ಮೂರು ಚುನಾವಣೆಗಳಲ್ಲಿ ಒಂದೊಂದು ಪಕ್ಷ ಗೆಲುವು ಕಂಡಿದೆ. ಈ ಗೆಲುವು ಆಮ್ ಆದ್ಮಿ ಪಕ್ಷಕ್ಕೆ ತುಸ ಹುಮ್ಮಸ್ಸು ನೀಡಿದರೆ, ಕಾಂಗ್ರೆಸ್‌ಗೆ ಕಳಪೆ ಪ್ರದರ್ಶನದ ಚಿಂತೆಯ ಜೊತೆ ನಾಯಕತ್ವದ ವೈಫಲ್ಯಕ್ಕೆ ಅವಲೋಕನ ಮಾಡಿಕೊಳ್ಳುತ್ತಿದೆ. ಬಿಜೆಪಿಗೆ ಈ ಚುನಾವಣೆ ಎಚ್ಚರಿಕೆ ಗಂಟೆಯಾಗಿದೆ.

ಗುರುರಾಜ ದೇಸಾಯಿ

ದೆಹಲಿ ಮಹಾನಗರ ಪಾಲಿಕೆ, ಗುಜರಾತ್ ವಿಧಾನಸಭೆ, ಹಿಮಾಚಲ ಪ್ರದೇಶ ವಿಧಾನಸಭೆ, ಈ ಮೂರರಲ್ಲೂ ಬಿಜೆಪಿ ಆಡಳಿತವನ್ನು ನಡೆಸುತ್ತಿತ್ತು. ಫಲಿತಾಂಶದ ನಂತರ ಎರಡು ಕಡೆ ಅಧಿಕಾರ ಕಳೆದುಕೊಂಡು ಒದು ಕಡೆ ಮಾತ್ರ ಅಧಿಕಾರ ಹಿಡಿದಿದೆ. ಮೋದಿ ಪ್ರಭಾವ ಕಮ್ಮಿಯಾಗಿಲ್ಲ ಎಂದು ಬಿಜೆಪಿ ಬೀಗುತ್ತಿದೆ. ಉಳಿದೆರಡು ಕ್ಷೇತ್ರಗಳಲ್ಲಿ ಮೋದಿ ಪ್ರಭಾವ ಕುಸಿತ ಕಂಡಿದೆ ಎಂಬುದನ್ನು ಒಪ್ಪಲು ಬಿಜೆಪಿ ತಯಾರಿದ್ದಂತೆ ಕಾಣುತ್ತಿಲ್ಲ. ಇರಲಿ ಈಗ ಮೂರು ಕ್ಷೇತ್ರಗಳ ಲೆಕ್ಕಾಚಾರವನ್ನೊಮ್ಮೆ ನೋಡಿ ಬರೋಣ.

ದೆಹಲಿ ಮಹಾನಗರ ಪಾಲಿಕೆ:

ತೀವ್ರ ಕುತೂಹಲ ಕೆರಳಿಸಿದ್ದ ದೆಹಲಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಪೈಪೋಟಿಯ ಹೊರತಾಗಿಯೂ ಅಧಿಕಾರದ ಗದ್ದುಗೆ ಹಿಡಿಯುವಲ್ಲಿ ಆಮ್ ಆದ್ಮಿ ಪಕ್ಷ ಯಶಸ್ವಿಯಾಗಿದೆ. 150ಕ್ಕೂ ಹೆಚ್ಚು ವಾರ್ಡ್‌ಗಳಲ್ಲಿ ಗೆಲ್ಲುವ ಮೂಲಕ ಮೊದಲ ಬಾರಿಗೆ ಅಧಿಕಾರಕ್ಕೇರಿದೆ. ಆ ಮೂಲಕ ದೆಹಲಿಯಲ್ಲಿ 15 ವರ್ಷಗಳ ಬಿಜೆಪಿ ಆಡಳಿತ ಅಂತ್ಯಗೊಂಡಿದೆ. ಒಟ್ಟು 250 ವಾರ್ಡುಗಳ ಪೈಕಿ ಆಮ್ ಆದ್ಮಿ ಪಕ್ಷ 134, ಬಿಜೆಪಿ 104 ಸ್ಥಾನ ತನ್ನದಾಗಿಸಿಕೊಂಡಿದೆ. ಉಳಿದಂತೆ ಕಾಂಗ್ರೆಸ್ 9 ಮತ್ತು ಪಕ್ಷೇತರರು 4 ವಾರ್ಡ್‌ಗಳಲ್ಲಿ ಜಯಗಳಿಸಿದ್ದಾರೆ.

ದೆಹಲಿ ಮಹಾನಗರ ಪಾಲಿಕೆಯನ್ನು ಗೆಲ್ಲಲ್ಲು ಬಿಜೆಪಿ ಹರಸಾಹಸ ಮಾಡಿತ್ತು. ಕೇಂದ್ರದ ಮಂತ್ರಿಗಳು ಅಲ್ಲಿಯೇ ಠಿಕಾಣಿ ಹೂಡಿದ್ದರು. ಗಲ್ಲಿ ಗಲ್ಲಿಯಲ್ಲಿ ಪ್ರಚಾರ ನಡೆಸಿದ್ದರು. ಸತತವಾಗಿ 15 ವರ್ಷ ಆಡಳಿತ ನಡೆಸಿದ್ದರಿಂದ ಆಡಳಿತ ವಿರೋಧಿ ಅಲೆ ಇದೆ ಎಂಬುದನ್ನು ಅರಿತಿದ್ದ ಬಿಜೆಪಿ ಮೂರು ಮಹಾನಗರ ಪಾಲಿಕೆಯನ್ನು ವಿಲೀನಗೊಳಿಸಿತು. ದೆಹಲಿ ಉತ್ತರ ಮತ್ತು ದೆಹಲಿ ದಕ್ಷಿಣ ಪಾಲಿಕೆ ತಲಾ 104 ವಾರ್ಡ್‌ಗಳನ್ನು ಹೊಂದಿದ್ದವು. ದೆಹಲಿ ಪೂರ್ವ ಪಾಲಿಕೆಯಲ್ಲಿ 64 ವಾರ್ಡ್ ಸೇರಿದಂತೆ ಒಟ್ಟು 272 ವಾರ್ಡ್‌ಗಳಿದ್ದವು. ವಾರ್ಡ್‌ಗಳನ್ನು ಕಡಿತ ಗೊಳಿಸಿ 250 ಕ್ಕೆ ಇಳಿಸಲಾಯಿತು. ಈ ಕ್ರಮವನ್ನು ಎಎಪಿ ವಿರೋಧಿಸಿತ್ತು.

ಕೇಂದ್ರದಲ್ಲಿ ಇಷ್ಟು ವರ್ಷ ಬಿಜೆಪಿ ಆಡಳಿತವಿದ್ದರೂ ಏಕೆ ವಿಲೀನಗೊಳಿಸಿರಲಿಲ್ಲ ಎಂದು ಎಎಪಿ ಪ್ರಶ್ನಿಸಿತ್ತು. ದೆಹಲಿ ಮಹಾನಗರ ಪಾಲಿಕೆ ಚುನಾವಣೆಗಳನ್ನು ವಿಳಂಬಗೊಳಿಸುವ ಉದ್ದೇಶದಿಂದ ಪಾಲಿಕೆ ವಿಲೀನ ಮಾಡಲಾಗುತ್ತಿದೆ. ಈ ವಿಚಾರದಲ್ಲಿ ರಾಜಕೀಯ ಮಾಡಲಾಗುತ್ತಿದೆ. ಮಹಾನಗರ ಪಾಲಿಕೆ ಚುನಾವಣೆಗಳು ನಡೆದರೆ ಬಿಜೆಪಿ ಸೋಲುವ ಭಯವಿದೆ. ಆದ್ದರಿಂದ ಚುನಾವಣೆಗೆ ದಿನಾಂಕ ಘೋಷಣೆಗೆ ಕೆಲವೇ ದಿನ ಮೊದಲು ಪಾಲಿಕೆ ವಿಲೀನ ತೀರ್ಮಾನ ಕೈಗೊಂಡು ಬಿಜೆಪಿ ರಾಜಕಾರಣದಲ್ಲಿ ತೊಡಗಿದೆ ಎಂದು ಆಮ್ ಆದ್ಮಿ ಪಕ್ಷ ಆರೋಪ ಮಾಡಿತ್ತು.

ದೆಹಲಿಯ ಮೂರು ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಮತ್ತು ಎಎಪಿ ನಡುವೆ 2017 ರಲ್ಲಿ ತೀವ್ರ ಸ್ಪರ್ಧೆ ಏರ್ಪಟ್ಟಿತ್ತು. ದೆಹಲಿ ಉತ್ತರದಲ್ಲಿ ಬಿಜೆಪಿ 35% ಮತ ಪಡೆದರೆ, ಎಎಪಿ 28% ರಷ್ಟು ಮತ ಪಡೆದಿತ್ತು. ದೆಹಲಿ ದಕ್ಷಿಣದಲ್ಲಿ ಬಿಜೆಪಿ 34% ಮತ ಎಎಪಿ 27% ರಷ್ಟು ಮತ ಪಡೆದಿತ್ತು. ದೆಹಲಿ ಪೂರ್ವದಲ್ಲಿ ಬಿಜೆಪಿ 38% ಎಎಪಿ 24% ರಷ್ಟು ಪಡೆದಿತ್ತು. ಬಿಜೆಪಿ 181, ಎಎಪಿ 49, ಕಾಂಗ್ರೆಸ್ 31 ಸ್ಥಾನ ಪಡೆದಿತ್ತು. ಈ ಬಾರಿಯ ಚುನಾವಣೆಯಲ್ಲಿ ಎಎಪಿ 42.05%, ಬಿಜೆಪಿ 39.09%, ಕಾಂಗ್ರೆಸ್ 11.68% ಮತಗಳನ್ನು ಪಡೆದಿದೆ. ಈ ಲೆಕ್ಕಾಚಾರ ಗಮನಿಸಿದರೆ ಬಿಜೆಪಿ ಸೋಲುವ ಭೀತಿಯಲ್ಲಿದ್ದ ಕಾರಣದಿಂದಲೇ ಮೂರು ಪಾಲಿಕೆಗಳನ್ನು ವಿಲೀನ ಮಾಡಿದಂತೆ ಕಾಣುತ್ತದೆ. 40 ಕ್ಷೇತ್ರಗಳಲ್ಲಿ ಬಿಜೆಪಿ 50 ರಿಂದ 150 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದೆ. ಈ ಅಂತರ ಬಿಜೆಪಿಗೆ ಸೋಲುವ ಭಯ ಇತ್ತು ಎನ್ನುವುದನ್ನು ನಿರೂಪಿಸುತ್ತದೆ.

ಗುಜರಾತ್ ವಿಧಾನಸಭೆ:

ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 52.05% ಮತ ಪಡೆಯುವ ಮೂಲಕ ಸಾಧನೆಯನ್ನು ಮಾಡಿದೆ. 1985ರ ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 149 ಸೀಟುಗಳಲ್ಲಿ ಗೆಲುವು ಸಾಧಿಸಿ ದಾಖಲೆ ಬರೆದಿತ್ತು. ಪ್ರಸ್ತುತ ಬಿಜೆಪಿ 156 ಸ್ಥಾನ ಗೆಲ್ಲುವ ಮೂಲಕ ಕಾಂಗ್ರೆಸ್‌ನ ದಾಖಲೆ ಮುರಿದಿದ್ದಾರೆ. ಕಳೆದ ಬಾರಿ ಬಲಿಷ್ಠ ವಿಪಕ್ಷವಾಗಿ ಹೊರಹೊಮ್ಮಿದ್ದ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿದೆ. ಆಮ್ ಆದ್ಮಿ ಪಕ್ಷವು ಖಾತೆ ತೆರೆಯುವ ಮೂಲಕ ಅಚ್ಚರಿ ಮೂಡಿಸಿದೆ.

ಬಿಜೆಪಿ 156 ಸ್ಥಾನಗಳೊಂದಿಗೆ 52.05 % ಮತ ಪ್ರಮಾಣ ಪಡೆದುಕೊಂಡಿದೆ. ಕಳೆದ ಬಾರಿಗಿಂತ 3.4% ಮತ ಪ್ರಮಾಣ ಹೆಚ್ಚಳದ ಜೊತೆ 57 ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ. ಕಾಂಗ್ರೆಸ್ ಕಳೆದ ಬಾರಿ 77 ಸ್ಥಾನಗಳಲ್ಲಿ ಗೆಲುವು ಕಂಡಿದ್ದ ಕಾಂಗ್ರೆಸ್ 17 ಸ್ಥಾನಕ್ಕೆ ತೃಪ್ತಿಪಟ್ಟುಕೊಂಡು 60 ಸ್ಥಾನಗಳನ್ನು ಕಳೆದುಕೊಂಡಿದೆ. ಕಳೆದ ಬಾರಿ 41.1% ಮತ ಪಡೆದಿದ್ದ ಕಾಂಗ್ರೆಸ್, ಈ ಬಾರಿ 27.28% ಮತವನ್ನು ಪಡೆದುಕೊಂಡಿದೆ. ಎಎಪಿ ಕಳೆದ ಚುನಾವಣೆಯಲ್ಲಿ 0.1% ದಷ್ಟು ಇದ್ದ ಮತ ಪ್ರಮಾಣವನ್ನು 12.92% ಕ್ಕೆ ಹೆಚ್ಚಿಸಿಕೊಳ್ಳುವ ಮೂಲಕ 05 ಸ್ಥಾನಗಳಲ್ಲಿ ಗೆಲವು ಪಡೆದು ಗುಜರಾತಿನಲ್ಲಿ ಖಾತೆ ತೆರೆದಿದೆ.

ಬಿಜೆಪಿ ಗೆಲುವಿಗೆ ಕಾರಣಗಳು:

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅಲ್ಲಿಯೇ ಠಿಕಾಣಿ ಹೂಡಿದ್ದರು. ಅಮಿತ್ ಶಾ ಅವರಂತೂ ಎರಡು ತಿಂಗಳು ಗುಜರಾತ್‌ನಲ್ಲಿಯೇ ವಾಸ್ತವ್ಯ ಹೂಡಿದ್ದರು. ಮೋದಿ ಗುಜರಾತ್ ರಾಜ್ಯದಲ್ಲಿ ಬರೋಬ್ಬರಿ 27 ರ‍್ಯಾಲಿಗಳನ್ನು ನಡೆಸಿದ್ದರು. ಅಷ್ಟೆ ಅಲ್ಲದೆ, 16 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ 50 ಕಿ.ಮೀ ಮೆಗಾ ರೋಡ್ ಶೋ ನಡೆಸಿದ್ದರು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿ ಹಲವು ಪ್ರಮುಖರು ಗುಜರಾತ್‌ನಲ್ಲಿ ಸಾಲು ಸಾಲು ರ‍್ಯಾಲಿ, ಸಮಾವೇಶಗಳನ್ನು ಕೈಗೊಳ್ಳುವ ಮೂಲಕ ಮತದಾರರ ಒಲವು ಬೇರೆಡೆ ವಾಲದಂತೆ ತಡೆಯಲು ಬಿಜೆಪಿ ಯತ್ನಿಸಿತ್ತು.

2017ರ ಚುನಾವಣೆಯಲ್ಲಿ ಕಷ್ಟಪಟ್ಟು ಗೆದ್ದಿದ್ದ ಬಿಜೆಪಿಗೆ ಈ ಬಾರಿಯ ಚುನಾವಣೆ ಅಷ್ಟು ಸಲೀಸಾಗಿ ಇರಲಿಲ್ಲ ಅದಕ್ಕಾಗಿ ಅಬ್ಬರದ ಪ್ರಚಾರದ ಜೊತೆ ಒಂದು ವರ್ಷ ಮೊದಲೆ ಇತರೆ ಪಕ್ಷದ ಹಾಗೂ ಗುಜರಾತಿನ ಪ್ರಮುಖ ಜಾತಿ ಪ್ರಾಬಲ್ಯ ಇದ್ದ ನಾಯಕರನ್ನು ಸೆಳೆಯುವ ಮೂಲಕ ಅಕ್ರಮ ಚುನಾವಣೆಗೆ ಮುಂದಾಗಿತ್ತು. ಚುನಾವಣೆ ಸಮೀಪಿಸುತ್ತಿರುವಾಗ ಹಲವು ಪ್ರಮುಖ ನಾಯಕರು ಕೈ ಪಾಳೆಯ ತೊರೆದು ಕೇಸರಿ ಪಕ್ಷದ ಕೈ ಹಿಡಿದಿದ್ದರು. ಹಾರ್ದಿಕ್ ಪಟೇಲ್, ಒಬಿಸಿ ನಾಯಕ ಅಲ್ಪೇಶ್ ಠಾಕೂರ್ ಕಾಂಗ್ರೆಸ್ ಬಿಟ್ಟು ಬಿಜೆಪಿ ಪಡಸಾಲೆಗೆ ಸೇರಿದ್ದರು. ಗೆಲ್ಲುವ ಕುದುರೆಗಳನ್ನು ಯಾವುದೇ ಪಕ್ಷ, ಮೂಲವಾದರೂ ಸರಿ ಎಂದು ಬಿಜೆಪಿ ಸ್ವಾಗತಿಸಿತ್ತು.

ಆರಂಭದಿಂದಲೂ ಗಲಭೆ ಮೂಲಕ ಅಧಿಕಾರಕ್ಕೇರಿದ ಬಿಜೆಪಿ ರಕ್ತದಲ್ಲಿ ಕೈತೊಳದದ್ದೆ ಹೆಚ್ಚು. ಈ ಚುನಾವಣೆಯಲ್ಲೂ ಮೋರ್ಭಿ ದುರಂತದ ಮೂಲಕ ರಕ್ತದ ಕಲೆ ಹಾಗಿಯೇ ಇತ್ತು. ಕಳೆದ ಮೂರು ದಶಕಗಳಲ್ಲಿ ಬಿಜೆಪಿ–ಆರ್‌ಎಸ್‌ಎಸ್ ಆಳವಾದ ಕೋಮು ಧ್ರುವೀಕರಣವನ್ನು ಸೃಷ್ಟಿಸಿದ್ದು ಮಾತ್ರ ಗುಜರಾತ್‌ನಲ್ಲಿ ಬಿಜೆಪಿ ಮಾಡಿದ ಸಾಧನೆಯಾಗಿದೆ. ಅಭಿವೃದ್ಧಿಗೆ ಆದ್ಯತೆ ನೀಡುವದರ ಬದಲು ಕೋಮು ಗಲಭೆಗಳಿಗೆ ಹೆಚ್ಚಿನ ಆಧ್ಯತೆ ನೀಡಿದೆ. ಈಗಲೂ ಗುಜರಾತ್, ಶಿಕ್ಷಣ, ಆರೋಗ್ಯ, ಸಾರ್ವಜನಿಕ ಅಭಿವೃದ್ಧಿ, ಉದ್ಯೋಗ ಸೃಷ್ಟಿ ವಿಚಾರದಲ್ಲಿ ಕೆಳಗಿನ ಸ್ಥಾನದಲ್ಲಿದೆ. ಇದನ್ನೆಲ್ಲ ಪ್ರಶ್ನಿಸಿದರೆ ಮತ್ತೆ ಗಲಭೆಗಳಾಗುತ್ತವೆ ಎಂದು ಜನರನ್ನು ಹೆದರಿಸಿ ಚುನಾವಣೆ ಗೆದ್ದಿದ್ದಾರೆ ಎಂದು ಅಲ್ಲಿನ ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

ನಾಯಕರ ಕೊರತೆಯಲ್ಲಿ ಕಮರಿದ ಕಾಂಗ್ರೆಸ್:

ಗುಜರಾತ್ ಚುನಾವಣೆಯನ್ನು ನಾವು ಸೋಲುತ್ತೇವೆ ಎಂಬುದು ಕಾಂಗ್ರೆಸ್‌ಗೆ ಮೊದಲೇ ಗೊತ್ತಿದ್ದಂತೆ ಕಾಣುತ್ತದೆ. ಸತತ ಸೋಲಿನಿಂದಾಗಿ ಗುಜರಾತ್‌ನಲ್ಲಿ ಕಾಂಗ್ರೆಸ್ ಸಂಘಟನೆಯೇ ದುರ್ಬಲವಾಗಿತ್ತು. ಆರಂಭದಲ್ಲೇ ಹುಮ್ಮಸ್ಸು ಕಳೆದುಕೊಂಡಿದ್ದ ಕಾಂಗ್ರೆಸ್ ನಾಯಕರು ನೆಪ ಮಾತ್ರಕ್ಕೆ ಸ್ಪರ್ಧಿಸಿದ್ದರು ಎಂಬಂತೆ ಕಂಡುಬಂದಿದೆ. ಕಾಂಗ್ರೆಸ್, ಭಾರತ್ ಜೋಡೋ ಯಾತ್ರೆಯ ಕಡೆ ಗಮನ ನೀಡಿತೇ ಹೊರತು, ಗುಜರಾತ್ ಕಡೆ ಹೆಚ್ಚಿನ ಗಮನ ಹರಿಸಲಿಲ್ಲ. ಮಲ್ಲಿಕಾರ್ಜುನ ಖರ್ಗೆ ಹೊರತುಪಡಿಸಿ ಬೇರೆ ರಾಷ್ಟ್ರೀಯ ನಾಯಕರು ಗುಜರಾತ್ ಕಡೆ ತಲೆ ಹಾಕಲಿಲ್ಲ. ನೆಪ ಮಾತ್ರಕ್ಕೆ ರಾಹುಲ್ ಪ್ರಚಾರ ನಡೆಸಿದಂತೆ ಕಾಣಿಸಿತು. ವಿರೋಧಿ ಅಲೆಯನ್ನು ಮತಗಳಾಗಿಸಿಕೊಳ್ಳುವ ಚಾಣಾಕ್ಷತನ ತೋರಲಿಲ್ಲ.

2017 ರಲ್ಲಿ ಗುಜರಾತ್‌ನಲ್ಲಿ ಕಾಂಗ್ರೆಸ್ 77 ಕ್ಷೇತ್ರ ಗೆದ್ದಿದ್ದೇ ಅಹ್ಮದ್ ಪಟೇಲ್ ಎಂಬ ಜನಪ್ರಿಯ ನಾಯಕನ ಶ್ರಮದಿಂದ. ಅದರಲ್ಲೂ, ಅದೇ ವರ್ಷ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಹಿಮ್ಮೆಟ್ಟಿಸಿದ್ದು, ಕಾರ್ಯಕರ್ತರನ್ನು ಒಗ್ಗೂಡಿಸಿದ್ದು ಅವರ ಹೆಗ್ಗಳಿಕೆಯಾಗಿತ್ತು. ಆದರೆ, ಅಹಮದ್ ನಿಧನರಾದ ನಂತರ ಕಾಂಗ್ರೆಸ್ ನಾಯಕರ ಕೊರತೆಯನ್ನು ಎದುರಿಸಿತು. ಈ ಬಾರಿ ಗುಜರಾತ್‌ನಲ್ಲಿ ಅಹ್ಮದ್ ಪಟೇಲರ್‌ರಂತಹ ಬಲಾಢ್ಯ ಮತ್ತು ಅನುಭವಿ ನಾಯಕರ ಅನುಪಸ್ಥಿತಿ ಹಾಗೂ ಪಟೇಲ್ ಸಮುದಾಯದ ಪ್ರಬಲ ನಾಯಕರ ಕೊರತೆಯು ಕಾಂಗ್ರೆಸ್‌ಗೆ ಇನ್ನಿಲ್ಲದಂತೆ ಕಾಡಿತು. ಹಾಗಾಗಿಯೇ, ಬಿಜೆಪಿಗೆ ಕನಿಷ್ಠ ಸ್ಪರ್ಧೆಯೊಡ್ಡುವಲ್ಲಿಯೂ ವಿಫಲವಾಯಿತು.

ಗುಜರಾತ್ ಕಾಂಗ್ರೆಸ್‌ನಲ್ಲಿ ನಾಯಕತ್ವ ಬಿಕ್ಕಟ್ಟು, ಪಕ್ಷದ ನಾಯಕರಿಗೆ ಮಣೆ ಹಾಕದ ಪರಿಣಾಮ ಒಂದಷ್ಟು ನಾಯಕರು ಪಕ್ಷಾಂತರ ಮಾಡಿದ್ದು ನುಂಗಲಾರದ ತುತ್ತಾಯಿತು. 11 ಬಾರಿ ಗೆದ್ದ ಶಾಸಕ ಮೋಹನ್ ಸಿಂಗ್ ರಾತ್ವಾ, ಭಾವೇಶ್ ಕತಾರ, ಹಿಮಾಂಶು ವ್ಯಾಸ್, ಹಾರ್ದಿಕ್ ಪಟೇಲ್ ಸೇರಿ ಹಲವು ಪ್ರಮುಖ ನಾಯಕರು ಚುನಾವಣೆಗೂ ಮುನ್ನ ಕಾಂಗ್ರೆಸ್ ತೊರೆದರು. ಇದರಿಂದಾಗಿ ಕಾಂಗ್ರೆಸ್‌ಗೆ ಪಕ್ಷ ಸಂಘಟನೆ, ಪ್ರಬಲ ಸಮುದಾಯದವರ ಮತಗಳನ್ನು ಸೆಳೆಯುವುದು ದುಸ್ತರವಾಯಿತು ಎಂದು ಹೇಳಬಹುದು. ದಲಿತ ನಾಯಕ ಜಿಗ್ನೇಶ್ ಮೆವಾನಿ ಗೆಲುವು ಸಾಧಿಸಿದ್ದು, ಅವರ ನೇತೃತ್ವದಲ್ಲಿ ಕಾಂಗ್ರೆಸ್ ಬಲಗೊಳ್ಳಬಹುದು ಎಂಬ ಲೆಕ್ಕಾಚಾರಗಳನ್ನು ಹಾಕಲಾಗುತ್ತಿದೆ.

ಎಎಪಿ, ಒವೈಸಿಯಿಂದ ಮುಸ್ಲಿಂ ಮತಗಳ ವಿಭಜನೆ:

ಎಎಪಿ 5 ಸ್ಥಾನದಲ್ಲಿ ಗೆಲುವು ಸಾಧಿಸಿದೆ. ಕಾಂಗ್ರೆಸ್ ಸೋಲಿಗೆ, ಬಿಜೆಪಿ ಗೆಲುವಿಗೆ ಎಎಪಿ ಮತ್ತು ಒವೈಸಿ ಪಕ್ಷಗಳು ಮುಸ್ಲಿಂ ಮತ ವಿಭಜನೆ ಮಾಡಿದ್ದಕ್ಕೆ ಸೋಲುಂಟಾಗಿದೆ ಎಂದು ಹೇಳಲಾಗುತ್ತಿದೆ. ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ಅಚ್ಚರಿಗೆ ಕಾರಣವಾಗಿದೆ. ಬಿಜೆಪಿಯಿಂದ ಯಾವುದೇ ಮುಸ್ಲಿಂ ಅಭ್ಯರ್ಥಿ ಕಣಕ್ಕಿಳಿಯದಿದ್ದರೂ ಸಹ ಬಿಜೆಪಿ ಪಕ್ಷಕ್ಕೆ ಜಯ ಸಿಕ್ಕಿದೆ. ಹೆಚ್ಚಿನ ಮುಸ್ಲಿಂ ಜನಸಂಖ್ಯೆ ಇರುವ ಗುಜರಾತ್‌ನ 17 ಕ್ಷೇತ್ರಗಳ ಪೈಕಿ 12 ರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಸಾಂಪ್ರದಾಯಿಕವಾಗಿ ಮತಗಳನ್ನು ವಿಭಜಿಸುವಲ್ಲಿ ಈ ಎರಡೂ ಪಕ್ಷಗಳು ದೊಡ್ಡ ಪಾತ್ರವನ್ನು ಹೊಂದಿವೆ ಎಂಬುದು ರಾಜಕೀಯ ತಜ್ಞರ ಅಭಿಪ್ರಾಯವಾಗಿದೆ.

ಅಧಿಕ ಮುಸ್ಲಿಂ ಜನಸಂಖ್ಯೆಯುಳ್ಳ 17 ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಪಾರುಪತ್ಯ ಮೆರೆದಿದೆ. ಇತಿಹಾಸದ ಪುಟಗಳನ್ನು ತೆಗೆದು ನೋಡಿದರೆ, ಈ ಕ್ಷೇತ್ರಗಳಲ್ಲಿ ಸಾಮಾನ್ಯವಾಗಿ ಕಾಂಗ್ರೆಸ್‌ನದ್ದೇ ಪಾರುಪತ್ಯವಿತ್ತು. ಕಾಂಗ್ರೆಸ್ ಕೂಡ ಹೆಚ್ಚಾಗಿ ಮುಸ್ಲಿಂ ಅಭ್ಯರ್ಥಿಗಳನ್ನೂ ಹುಡುಕಿ ಕಣಕ್ಕಿಳಿಸುತ್ತಿತ್ತು. ಈ ಬಾರಿ ಕೂಡ ಕಾಂಗ್ರೆಸ್ ಅನೇಕ ಕ್ಷೇತ್ರಗಳಲ್ಲಿ

ಪುಟ 12 ಕ್ಕೆ

ಸರ್ಕಾರಿ ನೌಕರರ ಪಿಂಚಣಿ ಹಣ ಷೇರು ಮಾರುಕಟ್ಟೆಗೆ



ಹರ್ಷ

ಸರ್ಕಾರಿ ನೌಕರಿ ಎಂದರೆ ಕಾಲಕಾಲಕ್ಕೆ ವೇತನ ಪರಿಷ್ಕರಣೆ, ಕೆಲಸದಿಂದ ಸಕಾರಣವಿಲ್ಲದೇ ವಜಾ ಮಾಡಲು ಸಾಧ್ಯವಿಲ್ಲದ ಉದ್ಯೋಗ ಭದ್ರತೆ ಹಾಗೂ ನಿವೃತ್ತಿ ನಂತರ ಪಿಂಚಣಿ ಸೌಲಭ್ಯ ಸಿಗುತ್ತಿದ್ದ ಕಾಲವೊಂದಿತ್ತು!

ಆದರೆ, ರಾಜ್ಯ ಸರ್ಕಾರಿ ಸೇವೆಗೆ 2006ರ ಏಪ್ರಿಲ್ 1 ರ ನಂತರ ಸೇರಿದ ನೌಕರರಿಗೆ ನಿಶ್ಚಿತ ಪಿಂಚಣಿ ಎಂಬುದನ್ನು ತೆಗೆದು ಹಾಕಿ ಷೇರು ಮಾರುಕಟ್ಟೆ ಆಧಾರಿತ ಎನ್.ಪಿ.ಎಸ್ ಪದ್ಧತಿ (ರಾಷ್ಟ್ರೀಯ ಪಿಂಚಣಿ ಯೋಜನೆ) ಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಡಿ 2006 ರ ನಂತರದಲ್ಲಿ ರಾಜ್ಯ ಸರ್ಕಾರಿ ಸೇವೆಗೆ ಸೇರಿ ಇದೀಗ ನಿವೃತ್ತಿಯಾಗುತ್ತಿರುವ ನೌಕರರಿಗೆ ಪಿಂಚಣಿಯಾಗಿ ಮಾಸಿಕ ಕೇವಲ ರೂ.1500 ದಷ್ಟು ಮಾತ್ರ ಬರುತ್ತಿದೆ. ಆದರೆ ಹಳೆಯ ನಿಶ್ಚಿತ ಪಿಂಚಣಿ ವ್ಯವಸ್ಥೆಯಲ್ಲಿ (Old pension scheme- OPS) ನಿವೃತ್ತರಾಗುವ ನೌಕರರಿಗೆ ಕನಿಷ್ಠ ಮಾಸಿಕ ರೂ. 8500 ಇದೆ.

ರಾಜ್ಯದಲ್ಲಿ ಮಂಜೂರಾಗಿರುವ 7.75 ಲಕ್ಷ ಹುದ್ದೆಗಳ ಪೈಕಿ 2.80 ಲಕ್ಷ ಹುದ್ದೆಗಳು ಖಾಲಿಯಿದ್ದು ಈ ಹುದ್ದೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಯುವಜನತೆಯನ್ನು ಶೋಷಣೆ ಮಾಡಲಾಗುತ್ತಿದೆ. ಇನ್ನುಳಿದಂತೆ ಸುಮಾರು 2.50 ಲಕ್ಷ OPS ನೌಕರರಿದ್ದರೆ, 2.45 ಲಕ್ಷ NPS ನೌಕರರು ಇದ್ದಾರೆ.

OPS ಪದ್ಧತಿಯಡಿ ಸರ್ಕಾರವು ಪಿಂಚಣಿ ನೀಡುವ ಆರ್ಥಿಕ ಹೊರೆಯನ್ನು ತಾನೇ ನಿರ್ವಹಿಸುತ್ತಿದ್ದು ನೌಕರರಿಂದ ಯಾವುದೇ ವಂತಿಕೆಯನ್ನು ಕಟಾವಣೆ ಮಾಡುವುದಿಲ್ಲ. ಆದರೆ ನಿವೃತ್ತಿಗೂ ಮೊದಲೇ ನೌಕರರಿಗೆ ಎಷ್ಟು ಪಿಂಚಣಿ ಬರುತ್ತದೆಂದು ಖಚಿತಪಡಿಸುವ ವ್ಯವಸ್ಥೆಯಿದೆ.

ಆದರೆ, NPS ಯೋಜನೆಯನ್ನು ನಿರ್ವಹಿಸಲು ಕೇಂದ್ರ ಸರ್ಕಾರವು 'ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ' –PFRDA ಕಾಯಿದೆಯಡಿ 'ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ' ವನ್ನು–PFRDA ರಚಿಸಿದೆ. ಈ ಯೋಜನೆಯಡಿ, ಅಡಿ ಮೂಲ ವೇತನದಲ್ಲಿನ ಶೇ.10 ರಷ್ಟು ವಂತಿಗೆಯನ್ನು ನೌಕರರು ಹಾಗೂ ಪ್ರಸ್ತುತ ನಿಯಮದಂತೆ ಶೇ 14ರಷ್ಟು ವಂತಿಗೆಯನ್ನು ಸರ್ಕಾರವು PFRDA ನಿಧಿಗೆ ಪಾವತಿಸುತ್ತದೆ. ನೌಕರರು ನಿವೃತ್ತಿ ಸಮಯದಲ್ಲಿ ಸದರಿ ನಿಧಿಯಲ್ಲಿ ಆಕರಗೊಂಡ ಒಟ್ಟು ಮೊತ್ತದಲ್ಲಿ ಶೇ. 60 ರಷ್ಟನ್ನು ವಾಪಸ್ ಪಡೆಯಬಹುದು, ಉಳಿದ ಶೇ. 40 ರಷ್ಟನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಲು ಹಾಗೆ ಬಿಡಬೇಕು. PFRDA ಸಂಸ್ಥೆಯು ಷೇರು ಮಾರುಕಟ್ಟೆಯಲ್ಲಿ ಫಂಡ್ ಮ್ಯಾನೇಜರುಗಳ ಮೂಲಕ ಪಿಂಚಣಿ ನಿಧಿಯನ್ನು ತೊಡಗಿಸುತ್ತದೆ. ಅದರಿಂದ ಬರುವ ಲಾಭವನ್ನು ನೌಕರರಿಗೆ ಮಾಸಿಕ ಕಂತಿನಲ್ಲಿ ನೀಡುತ್ತದೆ. ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಷೇರು ಮಾರುಕಟ್ಟೆ ಕುಸಿದಾಗ ಪಿಂಚಣಿ ಹೂಡಿಕೆ ಕೊಚ್ಚಿ ಹೋಗಿ ಪಿಂಚಣಿದಾರರು ದಿವಾಳಿಯಾಗುವುದು ಎಲ್ಲರಿಗೂ ತಿಳಿದಿರುವ ವಿಷಯವೇ.

ಕಳೆದ 16 ವರ್ಷಗಳಲ್ಲಿ ಸರ್ಕಾರವು ತನ್ನ ವಂತಿಕೆಯಾಗಿ ರೂ. 7,298.36 ಕೋಟಿ ಯನ್ನು ಕಈಖಅಂ ನಿಧಿಗೆ ಪಾವತಿಸಿದ್ದರೆ, ನೌಕರರ ವಂತಿಕೆಯಾಗಿ ರೂ. 6,154.4 ಕೋಟಿ ಪಾವತಿಯಾಗಿದೆ. 2030ರ ಹೊತ್ತಿಗೆ ದೇಶದ ಸರ್ಕಾರಿ ನೌಕರರ ಮತ್ತು ಸರ್ಕಾರಗಳ ಒಟ್ಟು ಪಿಂಚಣಿ ವಂತಿಕೆ ರೂ. 30.00 ಲಕ್ಷ ಕೋಟಿ ಆಗುವ ಅಂದಾಜಿದೆ. ಷೇರು ಮಾರುಕಟ್ಟೆ ಏರಿಳಿತಕ್ಕೆ ಭದ್ರತೆ ಒದಗಿಸಲು ಪಿಂಚಣಿ ಹಣವನ್ನು ಬಳಸಲಾಗುತ್ತಿದೆ.

2003–04 ರಲ್ಲಿ ಹೊಸದಾಗಿ NPS ಪದ್ಧತಿಯನ್ನು ಸರ್ಕಾರವು ಜಾರಿಗೊಳಿಸಲು ಹೊರಟಾಗ ಹಲವು ನೌಕರ ಸಂಘಟನೆಗಳು ಮತ್ತು ಎಡಪಕ್ಷಗಳು ಇದನ್ನು ಬಲವಾಗಿ ವಿರೋಧಿಸಿದ್ದವು.

ಆದರೆ, ಸರ್ಕಾರದ ಬಾಲಂಗೋಚಿಯಾಗಿ ಕೆಲಸ ಮಾಡುವ ನೌಕರ ಸಂಘವು NPS ಪದ್ಧತಿಯಿಂದ ನೌಕರರು ಕೊಟ್ಯಾಧಿಪತಿಗಳಾಗುತ್ತಾರೆ ಎಂದು ನೌಕರರನ್ನು ದಿಕ್ಕು ತಪ್ಪಿಸಿತ್ತು. ಅಂದಿನ ಎನ್.ಡಿ.ಎ ಸರ್ಕಾರ ಇದನ್ನು ಜಾರಿಗೊಳಿಸಲು PFRDA ಮಸೂದೆ ಮಂಡಿಸಿದ್ದರೂ, ಅದನ್ನು ಕಾಯಿದೆಯಾಗಿ ಅಂಗೀಕಾರ ಮಾಡಲು ಸಾಧ್ಯವಾಗಿರಲಿಲ್ಲ. ಆದರೆ 2013ರಲ್ಲಿ ಎರಡನೇ ಯುಪಿಎ ಸರ್ಕಾರವು ಬಿಜೆಪಿಯ ಬೆಂಬಲದೊಂದಿಗೆ ಇದನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಿತ್ತು.

ತದನಂತರ, ಪಿಂಚಣಿ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಶೇ. 74 ಕ್ಕೆ ಹೆಚ್ಚಿಸಲಾಯಿತು.

ಇದೀಗ ವಿವಿಧ ರಾಜ್ಯಗಳಲ್ಲಿ ಎನ್.ಪಿ.ಎಸ್ ವಿರುದ್ಧ ನೌಕರರು ಬೃಹತ್ ಹೋರಾಟಗಳನ್ನು ನಡೆಸುತ್ತಿದ್ದಾರೆ. ಜಾರ್ಖಂಡ್, ರಾಜಸ್ಥಾನ, ಪಂಜಾಬ್, ಛತ್ತೀಸ್ ಘಢ ಇತ್ಯಾದಿ ರಾಜ್ಯಗಳಲ್ಲಿ ರಾಜಕೀಯವಾಗಿ ಅಧಿಕಾರ ಉಳಿಸಿಕೊಳ್ಳಲು ನೌಕರರ ಒತ್ತಾಯಕ್ಕೆ ಮಣಿದು ಅಲ್ಲಿನ ರಾಜ್ಯ ಸರ್ಕಾರಗಳು ಓಕಖ ರದ್ದುಪಡಿಸಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತಂದಿವೆ!



PFRDA ಕಾಯಿದೆ ಪ್ರಕಾರ ಒಮ್ಮೆ ರಾಜ್ಯವೊಂದು NPS ಯೋಜನೆ ವ್ಯಾಪ್ತಿಗೆ ಸೇರಿದಲ್ಲಿ ಅದರಿಂದ ಆಚೆಗೆ ಬರಲು ಅವಕಾಶವಿಲ್ಲ. ಈಗಾಗಲೇ ರಾಜ್ಯ ಸರ್ಕಾರಗಳು ಮತ್ತು ನೌಕರರು ಪಾವತಿಸಿರುವ ವಂತಿಕೆಯನ್ನು ವಾಪಸ್ ಹಳೆಯ ಪಿಂಚಣಿ ಘೋಷಿಸಿರುವ ರಾಜ್ಯಗಳಿಗೆ ಮರುಪಾವತಿಸಲು ಒಪ್ಪಿರುವುದಿಲ್ಲ. ಅಲ್ಲದೇ ಜಿ.ಎಸ್.ಟಿ ತೆರಿಗೆ ನೀತಿಯಡಿ ರಾಜ್ಯ ಸರ್ಕಾರಗಳ ಆದಾಯ ಕುಸಿದಿರುವುದರಿಂದ ಹಿಂದಿನಂತೆ ರಾಜ್ಯ ಸರ್ಕಾರಗಳಿಗೆ ಪಿಂಚಣಿ ನೀಡುವುದು ಅಷ್ಟು ಸುಲಭವಲ್ಲವಾದ್ದರಿಂದ ಕೇಂದ್ರ ಸರ್ಕಾರವು ಅದರ ಹೊರೆ ಭರಿಸುವುದು ಅನಿವಾರ್ಯವಾಗಿದೆ.

ದೇಶದಾದ್ಯಂತ 'ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ'ದ ನಾಯಕತ್ವದಲ್ಲಿ ಎಲ್ಲ OPS, NPS ಮತ್ತು ಹೊರಗುತ್ತಿಗೆ ನೌಕರರು ಒಗ್ಗೂಡಿ **PFRDA** ಕಾಯಿದೆ ರದ್ದುಪಡಿಸಬೇಕೆಂದು, ದೇಶದಾದ್ಯಂತ ಖಾಲಿಯಿರುವ 68 ಲಕ್ಷ ಹುದ್ದೆ ಭರ್ತಿಗೆ, ಹೊರಗುತ್ತಿಗೆ ನೌಕರರ ಖಾಯಮಾತಿಗಾಗಿ ಹಾಗೂ ಸರ್ಕಾರಿ ಉದ್ದಿಮೆಗಳ ಖಾಸಗೀಕರಣ ವಿರೋಧಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ರೂಪಿಸಲು ಕಾರ್ಮಿಕ ರೈತಾಪಿಯೊಂದಿಗೆ ಐಕ್ಯತೆಯ ಜಂಟಿ ಹೋರಾಟಗಳು ಸೇರಿದಂತೆ ಹಲವು ಹೋರಾಟಗಳನ್ನು ನಡೆಸುತ್ತಿದೆ.

ಈ ಹೋರಾಟದ ಕಿಚ್ಚನ್ನು ದುರ್ಬಲಗೊಳಿಸಲು ಆಳುವ ಶಕ್ತಿಗಳು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಹೋರಾಟದಲ್ಲಿಯಾಗಲೀ ರೈತಾಪಿ–ಕಾರ್ಮಿಕ ಸಂಘಟನೆಗಳ ಪ್ರಮುಖವಾಹಿನಿ ಹೋರಾಟದಲ್ಲಿಯಾಗಲೀ ಒಡಗೂಡದಂತಹ ರೀತಿಯಲ್ಲಿ ಎನ್.ಪಿ.ಎಸ್ ನೌಕರರನ್ನು ದಿಕ್ಕುತಪ್ಪಿಸಲು ಯತ್ನಿಸುತ್ತಿವೆ.

ಕರ್ನಾಟಕದಲ್ಲಿ ಎನ್.ಪಿ.ಎಸ್. ನೌಕರರು 2022 ಡಿಸೆಂಬರ್ 19 ರಂದು 'ಮಾಡು ಇಲ್ಲವೇ ಮಡಿ' ಎಂಬ ಘೋಷವಾಕ್ಯದೊಂದಿಗೆ ಅನಿರ್ದಿಷ್ಟ ಧರಣಿ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದಾರೆ.

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಕೇಂದ್ರ ಸರ್ಕಾರಿ ನೌಕರರ ಒಕ್ಕೂಟದೊಂದಿಗೆ ಒಡಗೂಡಿ ಸರಣಿ ಹೋರಾಟಗಳನ್ನು ರೂಪಿಸುತ್ತಿದ್ದು ನವದೆಹಲಿಯಲ್ಲಿ ಡಿಸೆಂಬರ್ 8 ರಂದು ಜಂಟಿ ಸಮಾವೇಶ ನಡೆಸಿದೆ. ■

ದೇವದಾಸಿ ಮಹಿಳೆಯರ ಸಮೀಕ್ಷೆಗೆ ಸರ್ಕಾರದ ನಿರ್ಧಾರ:

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಸ್ವಾಗತ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಸಚಿವರು ಇಲಾಖೆಯ ಉನ್ನತ ಮಟ್ಟದ ಅಧಿಕಾರಗಳ ಜೊತೆ ನಡೆಸಿದ ಜಂಟಿ ಸಭೆಯು ಬಿಟ್ಟು ಹೋದ ಮಹಿಳೆಯರ ಗಣತಿ ಮಾಡಲು ಕ್ರಮ ಕೈಗೊಳ್ಳುವಂತೆ ನಿರ್ಧರಿಸಿರುವುದು ಸ್ವಾಗತಾರ್ಹವಾದುದಾಗಿದೆ. ಇದು ಕಳೆದ ಒಂದು ದಶಕದಿಂದ ನಾವು ನಡೆಸಿದ ಹೋರಾಟಕ್ಕೆ ದೊರೆತ ಜಯವಾಗಿದೆ ಎಂದು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ತಿಳಿಸಿದೆ.

ಹೇಳಿಕೆಯನ್ನು ಬಿಡುಗಡೆಗೊಳಿಸಿರುವ ಸಂಘದ ಅಧ್ಯಕ್ಷೆ ಟಿ.ವಿ. ರೇಣುಕಾ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಾಗೂ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ಮಕ್ಕಳ ಹೋರಾಟ ಸಮಿತಿಗಳು ಜಂಟಿಯಾಗಿ ನಿರಂತರ ಹೋರಾಟ ನಡೆಸಿ ರಾಜ್ಯ ಸರಕಾರದ ಮೇಲೆ ಒತ್ತಡ ಹೇರಿದ ಮತ್ತು ಸಚಿವರನ್ನು ಕಂಡು ಹಲವು ಸುತ್ತಿನ ಮಾತುಕತೆ ನಡೆಸಿದ ಫಲವಾಗಿ ಸರ್ಕಾರ ಸಮೀಕ್ಷೆ ನಡೆಸುವ ಬಗ್ಗೆ ನಿರ್ಧಾರ ಕೈಗೊಂಡಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದ್ದಾರೆ.

ರಾಜ್ಯದಾದ್ಯಂತ ಇರುವ ದಶ ಸಾವಿರಗಟ್ಟಲೆ ದೇವದಾಸಿ ಮಹಿಳೆಯರನ್ನು ದುರುದ್ದೇಶದಿಂದಲೇ ಗಣತಿಯಿಂದ ಹೊರಗಿಡಲಾಗಿತ್ತು. ಇದರಿಂದ ಈ ಮಹಿಳೆಯರು ಅವರ ಮಕ್ಕಳು ಸರಕಾರದ ಯಾವುದೇ ಸೌಲಭ್ಯಗಳು ದೊರೆಯದೇ ಸಂಕಷ್ಟದಲ್ಲಿದ್ದರು. ಇದೀಗ ಸಚಿವರ ಮಟ್ಟದಲ್ಲಿ ನಡೆದ ಸಭೆಯು ಗಣತಿಯನ್ನು ಕೈಗೊಳ್ಳುವಂತೆ ಬೆಳಗಾವಿ ವಿಧಾನಸಭೆ ಅಧಿವೇಶನದಲ್ಲಿಯೇ ನಿರ್ಣಯಿಸಬೇಕೆಂಬ ಅಭಿಪ್ರಾಯಕ್ಕೆ ಬಂದಿರುವುದನ್ನು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಾಗೂ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ಒಕ್ಕೂಟಗಳು ಬೆಂಬಲಿಸುತ್ತವೆ ಮತ್ತು ಈ ಮೂಲಕ ಮುಖ್ಯಮಂತ್ರಿಗಳು ಕೂಡಲೇ ಅಧಿವೇಶನದಲ್ಲಿ ಕ್ರಮವಹಿಸುವಂತೆ ಒತ್ತಾಯಿಸುತ್ತವೆ ಎಂದಿದ್ದಾರೆ.

ಅದೇ ರೀತಿ, ಮತ್ತೊಂದು ಹಕ್ಕೊತ್ತಾಯವಾದ ದೇವದಾಸಿ ಮಹಿಳೆಯರ ಮಕ್ಕಳ ಉನ್ನತ ಶಿಕ್ಷಣದ ಹಾಗೂ ಹಾಸ್ಟೆಲ್ ಸೌಲಭ್ಯಗಳ ವಿಚಾರದಲ್ಲಿ ಯಾವುದೇ ಅಂಕಗಳು ಮತ್ತು ಪ್ರವೇಶ ಪರೀಕ್ಷೆಗಳ ಸ್ಪರ್ಧೆ ಇಲ್ಲದೇ ಒಳ ಮೀಸಲಾತಿ ಆಧಾರದಲ್ಲಿ ಮತ್ತು ನೇರ ಪ್ರವೇಶಕ್ಕೆ ಕ್ರಮವಹಿಸಲು ನಿರ್ಧಾರಿಸಿರುವುದು ಸಹ ಸ್ವಾಗತಾರ್ಹವಾಗಿದೆ. ಈ ಕುರಿತಂತೆ ತಕ್ಷಣವೇ ರಾಜ್ಯ ಸರಕಾರ ಆದೇಶ ಹೊರಡಿಸಲು ನಮ್ಮ ಒತ್ತಾಯವಾಗಿದೆ ಎಂದು ಹೇಳಿದ್ದಾರೆ.

ಮಾಸಿಕ ಸಹಾಯವನ್ನು 3000 ರೂ.ಗಳಿಗೆ ಹೆಚ್ಚಿಸಿರಿ

ಸಂಘದ ಪ್ರಧಾನ ಕಾರ್ಯದರ್ಶಿ ಬಿ. ಮಾಳಮ್ಮ ಮಾತನಾಡಿ, ಕಳೆದ ಐದು ವರ್ಷಗಳಿಂದಲೂ ನಾವು ಬಲವಾಗಿ ಒತ್ತಾಯಿಸುವ ದೇವದಾಸಿ ಮಹಿಳೆಯರ ಮಾಸಿಕ ಸಹಾಯಧನ / ಪಿಂಚಣಿಯನ್ನು ಕನಿಷ್ಟ 1500 ರೂ.ಗಳಿಂದ ➚

ಶಿಕ್ಷಣ ಕ್ಷೇತ್ರದಲ್ಲಿ ಕೋಮುವಾದದ ಅಪಾಯ

ಡಾ. ಫರ್ಹತ್ ಖಾನ್ ಬರೆದಿರುವ "ಕಲೆಕ್ಟಿವ್ ವಯಲೆನ್ಸ್ ಆ್ಯಂಡ್ ಕ್ರಿಮಿನಲ್ ಜಸ್ಟಿಸ್ ಸಿಸ್ಟಂ' ಕೃತಿಯನ್ನು ಕಾಲೇಜಿನ ಗ್ರಂಥಾಲಯದಲ್ಲಿ ಇಟ್ಟಿದ್ದಾರೆ ಎಂದು ಪ್ರಿನ್ಸಿಪಾಲರ ವಿರುದ್ಧವೇ ದೂರಿದ್ದಾರೆ. ಪುಸ್ತಕದಲ್ಲಿ ಆರ್‌ಎಸ್‌ಎಸ್ ಮತ್ತು ಹಿಂದೂ ಸಮುದಾಯದ ವಿರುದ್ಧ ಟಿಪ್ಪಣಿಗಳಿವೆ ಎನ್ನುವುದು ಎಬಿವಿಪಿ ವಾದವಾಗಿದೆ. ಈ ಪುಸ್ತಕವನ್ನು ತಾವು ಪ್ರಿನ್ಸಿಪಾಲರಾಗಿ ಅಧಿಕಾರ ಸ್ವೀಕರಿಸಿದ 2019ಕ್ಕಿಂತ ಮುಂಚೆಯೇ, 2014ರಲ್ಲಿ ಲೈಬ್ರರಿಗಾಗಿ ಖರೀದಿಸಲಾಗಿತ್ತು ಎಂದು ಪ್ರಿನ್ಸಿಪಾಲರು ಸ್ಪಷ್ಟನೆ ನೀಡಿದರೂ ಪ್ರತಿಭಟನೆಕಾರರು ಅವರನ್ನು ಟಾರ್ಗೆಟ್ ಮಾಡಿದ್ದಾರೆ. ಅಂತಿಮವಾಗಿ ಪ್ರಿನ್ಸಿಪಾಲರು ರಾಜೀನಾಮೆ ನೀಡುವಂತೆ ಅವರು ಪ್ರತಿಭಟನೆ ಮುಂದುವರಿಸಿದರು.

ಪ್ರಕಾಶ್ ಕಾರತ್

ಮಧ್ಯ ಪ್ರದೇಶದ ಇಂದೋರ್‌ನ ಸರಕಾರಿ ನೂತನ ಕಾನೂನು ಕಾಲೇಜು ಮತ್ತು ಇತರ ಕೆಲವು ಸ್ಥಳಗಳಲ್ಲಿ ನಡೆದಿರುವ ಘಟನೆಗಳು ಸಮಾಜದಲ್ಲಿ ಕೋಮುವಾದ ಎಷ್ಟು ಆಳವಾಗಿ ಬೇರೂರಿದೆ ಹಾಗೂ ಇಂತಹ ಧ್ರುವೀಕರಣವು ಶಿಕ್ಷಣ ವ್ಯವಸ್ಥೆಯನ್ನೂ ಹೇಗೆ ಕಾಡುತ್ತಿದೆ ಎನ್ನುವುದನ್ನು ತೋರಿಸುತ್ತದೆ. ಇದು ಕಳವಳಕಾರಿ ಸಂಕೇತವಾಗಿದೆ.

ಇಂದೋರ್‌ನ ನೂತನ ಸರಕಾರಿ ಲಾ ಕಾಲೇಜಿನಲ್ಲಿ ನಡೆದಿರುವ ಅತ್ಯಂತ ಕೆಟ್ಟ ಘಟನೆಯನ್ನು, ಬೋಧಕ ವರ್ಗದಲ್ಲಿ (ಟೀಚಿಂಗ್ ಫ್ಯಾಕಲ್ಟಿ) ಮುಸ್ಲಿಮರನ್ನು ತೆಗೆದುಹಾಕುವ ಕೋಮುವಾದಿ ಕ್ಲೀನ್ಸಿಂಗ್ ಆಗಿದೆ ಎಂದು ಮಾತ್ರವೇ ಕರೆಯಬಹುದಾಗಿದೆ. 'ಕಾಲೇಜಿನ ನಾಲ್ವರು ಮುಸ್ಲಿಂ ಬೋಧಕರು ಧಾರ್ಮಿಕ ಮೂಲಭೂತವಾದಿ ಚಿಂತನೆಯನ್ನು ಬೆಂಬಲಿಸುತ್ತಿದ್ದಾರೆ' ಎಂದು ಆರೋಪಿಸಿದ ಆರ್‌ಎಸ್‌ಎಸ್ ಸಂಯೋಜಿತ ಅಖಿಲ ಭಾರತೀಯ ವಿಧ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಕಾಲೇಜು ಘಟಕ ಪ್ರತಿಭಟನೆ ಆರಂಭಿಸಿತ್ತು. ಕಾಲೇಜಿನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮುಸ್ಲಿಂ ಫ್ಯಾಕಲ್ಟಿ ಇರುವುದನ್ನು ಕೂಡ ಎಬಿವಿಪಿ ಪ್ರಶ್ನಿಸಿತ್ತು. ವಾಸ್ತವವಾಗಿ 28 ಫ್ಯಾಕಲ್ಟಿ ಸದಸ್ಯರಲ್ಲಿ ನಾಲ್ವರು ಮಾತ್ರ ಮುಸ್ಲಿಮರಾಗಿದ್ದಾರೆ. ಮುಸ್ಲಿಂ ಶಿಕ್ಷಕರು 'ಕ್ಯಾಂಪಸ್ ಒಳಗಡೆ ಮುಸ್ಲಿಂ ಮತ್ತು ಇಸ್ಲಾಮಿಕ್ ಸಂಸ್ಕೃತಿಯನ್ನು ಉತ್ತೇಜಿಸುತ್ತಿದ್ದಾರೆ' ಎಂದು ಎಬಿವಿಪಿ ಘಟಕದ ಅಧ್ಯಕ್ಷ ಸಲ್ಲಿಸಿದ ಮನವಿ ಪತ್ರದಲ್ಲಿ ಆರೋಪಿಸಲಾಗಿದೆ. ಈ ಶಿಕ್ಷಕರು ವಿದ್ಯಾರ್ಥಿನಿಯರನ್ನು ರೆಸ್ಟೋರೆಂಟ್ ಮತ್ತು ಪಬ್‌ಗಳಿಗೆ ಕರೆದುಕೊಂಡು ಹೋಗಿದ್ದಾರೆಂಬ ಅಸಂಗತ ಆರೋಪ ಮಾಡಿ ಅವರು 'ಲವ್ ಜಿಹಾದ್'ಗೆ ಪ್ರಚೋದಿಸುತ್ತಿದ್ದಾರೆ ಎಂದೂ ಆಪಾದಿಸಲಾಗಿದೆ.

ಸ್ವತಃ ಮುಸ್ಲಿಮರಾಗಿರುವ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊಫೆಸರ್ ಇನಾಮುರ್ ರೆಹಮಾನ್, ಎಬಿವಿಪಿ ಆರೋಪಗಳಿಗೆ ಸ್ಪಂದಿಸಿ ನಾಲ್ವರು ಮುಸ್ಲಿಂ ಬೋಧಕರು ಹಾಗೂ ಆರೋಪ ಮಾಡಲಾಗಿರುವ ಇತರ ಇಬ್ಬರನ್ನು ಕೂಡ ಐದು ದಿನಗಳ ಕಾಲ ಬೋಧನಾ ಕಾರ್ಯದಿಂದ ಬಿಡುಗಡೆ ಮಾಡಿ ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರಿಂದ ತನಿಖೆಗೆ ಆದೇಶಿಸಿದ್ದಾರೆ.

ಇಷ್ಟರಿಂದಲೇ ತೃಪ್ತರಾಗದ ಎಬಿವಿಪಿ ಕಾರ್ಯಕರ್ತರು ಇನ್ನಷ್ಟು ಹೊಸ ಆರೋಪಗಳನ್ನು ಮಾಡಿದ್ದಾರೆ. ಡಾ. ಫರ್ಹತ್ ಖಾನ್ ಬರೆದಿರುವ "ಕಲೆಕ್ಟಿವ್ ವಯಲೆನ್ಸ್ ಆ್ಯಂಡ್ ಕ್ರಿಮಿನಲ್ ಜಸ್ಟಿಸ್ ಸಿಸ್ಟಂ' ಕೃತಿಯನ್ನು ಕಾಲೇಜಿನ ಗ್ರಂಥಾಲಯದಲ್ಲಿ ಇಟ್ಟಿದ್ದಾರೆ ಎಂದು ಪ್ರಿನ್ಸಿಪಾಲರ ವಿರುದ್ಧವೇ ದೂರಿದ್ದಾರೆ. ಪುಸ್ತಕದಲ್ಲಿ ಆರ್‌ಎಸ್‌ಎಸ್ ಮತ್ತು ಹಿಂದೂ ಸಮುದಾಯದ ವಿರುದ್ಧ ಟಿಪ್ಪಣಿಗಳಿವೆ ಎನ್ನುವುದು ಎಬಿವಿಪಿ ವಾದವಾಗಿದೆ. ಈ ಪುಸ್ತಕವನ್ನು ತಾವು ಪ್ರಿನ್ಸಿಪಾಲರಾಗಿ ಅಧಿಕಾರ ಸ್ವೀಕರಿಸಿದ 2019ಕ್ಕಿಂತ ಮುಂಚೆಯೇ, 2014ರಲ್ಲಿ ಲೈಬ್ರರಿಗಾಗಿ ಖರೀದಿಸಲಾಗಿತ್ತು ಎಂದು ಪ್ರಿನ್ಸಿಪಾಲರು ಸ್ಪಷ್ಟನೆ ನೀಡಿದರೂ ಪ್ರತಿಭಟನೆಕಾರರು ಅವರನ್ನು ಟಾರ್ಗೆಟ್ ಮಾಡಿದ್ದಾರೆ. ಅಂತಿಮವಾಗಿ ಪ್ರಿನ್ಸಿಪಾಲರು ರಾಜೀನಾಮೆ ನೀಡುವಂತೆ ಅವರು ಪ್ರತಿಭಟನೆ ಮುಂದುವರಿಸಿದರು.

ಎಬಿವಿಪಿಯ ದೂರು ಮತ್ತು ಪ್ರತಿಭಟನೆಗಳಿಗೆ ರಾಜ್ಯ ಗೃಹ ಸಚಿವ ನರೋತ್ತಮ ಮಿಶ್ರಾ ಬೆಂಬಲ ನೀಡಿದ್ದು, ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ನಿರ್ದೇಶನವನ್ನೂ ನೀಡಿದ್ದಾರೆ. ಸ್ಥಳೀಯ ಪೊಲೀಸರು, ಪ್ರಿನ್ಸಿಪಾಲರು, ಇನ್ನೊಬ್ಬ ಬೋಧಕ ಮಿರ್ಜಾ ಮೊಜಿಜ್ ಮತ್ತು ಪುಸ್ತಕದ ಲೇಖಕ ಮತ್ತು ಪ್ರಕಾಶಕರ ವಿರುದ್ಧ ಭಾರತೀಯ ದಂಡ ಸಂಹಿತೆಯ (ಐಪಿಸಿ) 153ಎ ಹಾಗೂ 295ಎ ಸೆಕ್ಷನ್ ಸಹಿತ ವಿವಿಧ ಸೆಕ್ಷನ್‌ಗಳಡಿ ಮೊಕದ್ದಮೆಗಳನ್ನು ದಾಖಲಿಸಿದ್ದಾರೆ. 153ಎ ಎರಡು ಗುಂಪುಗಳ ನಡುವೆ ವೈರತ್ವ ಹುಟ್ಟಿಸುವುದಕ್ಕೆ ಸಂಬಂಧಿಸಿದ್ದಾಗಿದೆ. 295ಎ ಒಂದು ಗುಂಪಿನ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಮಾಡುವುದಕ್ಕೆ ಸಂಬಂಧಿಸಿದ್ದಾಗಿದೆ. ಲೇಖಕ ಫರ್ಹಾತ್ ಖಾನ್ ಮತ್ತು ಮಾಜಿ ಪ್ರಿನ್ಸಿಪಾಲ್ ಸಹಿತ ಇತರ ಮೂವರನ್ನು ಬಂಧಿಸಲು ಪೊಲೀಸರು ಕಾಯುತ್ತಿದ್ದಾರೆ. ನಿರೀಕ್ಷಣಾ ಜಾಮೀನನ್ನು ಜಿಲ್ಲಾ ನ್ಯಾಯಾಲಯ ನಿರಾಕರಿಸಿರುವುದರಿಂದ ಬಂಧನಕ್ಕೆ ಕಾಯಲಾಗುತ್ತಿದೆ.

ಈ ರೀತಿಯಾಗಿ, ಕೆಲವೇ ದಿನಗಳಲ್ಲಿ ಪ್ರಿನ್ಸಿಪಾಲರ ಸಹಿತ ಎಲ್ಲಾ ಮುಸ್ಲಿಂ ಬೋಧಕರನ್ನು ಅವರವರ ಸ್ಥಾನದಿಂದ ಕಿತ್ತು ಹಾಕಲಾಗಿದೆ. ರಾಜ್ಯ ಸರಕಾರದ ಪರೋಕ್ಷ ಅನುಮೋದನೆಯೊಂದಿಗೆ ಇದನ್ನು ಮಾಡಲಾಗಿದೆ.

ಎಬಿವಿಪಿ ದೂರಿನ ಆಧಾರದಲ್ಲಿ, ಧಾರ್ಮಿಕ ಉಗ್ರವಾದ ಮತ್ತು ಅಂಥ ಇತರ ಆರೋಪಗಳ ತನಿಖೆಗಾಗಿ ಉನ್ನತ ಶಿಕ್ಷಣ ನಿರ್ದೇಶನಾಲಯ ಏಳು ಸದಸ್ಯರ ಸಮಿತಿಯನ್ನು ರಚಿಸಿದೆ.

ಬಿಜೆಪಿ ಆಡಳಿತವಿರುವ ಮಧ್ಯ ಪ್ರದೇಶದಲ್ಲಿ ಅಲ್ಪಸಂಖ್ಯಾತ ಶಿಕ್ಷಕರನ್ನು ಟಾರ್ಗೆಟ್ ಮಾಡಿದ ಇನ್ನೂ ಒಂದು ಪ್ರಕರಣವಿದೆ. ವಿದಿಶಾದ ಶಾಲೆಯೊಂದರ ಮುಸ್ಲಿಂ ಪ್ರಿನ್ಸಿಪಾಲ ಶೈನಾ ಫಿರ್ದೋಸ್ ಅವರನ್ನು ಬಜರಂಗದಳದ ಸದಸ್ಯರ ಕೆಲವು ಆರೋಪಗಳ ಮೇರೆಗೆ ಈ ವರ್ಷ ಅಕ್ಟೋಬರ್ ತಿಂಗಳಲ್ಲಿ ತೆಗೆದು ಹಾಕಲಾಗಿದೆ. ಇನ್ನೊಂದು ಜಿಲ್ಲೆಯಲ್ಲಿ, ಜಸ್ಟಿನ್ ಮತ್ತು ಜಾಸ್ಮಿನಾ ಖಾತೂನ್ ಎಂಬಿಬ್ಬರು ಶಿಕ್ಷಕರ ವಿರುದ್ಧ ವಿದಾರ್ಥಿಯೊಬ್ಬ ನೀಡಿದ ದೂರಿನ ಮೇರೆಗೆ ಐಪಿಸಿ ಸೆಕ್ಷನ್‌ಗಳನ್ವಯ ಮೊಕದ್ದಮೆ ದಾಖಲಿಸಲಾಗಿದೆ.

ಬೇರೆ ರಾಜ್ಯಗಳಲ್ಲಿ ಕೂಡ ಮುಸ್ಲಿಂ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ವಿರುದ್ಧ ಧರ್ಮಾಂಧತೆಯ ಆರೋಪಗಳ ಪ್ರಕರಣಗಳು ನಡೆದಿವೆ. ಕರ್ನಾಟಕದ ಮಣಿಪಾಲ ತಂತ್ರಜ್ಞಾನ ಸಂಸ್ಥೆ (ಎಂಐಟಿ) ಮುಸ್ಲಿಂ ವಿದ್ಯಾರ್ಥಿಯೊಬ್ಬನನ್ನು 'ಕಸಬ್–ರೀತಿಯ ಹೆಸರು' ಹೊಂದಿದ್ದಾನೆಂದು ಒಬ್ಬ ಪ್ರಾಧ್ಯಾಪಕನೇ ಬೆರಳು ಮಾಡಿ ತೋರಿಸಿ ಹಂಗಿಸಿದ ಪ್ರಕರಣ ವರದಿಯಾಗಿದೆ. ರಾಜಸ್ಥಾನದ ಬಾರ್ಮೇರ್‌ನ ಒಂದು ಸರಕಾರಿ ಕಾಲೇಜ್‌ನಲ್ಲಿ ತರಗತಿಯಲ್ಲಿನ ಏಕೈಕ ಮುಸ್ಲಿಂ ವಿದ್ಯಾರ್ಥಿನಿಯನ್ನು ಶಿಕ್ಷಕ ಸುತ್ತುವರಿದು ಆಕೆಯತ್ತ ಮುಸ್ಲಿಂ–ವಿರೋಧಿ ಮಾತುಗಳನ್ನಾಡಿದ್ದಾನೆ. ವಿದ್ಯಾರ್ಥಿನಿ ದೂರು ನೀಡಿದ್ದರೂ ಶಿಕ್ಷಕನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

ಹೊಸ ಶಿಕ್ಷಣ ನೀತಿಯ ಗುರಿ:

ಹೊಸ ಶಿಕ್ಷಣ ನೀತಿ ಮೂಲಕ, ಭಾರತದ ಪ್ರಾಚೀನ ಜ್ಞಾನಧಾರೆಗಳನ್ನು ಆಧರಿಸಿದೆ ಎನ್ನಲಾಗುವ ಮೌಲ್ಯಾಧಾರಿತ ಶಿಕ್ಷಣದ ಮರೆಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಕೋಮುವಾದೀಕರಿಸುವುದು ಮೋದಿ ಸರಕಾರದ ಗುರಿಗಳಲ್ಲಿ ಒಂದಾಗಿದೆ. ಆದರೆ, ಅಲ್ಪಸಂಖ್ಯಾತ ಮುಸ್ಲಿಂ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಟಾರ್ಗೆಟ್ ಮಾಡುವುದು ಈ ಕೇಸರೀಕರಣದ ಒಂದು ಪರಿಣಾಮವಾಗಿದೆ. ಬಿಜೆಪಿ–ಆಡಳಿತದ ರಾಜ್ಯಗಳಲ್ಲಿ ಇದು ಅಧಿಕೃತ ಪ್ರಾಯೋಜಿತ ಕಾರ್ಯಕ್ರಮವಾಗಿದೆ ಎನ್ನುವುದಕ್ಕೆ ಕರ್ನಾಟಕದ ಉದಾಹರಣೆಯೇ ಸಾಕ್ಷಿಯಾಗಿದೆ. ಸರಕಾರಿ ಪಿಯು ಕಾಲೇಜಿಗೆ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಿದ್ದು ಹಾಗೂ ಮಧ್ಯ ಪ್ರದೇಶದಲ್ಲಿ ಸರಕಾರಿ ಕಾನೂನು ಕಾಲೇಜಿನ ಮುಸ್ಲಿಂ ಶಿಕ್ಷಕಿಯರನ್ನು ಹಿಜಾಬ್ ಧರಿಸಿದ್ದಕ್ಕೆ ಡಿಬಾರ್ ಮಾಡಿ ಕ್ರಿಮಿನಲ್ ಆರೋಪಗಳಡಿ ಕೇಸ್ ದಾಖಲಿಸಿದ್ದನ್ನು ಗಮನಿಸಿದ್ದೇವೆ. ಮುಸ್ಲಿಮರನ್ನು ಎರಡನೇ ದರ್ಜೆ ಪ್ರಜೆಗಳಾಗಿ ಮಾಡುತ್ತಿರುವುದು ಸರಕಾರಿ ಶಿಕ್ಷಣ ವ್ಯವಸ್ಥೆಯಲ್ಲಿ ಕೂಡ ಪ್ರತಿಬಿಂಬಿತವಾಗುತ್ತಿದೆ.

ಜಿ20 ಅಧ್ಯಕ್ಷತೆ

ವಸುಧೈವ ಕುಟುಂಬಕಂ ಎಂಬ ಘೋಷಣೆಯ ಬೂಟಾಟಿಕೆ:

ಜಿ20 ಕೂಟದ ಅಧ್ಯಕ್ಷತೆ 2023ರಲ್ಲಿ ಭಾರತದ ಪಾಲಿಗೆ ಬಂದಿದ್ದು 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ' ಘೋಷಣೆಯೊಂದಿಗೆ ಅದನ್ನು ಸಂಭ್ರಮಿಸಿ ಅಧಿಕೃತವಾಗಿ ಆಚರಿಸಲಾಗುತ್ತಿದೆ. 'ಮಾನವ ಕುಟುಂಬದೊಳಗಡೆ ಸೌಹಾರ್ದತೆಯನ್ನು ಉತ್ತೇಜಿಸಲು ಭಾರತ ಸಂಕಲ್ಪಬದ್ಧವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ವೈಭವದ ಮಾತನ್ನಾಡಿದ್ದಾರೆ. ಆದರೆ, ದೇಶದ ಒಳಗಡೆ ಭಾರತೀಯ ಕುಟುಂಬವನ್ನು ಸಂಕುಚಿತವಾದ ಮತ್ತು ಕೋಮುವಾದದ ಆಧಾರದಲ್ಲಿ ವಿಭಜಿಸಲು ಬೇಕಾದ್ದೆಲ್ಲವನ್ನೂ ಮಾಡಲಾಗುತ್ತಿದೆ.

ಜಿ20 ಅಧ್ಯಕ್ಷತೆ ಸಂಬಂಧವಾಗಿ ದೇಶದಾದ್ಯಂತ ವಿವಿಧ ನಗರಗಳಲ್ಲಿ ನಾನಾ ಸಭೆಗಳು ಮತ್ತು ಕಾರ್ಯಕ್ರಮಗಳನ್ನು ಸರಕಾರ ಘೋಷಿಸಿದೆ. ಜಿ20ರ ಪ್ರಮುಖ ಕಾರ್ಯಕ್ರಮವೊಂದು ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆಯಲಿದೆ. ಸ್ಟಾಂಡ್–ಅಪ್ ಕಾಮಿಡಿಯನ್ ಮುನಾವರ್ ಫಾರೂಕಿ ಅವರ ಪ್ರದರ್ಶನ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಮಾಡುತ್ತದೆ ಎಂದು ಹಿಂದೂತ್ವ ಸಂಘಟನೆಯೊಂದು ನೀಡಿದ ದೂರಿನ ಆಧಾರದಲ್ಲಿ ಪ್ರದರ್ಶನಕ್ಕೂ ಮುನ್ನ ಬಂಧಿಸಲಾಗಿದ್ದು ಇದೇ ಇಂದೋರ್‌ನಲ್ಲಿ ಎನ್ನುವುದು ಗಮನಾರ್ಹ. ತಸ್ಲಿಂ ಅಲಿ ಎಂಬ ಬಳೆ ಮಾರಾಟಗಾರ ಕಳೆದ ವರ್ಷ ಹಿಂದೂ ವಸತಿ ಪ್ರದೇಶದಲ್ಲಿ ತನ್ನ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಕಾರಣಕ್ಕೆ ಆತನನ್ನು ಅಮಾನುಷವಾಗಿ ಥಳಿಸಿದ್ದು ಕೂಡ ಇದೇ ಇಂದೋರ್‌ನಲ್ಲಿ. ಆತನನ್ನು ಬಂಧಿಸಿ 107 ದಿನ ಜೈಲಿನಲ್ಲಿ ಕೊಳೆ ಹಾಕಲಾಗಿತ್ತು. ಮುಸ್ಲಿಮರೆಂಬ ಕಾರಣಕ್ಕೆ ಕಾನೂನು ವಿದ್ವಾಂಸರು ಮತ್ತು ಬೋಧಕರನ್ನು ಹೈರಾಣಗೊಳಿಸಿದ್ದು ಕೂಡ ಇದೇ ಇಂದೋರ್ ನಗರದಲ್ಲಿ ಎನ್ನುವುದನ್ನು ಗಮನಿಸಬೇಕು.

ಹಿಂದೂತ್ವ ಆಡಳಿತದ ನೈಜ ಮುಖವಾಡ ಮತ್ತು ವಸುಧೈವ ಕುಟುಂಬಕಂ ಎಂಬ ಘೋಷಣೆಯ ಬೂಟಾಟಿಕೆ ಏನೆಂಬುದು ಇಂದೋರ್‌ನಲ್ಲಿ ನಡೆಯುವ ಜಿ20 ಕಾರ್ಯಕ್ರಮ ನಡೆಯುವ ವೇಳೆ ಬಹಿರಂಗವಾಗಲಿದೆ.

ಅನು: ವಿಶ್ವ

➘ 3,000 ರೂ. ಗಳಿಗೆ ಹೆಚ್ಚಿಸಬೇಕು ಮತ್ತು ಎಲ್ಲ ವಯೋಮಾನದ ದೇವದಾಸಿ ಮಹಿಳೆಯರಿಗೂ ಸಹಾಯಧನ ದೊರೆಯುವಂತೆ ವಿಸ್ತರಿಸಬೇಕೆಂಬ ಹಕ್ಕೊತ್ತಾಯಗಳ ಕುರಿತು ಸಚಿವದ್ವಯರ ಹಾಗೂ ಅಧಿಕಾರಿಗಳ ಜಂಟಿ ಸಭೆಯು ಮೌನವಾಗಿರುವುದು ತೀವ್ರ ಖಂಡನೀಯ ಎಂದು ಹೇಳಿದ್ದಾರೆ.

ಪರಿಶಿಷ್ಟ ಜಾತಿ ಹಾಗು ಪಂಗಡದ ಉಪಯೋಜನೆಯ ಹಣವು ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 30,000 ಕೋಟಿ ರೂ.ಗಳಷ್ಟು ಕೊಳೆಯುತ್ತಾ ಬಿದ್ದಿದ್ದರೂ ಮತ್ತು ಪ್ರತಿವರ್ಷವೂ ಅದರಲ್ಲಿ ಹಲವು ಸಾವಿರ ಕೋಟಿ ರೂ.ಗಳನ್ನು ಬಳಸದೇ ಬಿಡಲಾಗುತ್ತಿದ್ದರೂ ಅದನ್ನು ದೌರ್ಜನ್ಯದ ದೇವದಾಸಿ ಪದ್ಧತಿಗೆ ತುತ್ತಾದ ಮಹಿಳೆಯರಿಗೆ ನೀಡದೇ ದೌರ್ಜನ್ಯ ಅನುಭವಿಸಲು ಬಿಟ್ಟಿರುವುದು ಅಕ್ಷಮ್ಯವಾಗಿದೆ ಎಂದು ತಿಳಿಸಿದರು.

ಈ ಕೂಡಲೇ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು ವಯೋಮಾನದ ಭೇದವಿಲ್ಲದೇ ಎಲ್ಲ ಮಹಿಳೆಯರಿಗೂ ಮಾಸಿಕ 3000 ರೂ.ಗಳ ಸಹಾಯಧನ ಅಥವಾ ಪಿಂಚಣಿ ದೊರೆಯುವಂತೆ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸುವಂತೆ ಒತ್ತಾಯಿಸಿದ್ದಾರೆ.

ದಲಿತ ಬಾಲಕಿಯರು ಹಾಗೂ ಮಹಿಳೆಯರ ಮೇಲೆ ದೌರ್ಜನ್ಯ ಹರಿಬಿಡುವ ಫಲಾನುಭವಿಗಳನ್ನು ಶಿಕ್ಷಿಸಿ

ಸಂಘದ ಗೌರವಾಧ್ಯಕ್ಷ ಯು. ಬಸವರಾಜ ಮಾತನಾಡಿ, ಅಧಿಕಾರಿಗಳಿಗೆ ಈಗಿರುವ ದೇವದಾಸಿ ಪದ್ಧತಿ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸೂಚಿಸಿರುವುದನ್ನು ಮತ್ತು ದೇವದಾಸಿ ಪದ್ಧತಿಗೆ ದಲಿತ ಬಾಲಕಿಯರು ಬಲಿಯಾಗುವುದನ್ನು ತಡೆಯಲು ಕ್ರಮವಹಿಸಿರುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಈ ಕಾಯ್ದೆಯು ದೌರ್ಜನ್ಯದ ದೇವದಾಸಿ ಪದ್ಧತಿಯ ಬಲಾಢ್ಯ ಫಲಾನುಭವಿಗಳನ್ನು ರಕ್ಷಿಸುತ್ತದೆ ಮತ್ತು ದೌರ್ಜನ್ಯಕ್ಕೆ ತುತ್ತಾದ ಬಾಲಕಿಯರನ್ನು ಮತ್ತು ಅವರ ಕುಟುಂಬದ ಸದಸ್ಯರನ್ನು ಹಿಂಸಿಸುವಂತಿದೆ. ಸದರಿ ಕಾಯ್ದೆಯ ಫಲಾನುಭವಿಯಿಂದ ದೌರ್ಜನ್ಯಕ್ಕೀಡಾದ ಮಹಿಳೆಯರು ಹಾಗೂ ಅವರ ಮಕ್ಕಳಿಗೆ ಫಲಾನುಭವಿಯ ಆಸ್ತಿಗಳಲ್ಲಿ ಪಾಲು ದೊರೆಯುವಂತೆ, ನೆರವು ಸಿಗುವಂತೆ ಮತ್ತು ಹೊಸದಾಗಿ ದೌರ್ಜನ್ಯದಲ್ಲಿ ತೊಡಗುವ ಫಲಾನುಭವಿಗಳು ಕಠಿಣ ಶಿಕ್ಷೆಗೊಳಪಡುವಂತೆ ತಿದ್ದುಪಡಿ ಮಾಡಲು ನಾವು ಒತ್ತಾಯಿಸುತ್ತೇವೆ ಎಂದಿದ್ದಾರೆ.

ನಮ್ಮ ಎರಡು ಸಂಘಟನೆಗಳು ನಿರಂತರವಾಗಿ ಒತ್ತಾಯಗಳನ್ನು ಈಡೇರಿಸಬೇಕು. ರಾಜ್ಯ ಸರಕಾರ ಈ ಕುರಿತು ಗಂಭೀರ ಕ್ರಮವಹಿಸದಿರುವುದೇ ದೌರ್ಜನ್ಯದ ದೇವದಾಸಿ ಪದ್ಧತಿಗೆ ಕುಮ್ಮಕ್ಕಾಗಿದೆ. ರಾಜ್ಯ ಸರಕಾರವು ದಲಿತ ಕುಟುಂಬಗಳ ಸ್ವಾವಲಂಬಿ ಆದಾಯದ ಸಬಲೀಕರಣಕ್ಕೆ ಕ್ರಮವಹಿಸಬೇಕು ಎಂಬುದು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಾಗೂ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ಮಕ್ಕಳ ಹೋರಾಟ ಸಮಿತಿಯ ಆಗ್ರಹವಾಗಿದೆ. ■





ಜಗತ್ತನ್ನು ಸೆಳೆಯುತ್ತಿರುವ ಜಾಗತಿಕ ಫುಟ್ಬಾಲ್ ಹಬ್ಬ

ಜಗದೀಶ್ ಸೂರ್ಯ, ಮೈಸೂರು.

ಈಗ ವಿಶ್ವದೆಲ್ಲೆಡೆ ಫುಟ್ಬಾಲ್ ಗುಂಗು ಆವರಿಸಿದೆ. ಅದು ಪುಟ್ಟ ರಾಷ್ಟ್ರದಿಂದ ಹಿಡಿದು ದೊಡ್ಡ ದೊಡ್ಡ ರಾಷ್ಟ್ರದವರೆಗೂ ವ್ಯಾಪಿಸಿದೆ. ಅಂತರ್ ರಾಷ್ಟ್ರೀಯ ಫುಟ್ಬಾಲ್ ಫೆಡರೇಷನ್ (ಫಿಫಾ) ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಸಂಘಟಿಸುವ ಜಾಗತಿಕ ಫುಟ್ಬಾಲ್ ಹಬ್ಬ. ಈ ವರ್ಷ ಮಧ್ಯ ಪ್ರಾಚ್ಯದ ಕೊಲ್ಲಿ ರಾಷ್ಟ ಕತಾರ್‌ನಲ್ಲಿ ಇದೇ 2022 ನವಂಬರ್ 21ರಿಂದ 22ನೇ ವಿಶ್ವಕಪ್ ಪಂದ್ಯಾವಳಿಗಳು ಆರಂಭವಾಗಿದೆ. 1930ರಲ್ಲಿ ಮೊಟ್ಟ ಮೊದಲ ಬಾರಿಗೆ ಈ ವಿಶ್ವಕಪ್ ಪಂದ್ಯಾವಳಿ ಆಯೋಜನೆಯಾಗಿತ್ತು. ನಂತರ ಕ್ರಿ.ಶ. 1940 ಮತ್ತು 1944ರಲ್ಲಿ ಮಹಾಯುದ್ಧದ ಕಾರಣಕ್ಕೆ ಈ ಪಂದ್ಯಾವಳಿ ನಡೆದಿರಲಿಲ್ಲ. ಕ್ರಿಕೆಟಿಗಿಂತಲೂ ಫುಟ್ಬಾಲ್ ಜಗತ್ತಿನಾದ್ಯಂತ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಆಟ. ನೇರವಾಗಿ, ದೂರದರ್ಶನದಂತಹ ವಿದ್ಯುನ್ಮಾನಗಳ ಮೂಲಕ ಈ ವಿಶ್ವಕಪ್ ಅನ್ನು ಅಭಿಮಾನಿಗಳು ಕಣ್ತುಂಬಿಕೊಳ್ಳುತ್ತಿದ್ದಾರೆ. ಈ ಕುರಿತು ವಿಶೇಷ ಲೇಖನ, ಓದಿ.

ವಿಶ್ವದ 32 ಬಲಿಷ್ಟ ತಂಡಗಳು ಪ್ರಶಸ್ತಿಗಾಗಿ ಸೆಣಸಾಟ ಆರಂಭಿಸಿವೆ. ಸ್ಟಾರ್ ಆಟಗಾರರಾದ ಅರ್ಜೆಂಟಿನಾದ ಲಿಯೋನಲ್ ಮೆಸ್ಸಿ, ಬ್ರೆಜಿಲ್‌ನ ನೈಮರ್ ಜುನಿಯರ್, ವಿನಿಸಿಯಸ್ ಜೂನಿಯರ್, ಪೊರ್ಚುಗಲ್‌ನ ಕ್ರಿಸ್ಟಿಯಾನೋ ರೋನಾಲ್ಡೊ, ಫ್ರಾನ್ಸ್‌ನ ಕೈಲಿಯನ್ ಎಂಬಾಪೆ, ಇಂಗ್ಲೆಂಡಿನ ಹ್ಯಾರಿ ಕೇನ್, ಸಾಕಾ, ಕ್ರೊವೇಶಿಯಾದ ಲ್ಯೂಕ್ ಮೊಡ್ರಕ್ ಇವರ ಆಟವನ್ನು ನೋಡಲು ಜನ ಗಡಿಗಳನ್ನು ಮೀರಿ ಹಾತೊರೆಯುತ್ತಿದ್ದಾರೆ. ಫಿಫಾದ ಇತಿಹಾಸದಲ್ಲೆ ಅತ್ಯಂತ ದುಬಾರಿ ವಿಶ್ವಕಪ್ ಪಂದ್ಯಾವಳಿ ಇದಾಗಿದೆ. ಈ ಪಂದ್ಯಾವಳಿಯನ್ನು ಆಯೋಜಿಸಲು ಕರ್ನಾಟಕದ ಅರ್ಧದಷ್ಟಿರುವ ಶ್ರೀಮಂತ ದೇಶ ಕತಾರ್ ಸುಮಾರು 20 ಲಕ್ಷ ಕೋಟಿಗೂ ಅಧಿಕ ಹಣವನ್ನು ಖರ್ಚು ಮಾಡಿ ಅದ್ದೂರಿಯಾಗಿ ನಡೆಸುತ್ತಿದೆ. ಈ ಹಿಂದೆ ರಷ್ಯಾ ಸುಮಾರು 1.4 ಲಕ್ಷ ಕೋಟಿ ಹಣವನ್ನು ಖರ್ಚು ಮಾಡಿತ್ತು. ಈ ಪಂದ್ಯಾವಳಿಗಾಗಿಯೇ ಕತಾರ್ 8 ಹೊಸ ಮೈದಾನಗಳನ್ನು ಸಿದ್ಧಪಡಿಸಿದೆ. ಪಂದ್ಯಾವಳಿಯ ನಂತರ ಈ ಮೈದಾನಗಳನ್ನು ಮಾಲ್, ಗ್ರಂಥಾಲಯ, ವಸ್ತು ಸಂಗ್ರಹಾಲಯ ಮಾಡಲಾಗುವುದೆಂದು ಹಾಗೂ ಮೈದಾನದಲ್ಲಿರುವ ಛೇರು, ಕಂಟೇನರ್ ಮುಂತಾದ ವಸ್ತುಗಳನ್ನು ಆಫ್ರಿಕಾದ ಬಡ ರಾಷ್ಟ್ರಗಳಿಗೆ ನೀಡುವುದಾಗಿ ಕತಾರ್ ಹೇಳಿಕೊಂಡಿದೆ.

32 ರಾಷ್ಟ್ರಗಳನ್ನು ತಲಾ 4 ತಂಡಗಳ 8 ಗುಂಪುಗಳಾಗಿ ವಿಂಗಡಿಸಿ ಆಡಿಸಲಾಗುತ್ತಿದೆ. ಈಗಾಗಲೇ ಮೊದಲ ಸುತ್ತಿನ ಪಂದ್ಯಗಳು ಹಾಗೂ 16ರ ಘಟ್ಟದ ಆಟಗಳು ಮುಗಿದಿವೆ. ನಿರೀಕ್ಷೆಯಂತೆ ಈ ಬಾರಿಯೂ ಕೂಡ ಸಾಕಷ್ಟು ಅಚ್ಚರಿಯ ಫಲಿತಾಂಶಗಳು ಬಂದಿವೆ. 3ನೇ ಶ್ರೇಯಾಂಕದ ಅರ್ಜೆಂಟಿನಾ ತಂಡ 52ನೇ ಶ್ರೇಯಾಂಕದ ಸೌದಿ ಅರೇಬಿಯಾ ತಂಡದ ಎದುರು ಸೋತಿದೆ. ಆಸ್ಟ್ರೇಲಿಯಾ ವಿರುದ್ಧ ಡೆನ್ಮಾರ್ಕ್, ಟ್ಯುನೇಶಿಯಾ ವಿರುದ್ಧ ಫ್ರಾನ್ಸ್, ಸ್ಪೇನ್, ಜರ್ಮನಿ ವಿರುದ್ಧ ಜಪಾನ್, ಬೆಲ್ಜಿಯಂ ವಿರುದ್ಧ ಮೊರಾಕ್ಕೊ, ಪೊರ್ಚುಗಲ್ ವಿರುದ್ಧ ದಕ್ಷಿಣ ಕೋರಿಯಾ ತಂಡಗಳು ಸೋತಿವೆ. ಸೆನೆಗಲ್, ಮೊರಾಕ್ಕೊ, ಘಾನ ತಂಡಗಳು ಬಲಿಷ್ಠ ತಂಡಗಳ ಜಯದ ಓಟಕ್ಕೆ ಬ್ರೇಕ್ ಹಾಕಿವೆ. ಇದರಿಂದಾಗಿ ಅಗ್ರ ಶ್ರೇಯಾಂಕಿತ ಹಿಂದಿನ ಚಾಂಪಿಯನ್ ತಂಡಗಳು ಈ ಬಾರಿ ಗ್ರೂಪ್ ಹಂತದಲ್ಲೇ ಮುಗ್ಗರಿಸಿ ಪಂದ್ಯಾವಳಿಯಿಂದಲೇ ಹೊರಬಿದ್ದಿವೆ. ಅಲ್ಲದೆ ಅತ್ಯಂತ ಬಡ ಹಾಗೂ ಕಡಿಮೆ ಜನಸಂಖ್ಯೆಯಿರುವ ರಾಷ್ಟ್ರಗಳು ಬಲಿಷ್ಠ ತಂಡಗಳನ್ನು ಸೋಲಿಸಿ ಹುಬ್ಬೇರುವಂತೆ ಮಾಡಿವೆ.



ಯೂರೋಪ್, ಆಫ್ರಿಕಾ, ದಕ್ಷಿಣ ಅಮೇರಿಕಾಗಳಲ್ಲಿ ಫುಟ್ಬಾಲ್ ಮೇಲಿನ ಪ್ರೀತಿ ಅಂತಿಂತದ್ದಲ್ಲ. ತಮ್ಮ ತಂಡ ಗೆದ್ದರೆ ಸಂಭ್ರಮಿಸಿ ಆಟಗಾರರನ್ನು ಆರಾಧಿಸುತ್ತಾರೆ, ಸೋತರೆ ಹಿಂಸೆಗೂ ಇಳಿದ ಎಷ್ಟೋ ಘಟನೆಗಳು ನಡೆದು ಹೋಗಿವೆ. 1994ರಲ್ಲಿ ನಡೆದ ವಿಶ್ವಕಪ್ ಪಂದ್ಯಾವಳಿಯಲ್ಲಿ ಯು.ಎಸ್.ಎ–ಅಮೇರಿಕಾ ವಿರುದ್ದದ ಪಂದ್ಯದಲ್ಲಿ ಕೊಲಂಬಿಯಾದ ಖ್ಯಾತ ಆಟಗಾರ ಡಿಫೆಂಡರ್ ಆ್ಯಂಡ್ರೂ ಎಸ್ಕೋಬಾರ್ ಯು.ಎಸ್.ಎ ಆಟಗಾರ ಒದ್ದ ಚೆಂಡನ್ನು ತಡೆಯಲು ಹೋಗಿ ತಮ್ಮ ಗೋಲ್ ಪೆಟ್ಟಿಗೆ ಗೋಲನ್ನು ಹೊಡೆದ ಕಾರಣಕ್ಕೆ ಎಸ್ಕೋಬಾರ್ ತನ್ನ ತಾಯ್ನಾಡಿಗೆ ಮರಳುವಾಗ ವಿಮಾನ ನಿಲ್ದಾಣದಲ್ಲೇ ಗುಂಡು ಹೊಡೆದು ಕೊಲ್ಲಲಾಯಿತು. ಸೌದಿ ಅರೇಬಿಯಾ ತಂಡ ಬಲಿಷ್ಟ ಅರ್ಜೆಂಟಿನಾ ತಂಡವನ್ನು ಸೋಲಿಸಿದ್ದಕ್ಕೆ ಅಂದು ರಾಷ್ಟ್ರಾದ್ಯಂತ ರಜೆ ಘೋಷಣೆ ಮಾಡಿ ಇಡೀ ರಾಷ್ಟ್ರವೇ ಸಂಭ್ರಮದಲ್ಲಿ ಮುಳುಗಿತ್ತು. ಟ್ಯುನೇಶಿಯಾ ತಂಡ ಪೊರ್ಚುಗಲ್ ತಂಡವನ್ನು ಸೋಲಿಸಿದ್ದಕ್ಕೆ ಜನ ರಾತ್ರಿ ಇಡೀ ಟ್ಯುನೇಶಿಯಾದ್ಯಂತ ಸಂಭ್ರಮಾಚರಣೆ ನಡೆಸಿದ್ದಾರೆ. ತಮ್ಮ ಕೊನೆಯ ವಿಶ್ವಕಪ್ ಪಂದ್ಯಾವಳಿಯನ್ನು ಆಡುತ್ತಿರುವ ಲಿಯೋನಲ್ ಮೆಸ್ಸಿ, ಕ್ರಿಸ್ಟಿಯಾನೋ ರೋನಾಲ್ಡೊ ಅವರ ಹೊಸ ಹೊಸ ದಾಖಲೆಗಳು ಈ ಬಾರಿಯ ವಿಶ್ವಕಪ್ ಪಂದ್ಯಾವಳಿಯನ್ನು ಶ್ರೀಮಂತಗೊಳಿಸಿದೆ. ಬಹಳ ಬೇಡಿಕೆಯ ಆಟಗಾರ ಲಿಯೋನಲ್ ಮೆಸ್ಸಿ ಈ ಪಂದ್ಯಾವಳಿಗಾಗಿ ತನ್ನ ಎಡಗಾಲಿನ ತೊಡೆಗೆ 7 ಸಾವಿರ ಕೋಟಿ ವಿಮೆ ಮಾಡಿಸಿದ್ದು ಭಾರೀ ಸುದ್ದಿಯಾಗಿದೆ. ನವೆಂಬರ್ 27 ರಂದು ನಡೆದ ಅರ್ಜೆಂಟಿನಾ ಮೆಕ್ಸಿಕೊ ನಡುವಿನ ಪಂದ್ಯವನ್ನು ದಾಖಲೆಯ 86 ಸಾವಿರ ಜನ ನೇರವಾಗಿ ಕ್ರೀಡಾಂಗಣದಲ್ಲಿ ವೀಕ್ಷಿಸಿದ್ದಾರೆ. ಬಲಿಷ್ಟ ತಂಡಗಳು ಈಗಾಗಲೇ ಕ್ವಾರ್ಟರ್ ಫೈನಲ್ ಹಂತ ಪ್ರವೇಶಿಸಿದೆ. ಡಿಸಂಬರ್ 9 ರಿಂದ ಕ್ವಾರ್ಟರ್ ಪಂದ್ಯಗಳು ಆರಂಭವಾಗಲಿದ್ದು ಪಂದ್ಯಗಳು ರೋಚಕವಾಗಿರುವುದರಲ್ಲಿ ಅನುಮಾನವಿಲ್ಲ.




ಈವರೆಗೆ ವಿಶ್ವಕಪ್ ಗೆದ್ದ ತಂಡಗಳು:

ಈವರೆಗೆ 21 ವಿಶ್ವಕಪ್ ಪಂದ್ಯಾವಳಿಗಳು ನಡೆದಿದ್ದು ಬ್ರೇಜಿಲ್ 5 ಬಾರಿ, ಜರ್ಮನಿ 4 ಬಾರಿ, ಇಟಲಿ 4 ಬಾರಿ, ಉರುಗ್ವೆ 2 ಬಾರಿ, ಅರ್ಜೇಂಟಿನಾ 2 ಬಾರಿ, ಫ್ರಾನ್ಸ್ 2 ಬಾರಿ, ಇಂಗ್ಲೆಂಡ್ 1 ಬಾರಿ, ಸ್ಪೇನ್ 1 ಬಾರಿ, ವಿಶ್ವಕಪ್ ಅನ್ನು ಗೆದ್ದಿವೆ.

ಬಹುಮಾನದ ಮೊತ್ತ:

ಈ ವಿಶ್ವಕಪ್ ಪಂದ್ಯಾವಳಿಯಲ್ಲಿ ಕಪ್ ಗೆದ್ದ ತಂಡಕ್ಕೆ ಚಿನ್ನ ಲೇಪಿತ ಟ್ರೋಫಿಯೊಂದಿಗೆ 42 ಮಿಲಿಯನ್ ಡಾಲರ್ ಬಹುಮಾನ, 2ನೇ ಸ್ಥಾನ ಪಡೆದ ತಂಡಕ್ಕೆ 30 ಮಿಲಿಯನ್ ಡಾಲರ್ ಬಹುಮಾನ, 3ನೇ ಸ್ಥಾನ ಪಡೆದ ತಂಡಕ್ಕೆ 27 ಮಿಲಿಯನ್ ಡಾಲರ್, 4ನೇ ಸ್ಥಾನ ಪಡೆದ ತಂಡಕ್ಕೆ 25 ಮಿಲಿಯನ್ ಡಾಲರ್, ಕ್ವಾರ್ಟರ್ ಫೈನಲ್‌ನಲ್ಲಿ ಸೋತ ತಂಡಕ್ಕೆ ತಲಾ 17 ಮಿಲಿಯನ್ ಡಾಲರ್, ಗ್ರೂಪ್ 16ರಲ್ಲಿ ಆಡಿ ಸೋತ ತಂಡಕ್ಕೆ ತಲಾ 13 ಮಿಲಿಯನ್ ಡಾಲರ್, ಗ್ರೂಪ್ ಹಂತದಿಂದ ನಿರ್ಗಮಿಸಿದ ತಂಡಕ್ಕೆ 9 ಮಿಲಿಯನ್ ಡಾಲರ್, ಹಾಗೂ ವಿಶ್ವಕಪ್ ಪಂದ್ಯಾವಳಿಯಲ್ಲಿ ಆಡಿದ ಪ್ರತಿ ತಂಡಕ್ಕೆ 1.5 ಮಿಲಿಯನ್ ಡಾಲರ್ ಸೇರಿ ಒಟ್ಟು 440 ಮಿಲಿಯನ್ ಡಾಲರ್ ಮೊತ್ತದ ಹಣವನ್ನು ಬಹುಮಾನವಾಗಿ ನೀಡಲಾಗುತ್ತದೆ. ಹಾಗೂ ಇದರ ಜೊತೆಗೆ ಅತಿ ಹೆಚ್ಚು ಗೋಲು ಹೊಡೆದ ಆಟಗಾರನಿಗೆ ಚಿನ್ನದ ಬೂಟು, ಅತ್ಯುತ್ತಮ ಹಾಗೂ ಅತಿ ಹೆಚ್ಚು ಗೋಲುಗಳನ್ನು ತಡೆದ ಗೋಲ್ ಕೀಪರ್‌ಗೆ ಚಿನ್ನದ ಗ್ಲೌಸ್ ನೀಡಲಾಗುತ್ತದೆ. ಈಗಾಗಲೇ ಪಂದ್ಯಾವಳಿ ಟಿಕೆಟ್‌ಗಳು ದಾಖಲೆಯ ಪ್ರಮಾಣದಲ್ಲಿ ಮಾರಾಟವಾಗುತ್ತಿದೆ. ಟಿಕೆಟ್‌ನ ಆರಂಭಿಕ ದರ ಭಾರತದ ರೂಪಾಯಿ ದರದಲ್ಲಿ 6 ಸಾವಿರ ರೂಪಾಯಿ ಇದೆ ಇದು ಪಂದ್ಯದಿಂದ ಪಂದ್ಯಕ್ಕೆ ಹೆಚ್ಚುತ್ತಾ ಹೋಗಲಿದೆ.



ಇನ್ನು ನಮ್ಮ ದೇಶದ ಫುಟ್ಬಾಲ್ ತಂಡ ಈ ವಿಶ್ವಕಪ್ ಪಂದ್ಯಾವಳಿಯಲ್ಲಿ ಆಡುತ್ತಿಲ್ಲವಾದರೂ ಫುಟ್ಬಾಲ್ ಕ್ರೇಜ್ ಏನು ಕಮ್ಮಿ ಇಲ್ಲ. ಕ್ರಿಕೆಟ್ ಅನ್ನೇ ಉಸಿರಾಡುತ್ತಿರುವ ಭಾರತದಲ್ಲಿ ಫುಟ್ಬಾಲ್ ಜ್ವರ ಜೋರಾಗಿಯೇ ಇದೆ. ಕೇರಳ, ಪಶ್ಚಿಮ ಬಂಗಾಳದ ಬೀದಿ–ಬೀದಿಗಳಲ್ಲಿ ತನ್ನ ನೆಚ್ಚಿನ ಆಟಗಾರರ, ತಂಡಗಳ ಫ್ಲೆಕ್ಸ್, ಕಟೌಟ್‌ಗಳು

ರಾರಾಜಿಸುತ್ತಿವೆ. ನೆಚ್ಚಿನ ತಂಡಗಳ ಪಂದ್ಯಗಳಿದ್ದಾಗ ಆಯಾ ದೇಶಗಳ ಟೀ ಶರ್ಟ್ ಧರಿಸಿ, ಬಾವುಟ ಹಿಡಿದು ಬೀದಿಗಳಲ್ಲಿ ಮೆರವಣಿಗೆ ನಡೆಯುತ್ತಿದೆ. ಹಾಗೆಯೇ ಬೆಟ್ಟಿಂಗ್ ಭರಾಟೆಯೂ ಸಹ ಜೋರಾಗಿಯೇ ಇದೆ. ಇನ್ನು ಕೇರಳದಲ್ಲಂತೂ ಅಭಿಮಾನಿಗಳು ಲಿಯೋನಲ್ ಮೆಸ್ಸಿ, ಕ್ರಿಸ್ಟಿಯಾನೋ ರೋನಾಲ್ಡೊ, ನೈಮರ್ ಜೂನಿಯರ್ ಇವರುಗಳ ಭಾರೀ ಕಟೌಟ್‌ಗಳನ್ನು ಸ್ಥಳೀಯ ನದಿಯಲ್ಲಿ ನಿಲ್ಲಿಸುವ ಮೂಲಕ ಕ್ರೀಡಾ ಜಗತ್ತನ್ನು ತಮ್ಮತ್ತ ಸೆಳೆದಿದ್ದರು. ಇದನ್ನು ಫಿಫಾ ಕೂಡಾ ತನ್ನ ಫೇಸ್ಬುಕ್, ಟ್ವಿಟ್ಟರ್ ಖಾತೆಗಳಲ್ಲಿ ಪ್ರಶಂಸಿಸಿ ಹಂಚಿಕೊಂಡಿತ್ತು. ಇದಕ್ಕೆ ಪ್ರತಿಯಾಗಿ ಕೇರಳದ ಮುಖ್ಯ ಮಂತ್ರಿ ಪಿಣರಾಯಿ ವಿಜಯನ್ ಫಿಫಾದ ಪೋಸ್ಟ್‌ಗೆ ಮರು ಟ್ವಿಟ್ ಮಾಡಿ ಧನ್ಯವಾದಗಳನ್ನು ತಿಳಿಸಿದ್ದರು. ಈ ಪಂದ್ಯಾವಳಿಗಳ ಎಲ್ಲಾ ಪಂದ್ಯಗಳನ್ನು ದೂರದರ್ಶನದ ಮೂಲಕ ದಾಖಲೆಯ ಪ್ರಮಾಣದಲ್ಲಿ ವೀಕ್ಷಿಸಲಾಗಿದೆ.

ಫುಟ್ಬಾಲ್‌ನಲ್ಲಿ ಭಾರತ:

ಭಾರತ ಫುಟ್ಬಾಲ್ ತಂಡ ಈವರೆಗೂ ವಿಶ್ವಕಪ್ ಪಂದ್ಯಾವಳಿಯಲ್ಲಿ ಆಡಿಲ್ಲ. 1948ರಲ್ಲಿ ಲಂಡನ್‌ನಲ್ಲಿ ನಡೆದ ಒಲಂಪಿಕ್ಸ್‌ನಲ್ಲಿ ಆಡಿದ ಆಟವೇ ಕೊನೆಯ ಪಂದ್ಯವಾಗಿದೆ. ಪ್ರತಿ ವಿಶ್ವಕಪ್ ಆರಂಭದ 2 ವರ್ಷಕ್ಕೂ ಮುನ್ನಾ ಫುಟ್ಬಾಲ್ ಆಡುವ ಹಾಗೂ ಫಿಫಾ ಜೊತೆ ನೊಂದಾಯಿಸಿಕೊಂಡಿರುವ ತಂಡಗಳಿಗೆ ಅರ್ಹತಾ ಪಂದ್ಯಗಳನ್ನು ನಡೆಸಲಾಗುತ್ತದೆ. ಅವುಗಳಲ್ಲಿ ಗೆದ್ದು ಹೆಚ್ಚಿನ ಅಂಕ ಪಡೆದ 32 ತಂಡಗಳಿಗೆ ಮಾತ್ರ ವಿಶ್ವಕಪ್ ಪಂದ್ಯಾವಳಿಯಲ್ಲಿ ಆಡಲು ಅವಕಾಶ ನೀಡಲಾಗುತ್ತದೆ. ಈ ಬಾರಿಯ ವಿಶ್ವಕಪ್‌ಗೆ ನಡೆದ ಅರ್ಹತಾ ಸುತ್ತಿನ ಪಂದ್ಯಗಳ ಗುಂಪಿನಲ್ಲಿ ಭಾರತ ತಂಡ ಕತಾರ್, ಒಮನ್, ಅಫ್ಘಾನಿಸ್ತಾನ, ಬಾಂಗ್ಲಾದೇಶದ ತಂಡಗಳೊಂದಿಗೆ ಆಡಿ 8 ಪಂದ್ಯದಲ್ಲಿ ಒಂದರಲ್ಲಿ ಗೆದ್ದು 3 ರಲ್ಲಿ ಸೋತು, 4 ರಲ್ಲಿ ಡ್ರಾ ಸಾಧಿಸಿ 7 ಅಂಕಗಳೊಂದಿಗೆ 3ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. 8 ಪಂದ್ಯದಲ್ಲಿ 7 ರಲ್ಲಿ ಗೆದ್ದು ಅಗ್ರ ಸ್ಥಾನ ಪಡೆದ ಕತಾರ್ ವಿಶ್ವಕಪ್ ಪಂದಾವಳಿಯಲ್ಲಿ ಆಡಲು ಅರ್ಹತೆ ಪಡೆದುಕೊಂಡಿತು. ಸದ್ಯ ಭಾರತ ತಂಡ ಫಿಫಾ ಱ್ಯಾಂಕಿಂಗ್‌ನಲ್ಲಿ 106 ನೇ ಸ್ಥಾನದಲ್ಲಿದೆ.

ಭಾರತದಲ್ಲಿ ಕೇರಳ, ಪಶ್ಚಿಮ ಬಂಗಾಳ, ಗೋವಾ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಹೆಚ್ಚು ಫುಟ್ಬಾಲ್ ಆಟ ಆಡಲಾಗುತ್ತಿದೆ. ನಮ್ಮಲ್ಲೂ ಸಾಕಷ್ಟು ಪ್ರತಿಭೆಗಳಿದ್ದರೂ ಸಾಕಷ್ಟು ಅವಕಾಶ, ಮೂಲ ಸೌಕರ್ಯದ ಕೊರತೆ, ಫುಟ್ಬಾಲ್‌ಗೆ ಮನ್ನಣೆ ನೀಡದಿರುವುದು ಭಾರತ ಹಿಂದುಳಿಯಲು ಪ್ರಮುಖ ಕಾರಣ. 1982ರಲ್ಲಿ ಕ್ರಿಕೆಟ್ ವಿಶ್ವಕಪ್ ಅನ್ನು ಭಾರತ ಗೆದ್ದ ಮೇಲಂತೂ ಫುಟ್ಬಾಲ್ ಸೇರಿದಂತೆ ಎಲ್ಲಾ ಆಟಗಳು ಮೂಲೆ ಗುಂಪಾದವು. ಕ್ರಿಕೆಟ್‌ಗೆ ಹೆಚ್ಚಿನ ಹಣ ಹೂಡಿಕೆ, ಪ್ರಾಶಸ್ತ್ಯ ನೀಡಿದ್ದು ಹಾಗೂ ಕ್ರಿಕೆಟ್‌ಗೆ ಪ್ರತ್ಯೇಕ ಮಂಡಳಿ ರಚನೆಗೆ ಅವಕಾಶ ನೀಡಿದ್ದು ಕ್ರಿಕೆಟ್ ಬೆಳವಣಿಗೆಗೆ ಪೂರಕವಾದವು. ಹಾಗೆಯೇ ಇಂದು ಕ್ರಿಕೆಟ್, ಫುಟ್ಬಾಲ್, ಕಬಡ್ಡಿ ಆಟಗಳನ್ನು ಕೇವಲ ಲಾಭದ ದೃಷ್ಟಿಯಿಂದಷ್ಟೇ ನೋಡಲಾಗುತ್ತಿದೆ. ಅದಕ್ಕಾಗಿ ಇಂಡಿಯನ್ ಪ್ರೀಮಿಯರ್ ಲೀಗ್, ಇಂಡಿಯನ್ ಸೂಪರ್ ಲೀಗ್, ಪ್ರೋ ಕಬಡ್ಡಿಯಂತಹ ಹಣದ ಹೊಳೆ ಹರಿಸುವ ಶ್ರೀಮಂತ ಪಂದ್ಯಾವಳಿಗಳನ್ನು ನಡೆಸಲಾಗುತ್ತಿದೆ. ಹಾಗೆಯೇ ಇತ್ತೀಚೆಗೆ ಅಖಿಲ ಭಾರತ ಫುಟ್ಬಾಲ್ ಫೆಡರೇಷನ್‌ನಲ್ಲಿ ಹೆಚ್ಚಿದ ಮೂರನೇ ವ್ಯಕ್ತಿಗಳ (ಸರ್ಕಾರದ ತೀವ್ರ ತರಹದ) ಹಸ್ತಕ್ಷೇಪದಿಂದಾಗಿ ಫಿಫಾದಿಂದ ಅಖಿಲ ಭಾರತ ಫುಟ್ಬಾಲ್ ಫೆಡರೇಷನ್ ನಿಷೇಧಕ್ಕೊಳಗಾಗಿದ್ದು ಭಾರತದಲ್ಲಿ ಫುಟ್ಬಾಲ್ ಸ್ಥಿತಿಯನ್ನು ಸಾರಿ ಹೇಳಿದೆ.

ಫುಟ್ಬಾಲ್ ಇತಿಹಾಸ:

ಕಾಲಿನಿಂದ ಚೆಂಡನ್ನು ಒದೆಯುವ ಮೂಲಕ ಗುರಿ ಪೆಟ್ಟಿಗೆಗೆ ಸೇರಿಸುವ ಈ ಆಟಕ್ಕೆ ಬಹಳ ಹಿಂದಿನ ಇತಿಹಾಸವಿದೆ. ಅದರಲ್ಲೂ ಯೂರೋಪ್, ದಕ್ಷಿಣ ಅಮೇರಿಕಾದ ದೇಶಗಳಲ್ಲಿ ಈ ಆಟ ಹಾಸುಹೊಕ್ಕಾಗಿದೆ. ಅಲ್ಲಿನ ಜನ ಈ ಆಟವನ್ನು ತಮ್ಮ ಸಂಪ್ರದಾಯವನ್ನಾಗಿಸಿಕೊಂಡಿದ್ದಾರೆ. ಪ್ರಾಚೀನ ಕಾಲದಿಂದಲೂ ಅಲ್ಲಿನ ಹಳ್ಳಿಗಾಡಿನ ರೈತಾಪಿ ಜನರು, ಬುಡಕಟ್ಟು ಜನ ಕುಟುಂಬ ಸಮೇತರಾಗಿ ಈ ಆಟದಲ್ಲಿ ಪಾಲ್ಗೊಳ್ಳುತ್ತಿದ್ದರು. ಅಲ್ಲದೇ ಈ ಆಟದ ಮೇಲೆ ಕತೆಗಳು, ಹಾಡುಗಳೂ ಸಹ ಚಾಲ್ತಿಯಲ್ಲಿವೆ. ನಂತರ ಬ್ರಿಟೀಷರು ಈ ಆಟವನ್ನು ಹೊಸ ಮಾರ್ಪಾಟಿನೊಂದಿಗೆ ಜಗತ್ತಿಗೆ ಪರಿಚಯಿಸಿದರು. ನಂತರ ಈ ಆಟ ವಿಶ್ವವ್ಯಾಪಿಯಾಯಿತು. 1920ರಲ್ಲಿ ಬೆಲ್ಜಿಯಂನಲ್ಲಿ ನಡೆದ ಒಲಂಪಿಕ್ಸ್ ನಲ್ಲಿ ಮೊದಲ ಬಾರಿಗೆ ಫುಟ್ಬಾಲ್ ಅನ್ನು ಸೇರಿಸುವ ಮೂಲಕ ಮೊಟ್ಟ ಮೊದಲ ಅಂತರ್‌ರಾಷ್ಟ್ರಿಯ ಫುಟ್ಬಾಲ್ ಪಂದ್ಯಾವಳಿಗೆ ನಾಂದಿ ಹಾಡಿತು. ಹಾಗೂ 1930ರಲ್ಲಿ ಮೊದಲ ವಿಶ್ವಕಪ್ ಪಂದ್ಯಾಟ ದಕ್ಷಿಣ ಅಮೇರಿಕಾದ ಉರುಗ್ವೆಯಲ್ಲಿ ಸಂಘಟಿಸಲಾಗಿತ್ತು.

ರೋಚಕ ಪಂದ್ಯಗಳನ್ನು ಕಣ್ತುಂಬಿ ಕೊಳ್ಳೋಣ

ಒಂದು ಕಡೆ ಫುಟ್ಬಾಲ್ ವಿಶ್ವಕಪ್ ಇಡೀ ಜಗತ್ತನ್ನು ತನ್ನತ್ತ ಸೆಳೆಯುತ್ತಿದೆ. ನಮ್ಮ ದೇಶದಲ್ಲೂ ಕೋಟ್ಯಾಂತರ ಜನ ವಿಶ್ವಕಪ್ ಅನ್ನು ವೀಕ್ಷಿಸುತ್ತಾ, ತಮ್ಮ ನೆಚ್ಚಿನ ವಿದೇಶಿ ತಂಡಗಳನ್ನು, ವಿದೇಶಿ ಆಟಗಾರರ ಕಾಲ್ಚಳಕಗಳನ್ನು ನಿದ್ದೆಗೆಟ್ಟು ನೋಡುತ್ತಿದ್ದರೆ, ಮತ್ತೊಂದೆಡೆ ಜನಸಂಖ್ಯೆಯಲ್ಲಿ ಜಗತ್ತಿನಲ್ಲೇ ಎರಡನೇ ಸ್ಥಾನದಲ್ಲಿರುವ ನಮ್ಮ ದೇಶದಲ್ಲಿ ಒಂದೂವರೆ ಗಂಟೆ ಆಟವಾಡುವ 11 ಆಟಗಾರರು ಯಾಕಿಲ್ಲ? ಎಂಬ ಬೇಸರದ ಸಂಗತಿಯೂ ಹಾಗೂ ಗಂಭೀರ ಪ್ರಶ್ನೆಯೂ ನಮ್ಮನ್ನು ಕಾಡದಿರಲಾರದು.

ಒಟ್ಟಾರೆ ಮುಂದೆ ನಡೆಯಲಿರುವ ರೋಚಕ ಪಂದ್ಯಗಳನ್ನು ಕಣ್ತುಂಬಿಕೊಳ್ಳುತ್ತಾ, 2026ರಲ್ಲಿ ನಡೆಯಲಿರುವ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಪ್ರತಿನಿಧಿಸುವಂತಾಗಲಿ ಎಂದು ನಿರೀಕ್ಷಿಸೋಣ.







ಕತಾರ್ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಸುತ್ತಿಕೊಂಡ ವಿವಾದ

2010ರಲ್ಲಿ 2022 ವಿಶ್ವಕಪ್ ಪಂದ್ಯಾವಳಿ ಕತಾರ್‌ನಲ್ಲಿ ನಡೆಯಲಿದೆ ಎಂದು ಘೋಷಣೆಯಾಗುತ್ತಿದ್ದಂತೆ ವಿರೋಧ ವ್ಯಕ್ತವಾಯಿತು. ಏಕೆಂದರೆ ಕೇವಲ 30 ಲಕ್ಷ ಜನಸಂಖ್ಯೆ ಇರುವ ದೇಶ ಹೇಗೆ ಈ ಬೃಹತ್ ಪಂದ್ಯಾವಳಿಯನ್ನು ಆಯೋಜಿಸ ಬಲ್ಲದು ಎಂದು. ಆಗ ಕೇವಲ 1 ಮೈದಾನವನ್ನಷ್ಟೇ ಕತಾರ್ ಹೊಂದಿತ್ತು. ವಿಪರೀತ ಸೆಕೆ, ಮಾನವ ಸಂಪನ್ಮೂಲದ ಕೊರತೆ, ಭದ್ರತೆ ಇವೆಲ್ಲವನ್ನು ಈ ಸಣ್ಣ ದೇಶ ಹೇಗೆ ನಿರ್ವಹಿಸುತ್ತದೆ? ಇಷ್ಟೆಲ್ಲಾ ಕೊರತೆಗಳಿದ್ದಾಗ್ಯೂ ಕತಾರ್ ಹೇಗೆ ಈ ಅವಕಾಶ ಸಿಕ್ಕಿತು ಎಂಬೆಲ್ಲಾ ಪ್ರಶ್ನೆಗಳು ಎದ್ದವು. ಕತಾರ್ ತನ್ನ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಲಂಚ ನೀಡಿ ಈ ಅವಕಾಶ ಗಿಟ್ಟಿಸಿಕೊಂಡಿದೆ ಎಂದೂ ಆರೋಪಗಳು ಕೇಳಿಬಂದಿದ್ದವು ಹಾಗೂ ಕತಾರ್‌ನಲ್ಲಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ 'ಬಾಯ್ಕಟ್ ಕತಾರ್' ಎಂದು ಪ್ರತಿಭಟನೆಗಳು ನಡೆದಿವೆ. ಅಲ್ಲದೆ 2016ರವರೆಗೆ ಈ ಪಂದ್ಯಾವಳಿ ತಯಾರಿಯಲ್ಲಿ ಸುಮಾರು 6000 ಜನರು ಪ್ರಾಣ ತೆತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಭಾರತ, ಪಾಕಿಸ್ತಾನ, ನೇಪಾಳದ ವಲಸೆ ಕಾರ್ಮಿಕರನ್ನು 'ಕಾಫಿಲ್' ಎಂಬ ಆಧುನಿಕ ಜೀತ ಪದ್ಧತಿ ಮೂಲಕ ಈ ಕೆಲಸಕ್ಕೆ ದುಡಿಸಿಕೊಳ್ಳಲಾಗಿದೆ. ಇಲ್ಲಿ ಕೆಲಸ ಕೊಡುವ ಮಾಲಿಕರು ಕೆಲಸಗಾರರ ಪಾಸ್ ಪೋರ್ಟ್, ವಿಸಾವನ್ನು ತನ್ನ ವಶಕ್ಕೆ ಪಡೆದು 40 ಡಿಗ್ರಿ ಸೆಲ್ಸಿಯಸ್ ಉರಿ ಬಿಸಿಲಿನಲ್ಲಿ ಚಾವಣಿ ಮೇಲ್ಭಾಗ ಕೆಲಸ ಮಾಡಿಸಿದ್ದಾರೆ. ಅಲ್ಲದೇ ಕಾರ್ಮಿಕರಿಗೆ ತಂಗಲು ಕಿರಿದಾದ ಜಾಗ ನೀಡಲಾಗಿ ಸಾಕಷ್ಟು ಜನ ಉಸಿರಾಟ, ಚರ್ಮದ ಕಾಯಿಲೆಯಿಂದ ಮೃತಪಟ್ಟಿದ್ದಾರೆ, ಅವರಿಗೆ ತಿಂಗಳುಗಟ್ಟಲೆ ಸಂಬಳವನ್ನು ನೀಡಿಲ್ಲವೆಂದು ಮಾನವ ಹಕ್ಕುಗಳ ಹೋರಾಟಗಾರರು ದೂರಿದ್ದಾರೆ. ಇದಕ್ಕೆ ಕತಾರ್ 2016ರಲ್ಲೇ ಕಾಫಿಲ್ ಪದ್ಧತಿಯನ್ನು ನಿಷೇಧಿಸಲಾಗಿದೆ ಎಂದು ತಿಳಿಸಿದೆ. ಅಲ್ಲದೆ ಪಂದ್ಯಾವಳಿ ವೀಕ್ಷಣೆ ಮಾಡಲು ಬರುವ ಪ್ರವಾಸಿಗರಿಗೆ ವಸ್ತ್ರ ಸಂಹಿತೆ ಪ್ರಕಟಿಸಿ ಭಾರೀ ವಿರೋಧ ವ್ಯಕ್ತವಾದ ನಂತರ ಹಿಂಪಡೆದಿದೆ.

ಹೋರಾಟಗಳಿಗೆ ಆಟಗಾರರ ಬೆಂಬಲ

ಈ ಬಾರಿಯ ಪಂದ್ಯಾವಳಿಯಲ್ಲಿ ಹಲವು ವಿಶೇಷತೆಗಳು ಕಂಡುಬರುತ್ತಿವೆ. ಜರ್ಮನಿ ತಂಡ ಹ್ಯೂಮನ್ ರೈಟ್ಸ್ ಹಾಗೂ ಒನ್ ಲವ್ ಎಂದು ತಮ್ಮ ಜರ್ಸಿ (ಆಡುವಾಗ ತೊಡುವ ಟೀಶರ್ಟ್) ಮೇಲೆ ಬರೆದುಕೊಂಡು ಕತಾರ್‌ನಲ್ಲಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ ವಿರುದ್ಧ ಮತ್ತು ಸಲಿಂಗ ಪ್ರೇಮಕ್ಕೆ ಬೆಂಬಲ ನೀಡಿತು. ಇರಾನ್ ದೇಶದ ಆಟಗಾರರು ಪಂದ್ಯ ಆರಂಭವಾಗುವ ಮುನ್ನ ಆಡಲಾಗುವ ರಾಷ್ಟ್ರ ಗೀತೆಯನ್ನು ಹಾಡದೆ ತಮ್ಮ ದೇಶದಲ್ಲಿ ಹಿಜಾಬ್ ಧರಿಸುವಿಕೆ ಸಂಬಂಧ ನಡೆಯುತ್ತಿರುವ '(ಅ)ನೈತಿಕ ಪೋಲಿಸ್ ಗಿರಿ' ವಿರುದ್ಧ ಪ್ರತಿಭಟನಾಕಾರರಿಗೆ ಬೆಂಬಲ ವ್ಯಕ್ತಪಡಿಸಿದರು. ಲಿಯೋನೆಲ್ ಮೆಸ್ಸಿ 'ಎಜುಕೇಷನ್ ಫಾರ್ ಆಲ್ ಹಾಗೂ ಸೇವ್ ಪ್ಲಾನೆಟ್' ಎಂಬ ಪಟ್ಟಿಯನ್ನು ತೋಳಿಗೆ ಧರಿಸಿಕೊಂಡು ಶಿಕ್ಷಣದ ಸಾರ್ವತ್ರೀಕರಣಕ್ಕೆ ಬೆಂಬಲ ಸೂಚಿಸಿದರು. ಹೀಗೆ ಹಲವು ವಿಶೇಷತೆ ಫುಟ್ಬಾಲ್ ಪಂದ್ಯಾವಳಿಯ ಹಿರಿಮೆಯನ್ನು ಹೆಚ್ಚಿಸಿದೆ.





ಮಹಿಳೆಯರ ಹಕ್ಕುಗಳ ವಿರುದ್ಧ ಧರ್ಮವನ್ನು ಬಳಸುವ ನಿರಂಕುಶ ಪ್ರಭುತ್ವದ ವಿರುದ್ಧ ಇರಾನಿನ ಮಹಿಳೆಯರ ಐತಿಹಾಸಿಕ ವಿಜಯ: ಜನವಾದಿ ಮಹಿಳಾ ಸಂಘಟನೆಯ ಅಭಿನಂದನೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ)ವು 22 ವರ್ಷದ ಮಹ್ಸಾ ಅಮೀನಿ ಎಂಬ ಮಹಿಳೆಯನ್ನು ಇರಾನಿನ "ನೈತಿಕ ಪೋಲೀಸ್ ಘಟಕ" ದಿಂದ ಬಂಧನ, ನಂತರ ಆಕೆಯ ಕಸ್ಟಡಿ ಸಾವನ್ನು ಪ್ರತಿಭಟಿಸಿ ಕಳೆದ ಮೂರು ತಿಂಗಳಿಂದ ಬೀದಿಗಿಳಿದಿರುವ ಇರಾನಿನ ವೀರ ಮಹಿಳೆಯರು ಮತ್ತು ಎಲ್ಲ ಜನರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದೆ. ಮಹ್ಸಾ ಅಮಿನಿ ಹಿಜಾಬ್‌ನಿಂದ ತಲೆಯನ್ನು ಸರಿಯಾಗಿ ಮುಚ್ಚಿರಲಿಲ್ಲ ಎಂದು ಆರೋಪಿಸಿ ಆಕೆಯನ್ನು "ನೈತಿಕ ಪೋಲೀಸ್ ಘಟಕ" ಎನಿಸಿಕೊಂಡ ಪಡೆ ಬಂಧಿಸಿತ್ತು.

ಇರಾನಿನ ಮಹಿಳೆಯರು ಹಿಜಾಬ್ ಅನ್ನು ಸುಟ್ಟು ಮತ್ತು ಸಾರ್ವಜನಿಕವಾಗಿ ತಮ್ಮ ಉದ್ದನೆಯ ಕೂದಲನ್ನು ಕತ್ತರಿಸುವ ಮೂಲಕ ಈ ಕೊಲೆಯನ್ನು ಪ್ರತಿಭಟಿಸಿದರು. ಅವರೊಂದಿಗೆ ಇರಾನಿನ ಅನೇಕ ಪ್ರಗತಿಪರ ಬುದ್ಧಿಜೀವಿಗಳು, ವಿದ್ಯಾರ್ಥಿಗಳು, ಕಲಾವಿದರು ಮತ್ತು ನಾಗರಿಕರು ಆಡಳಿತದ ತೀವ್ರತರವಾದ ದಬ್ಬಾಳಿಕೆಯನ್ನು ಧಿಕ್ಕರಿಸಿ ನಿಂತರು. ಪೋಲೀಸರ ಲಾಠಿ, ಗುಂಡುಗಳನ್ನು ಎದುರಿಸಿದರು. ಮಹಿಳೆಯರು ತಮ್ಮ ಉಡುಪನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ಸಾರ್ವಜನಿಕವಾಗಿ ಮುಕ್ತವಾಗಿ ಚಲಿಸುವ ಹಕ್ಕಿಗಾಗಿ ಈ ಅವಿರತ ಮತ್ತು ಒಗ್ಗಟ್ಟಿನ ಹೋರಾಟವು ಇರಾನ್ ಸರ್ಕಾರ ಈ "ನೈತಿಕ ಪೋಲೀಸ್ ಘಟಕ" ನ್ನು ಹಿಂತೆಗೆದುಕೊಳ್ಳುವಂತೆ ಒತ್ತಡ ತಂದಿದೆ. ಇರಾನಿನ ಅಟಾರ್ನಿ ಜನರಲ್ ಅವರು "ನೈತಿಕ ಪೋಲೀಸ್ ಘಟಕ" ದೇಶದ ನ್ಯಾಯಾಂಗ ವ್ಯವಸ್ಥೆಯ ಭಾಗವಾಗಿಲ್ಲ ಎಂದು ಘೋಷಿಸಿದರು. ಸ್ವಾಯತ್ತತೆ ಮತ್ತು ಸಮಾನತೆಗಾಗಿ ಒಗ್ಗಟ್ಟಿನ ಹೋರಾಟ ಏನು ಮಾಡಬಹುದು ಎಂಬುದಕ್ಕೆ ಇರಾನಿನ ಮಹಿಳೆಯರು ಉಜ್ವಲ ಉದಾಹರಣೆ ನೀಡಿದ್ದಾರೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಇದು ಇರಾನಿನ ಮಹಿಳೆಯರಿಗೆ ಮತ್ತು ಪ್ರಪಂಚದಾದ್ಯಂತ ವಿವಿಧ ರೀತಿಯ ದಬ್ಬಾಳಿಕೆ ಮತ್ತು ಧಾರ್ಮಿಕ ಉಗ್ರವಾದವನ್ನು ವಿರೋಧಿಸುವ ಮಹಿಳೆಯರಿಗೆ ಕೂಡ ಒಂದು ಮಹಾನ್ ವಿಜಯವಾಗಿದೆ. ವಿಶ್ವದಾದ್ಯಂತ ಮಹಿಳೆಯರ ಹಕ್ಕುಗಳನ್ನು ಹತ್ತಿಕ್ಕಲು ಧರ್ಮವನ್ನು ಬಳಸುವ ನಿರಂಕುಶ ಪ್ರಭುತ್ವಗಳಿಗೆ ಇದು ಪಾಠವಾಗಿದೆ ಎಂದು ಅದು ಹೇಳಿದೆ.

ಬಂಧಿತರಾಗಿರುವ ಪ್ರತಿಭಟನಾಕಾರರೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ ಎಐಡಿಡಬ್ಲ್ಯುಎ, ಈಗ "ನೈತಿಕ ಪೋಲೀಸ್ ಘಟಕ" ನ್ನು ಹಿಂಪಡೆದಿರುವುದರಿಂದ ರೈಸಿ ಆಡಳಿತವು ಎಲ್ಲಾ ಪ್ರಕರಣಗಳನ್ನು ಹಿಂತೆಗೆದುಕೊಳ್ಳುತ್ತದೆ ಮತ್ತು ಈ ಪ್ರತಿಭಟನೆಗಳ ಸಮಯದಲ್ಲಿ ಜೈಲು ಪಾಲಾದ ಎಲ್ಲರನ್ನು ಬಿಡುಗಡೆ ಮಾಡುತ್ತದೆ ಎಂದು ತಾನು ನಿರೀಕ್ಷಿಸುವುದಾಗಿ ಹೇಳಿದೆ.

"ಪುಕ್ಕಟೆ ಕೊಡುಗೆ" ಎಂಬ ಟೀಕೆ ಜನತೆಯ ಹೋರಾಟವನ್ನು 'ಭಿಕ್ಷೆ' ಎಂದು ಅವಮಾನಿಸುತ್ತದೆ-ಡಾ.ಥಾಮಸ್ ಐಸಾಕ್

ಜನಗಳ ಕಲ್ಯಾಣದ ಕ್ರಮಗಳನ್ನು 'ಫ್ರೀಬಿ'ಗಳು ಅಂದರೆ 'ಪುಕ್ಕಟೆ ಕೊಡುಗೆ'ಗಳು ಎನ್ನುವ ಟೀಕೆ ಈ ಕ್ರಮಗಳ ವಿರುದ್ಧ ನಡೆಯುತ್ತಿರುವ ಆಕ್ರಮಣದ ಮೇಲೆ ಬೆಳಕು ಚೆಲ್ಲುತ್ತದೆ. ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಆರೋಗ್ಯ ಪಾಲನೆ, ವಸತಿ, ಆಹಾರ ಮುಂತಾದವುಗಳು ಲಭ್ಯವಾಗಬೇಕು ಎಂಬ ಆಕಾಂಕ್ಷೆಗಳನ್ನು 'ಫ್ರೀಬೀ', ರೆವ್ಡಿ ಎಂದೆಲ್ಲ ಕರೆಯುವುದರ ಹಿಂದೆ ಇರುವ ನಿಜ ಉದ್ದೇಶವೇನು, ಎಂದು ಪ್ರಶ್ನಿಸಿದ ಕೇರಳದ ಮಾಜಿ ಹಣಕಾಸು ಸಚಿವ ಡಾ. ಥಾಮಸ್ ಐಸಾಕ್ ಅವರು, ಆಳುವವರ ಈ ಕಥನ ಜನರ ಹೋರಾಟವನ್ನು ಅವಮಾನಿಸುವ ರೀತಿಯಲ್ಲಿ 'ಭಿಕ್ಷೆ' ಎಂದು ಸಮೀಕರಿಸುತ್ತದೆ ಎಂದು ಕಟುವಾಗಿ ಟೀಕಿಸಿದರು. ಅವರು ಡಿಸೆಂಬರ್ 4 ರಂದು ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಚರ್ಚೆಯೊಂದರಲ್ಲಿ ಮಾತನಾಡಿದರು.

ಕಲ್ಯಾಣ ಪ್ರಭುತ್ವದ ಪರಿಕಲ್ಪನೆಯ ಮೇಲಿನ ಈ ದಾಳಿಯನ್ನು ಒಟ್ಟಾರೆಯಾಗಿ ಅಗತ್ಯ ಸೇವೆಗಳ ಖಾಸಗೀಕರಣದತ್ತ ನೀಡಿರುವ ಒತ್ತಿನ ಮತ್ತು ಸರ್ಕಾರವು ಜನರತ್ತ ತನ್ನ ಸಾಂವಿಧಾನಿಕ ಬಾಧ್ಯತೆಗಳಿಂದ ಕೈತೊಳೆದು ಕೊಳ್ಳುವುದರ ಭಾಗವಾಗಿ ನೋಡಬಹುದಾಗಿದೆ. ಈ ಕಥನ ಜನರ ಆಕಾಂಕ್ಷೆಗಳು ಮತ್ತು ಅಗತ್ಯಗಳನ್ನು ಸರಿಯಾಗಿ ಅಭಿವ್ಯಕ್ತಗೊಳಿಸುವ ರಾಜಕೀಯ ಪಕ್ಷಗಳ ಸಾಮರ್ಥ್ಯದ ಮೇಲೆ ದುಷ್ಪ್ರಭಾವ ಬೀರುತ್ತದೆ, ಮತ್ತು 'ಹಣಕಾಸಿನ ನೇಮನಿಷ್ಠೆಗೆ ಅಡ್ಡಿ ಎಂಬ ಹುಸಿ ಭೀತಿಯ ಮೂಲಕ ರಾಜಕೀಯ ಚರ್ಚೆಯ ಮಟ್ಟವನ್ನು ಮತ್ತು ವ್ಯಾಪ್ತಿಯನ್ನು ಸೀಮಿತಗೊಳಿಸುತ್ತದೆ ಎಂದು ಮುಂದುವರೆದು ಡಾ. ಐಸಾಕ್ ಹೇಳಿದರು.

ಕಳೆದ ಐದು ವರ್ಷಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಹೆಚ್ಚಾಗಿ ದೊಡ್ಡ ಕಾರ್ಪೊರೇಟ್‌ಗಳಿಗೆ ನೀಡಿದ 10 ಲಕ್ಷಕೋಟಿ ರೂ. ಗೂ ಹೆಚ್ಚು ಮೊತ್ತದ ಸಾಲಗಳನ್ನು ಮನ್ನಾ ಮಾಡಲಾಗಿದೆ, ಇಂತಹ ದೊಡ್ಡ ಪ್ರಮಾಣದ ತೆರಿಗೆ ರಿಯಾಯಿತಿಗಳಿಂದ ಸಾರ್ವಜನಿಕ ಬೊಕ್ಕಸಕ್ಕೆ ತೊಂದರೆಯುಂಟು ಮಾಡಲಾಗಿದೆ. ಆದಾಗ್ಯೂ, ಈ ರಿಯಾಯಿತಿಗಳನ್ನು ಎಂದಿಗೂ 'ಪುಕ್ಕಟೆ ಕೊಡುಗೆ' ಎಂದು ಕರೆಯಲಾಗುವುದಿಲ್ಲ. ಈ ಪದವನ್ನು, ತಮಗೆ ನೀಡಬೇಕಾದ ಹಕ್ಕುಗಳನ್ನು ಕೇಳುವ ದೇಶದ ದುಡಿಯುವ ಜನಸಮುದಾಯದ ಮೇಲೆ ಮಾತ್ರವೇ ಅವರನ್ನು ಅಣಕಿಸುವ ರೀತಿಯಲ್ಲಿ ಪ್ರಯೋಗಿಸಲಾಗುತ್ತಿದೆ.

ಇದಲ್ಲದೆ, ದೇಶದ ಒಕ್ಕೂಟ ರಚನೆಯ ಮೇಲೆ ಈ ದಾಳಿ ನಕಾರಾತ್ಮಕ ಪರಿಣಾಮವನ್ನೂ ಬೀರುತ್ತದೆ ಎಂಬ ಸಂಗತಿಯೂ ಈ ಚರ್ಚೆಯಲ್ಲಿ ಹೊಮ್ಮಿ ಬಂತು. ಜನರ ಆರೋಗ್ಯ ಮತ್ತು ಆಹಾರ ಭದ್ರತೆಯಂತಹ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರಗಳ ಹೊರೆಗಳನ್ನು ಹೆಚ್ಚುವಂತೆ ಈ ಕಥನ ಮಾಡಿದೆ. ಹೀಗೆ ರಾಜ್ಯಗಳ ಕಾರ್ಯನಿರ್ವಹಣೆಯನ್ನು ಕೇಂದ್ರ ಸರಕಾರ ನಿರಂತರವಾಗಿ ದುರ್ಬಲಗೊಳಿಸುವುದು ಮತ್ತು ರಾಜ್ಯ ಸರಕಾರಗಳ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ನಿರ್ಬಂಧಿಸುವುದು ಒಕ್ಕೂಟ ತತ್ವದ ಭಾವನೆಗೆ ಹಾನಿಕಾರಕವಾಗಿದೆ ಎಂದು ಡಾ.ಐಸಾಕ್ ಹೇಳಿದರು.

'ಬೆಂಗಳೂರು ಕಲೆಕ್ಟಿವ್' ಏರ್ಪಡಿಸಿದ್ದ "ಪುಕ್ಕಟೆ ಕೊಡುಗೆಗಳೆಂಬ ಮೋಸಗೊಳಿಸುವ ಚರ್ಚೆ- ಪ್ರಜಾಪ್ರಭುತ್ವ ಮತ್ತು ಕಲ್ಯಾಣದ ಮೇಲೊಂದು ಸಂಯೋಜಿತ ದಾಳಿ" ಎಂಬ ಸಾರ್ವಜನಿಕ ಚರ್ಚೆಯನ್ನು ಉದ್ದೇಶಿಸಿ ಡಾ.ಥಾಮಸ್ ಐಸಾಕ್ ಮಾತನಾಡಿದ ನಂತರ ಪ್ರಶ್ನೋತ್ತರ ಅವಧಿಯಲ್ಲಿ ಸಭಿಕರು ಕೇರಳದ ಅಭಿವೃದ್ಧಿ ಮತ್ತು ಆರ್ಥಿಕ ಮಾದರಿ, ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆದಾರರ ಸಮತೋಲನಗೊಳಿಸುವ ಆಡಳಿತ ರಚನೆ ಮತ್ತು ಕೇರಳದ ಮಹಿಳೆಯರ ಸ್ಥಾನಮಾನದಂತಹ ವಿವಿಧ ವಿಷಯಗಳ ಕುರಿತು ಪ್ರಶ್ನೆಗಳನ್ನು ಎತ್ತಿದರು. ರಾಜ್ಯಗಳ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಂತರ ರಾಜ್ಯ ಏಕತೆಯ ಅಗತ್ಯವೂ ಚರ್ಚೆಗೆ ಬಂತು.

ದೇಶದೊಳಗಿನ ಆತಂಕಕಾರಿ ಪ್ರವೃತ್ತಿಗಳನ್ನು ಸರಿಪಡಿಸದೆ ಜಿ-20 ಅಧ್ಯಕ್ಷತೆಯ ಘೋಷಿತ ಧ್ಯೇಯವು ಈಡೇರದು-ಯೆಚೂರಿ

ಜಿ-20ರ ಅಧ್ಯಕ್ಷತೆಯನ್ನು ವಹಿಸುವ ಸರದಿ ಈಗ ಭಾರತದ್ದಾಗಿದೆ. ಪ್ರಧಾನ ಮಂತ್ರಿಗಳು ಇದನ್ನು ಆಚರಿಸಲು "ಒಂದು ಭೂಮಿ- ಒಂದು ಕುಟುಂಬ- ಒಂದು ಭವಿಷ್ಯ" ಎಂಬ ವಿಷಯ ವಸ್ತುವಿನ ಮೇಲೆ ಒಂದು ಆಂತರಿಕ ರಾಜಕೀಯ ಅಭಿಯಾನವನ್ನು ಪ್ರಕಟಿಸಿದ್ದಾರೆ. ಈ ಸಂದರ್ಭದಲ್ಲಿ "ಭಾರತದ ಜಿ-20 ಅಧ್ಯಕ್ಷತೆ ಈ ಏಕತ್ವದ ಸಾರ್ವತ್ರಿಕ ಪ್ರಜ್ಞೆಯನ್ನು ಉತ್ತೇಜಿಸಲು ಕೆಲಸ ಮಾಡುತ್ತದೆ" ಎಂದು ಘೋಷಿಸಿದ್ದಾರೆ.

ಆದರೆ ಪ್ರಧಾನ ಮಂತ್ರಿಗಳ ಈ ಮಾತು ವಿಶ್ವಾಸಾರ್ಹ ಎನಿಸಬೇಕಾದರೆ, ಇದು ಭಾರತದ ಸಂವಿಧಾನ ಘೋಷಿಸಿರುವಂತೆ "ಜಾತಿ, ಧರ್ಮ ಅಥವಾ ಲಿಂಗದ ಬೇಧವಿಲ್ಲದ" ಎಲ್ಲರಿಗೂ ಸಮಾನತೆಯ ಆಧಾರದ ಮೇಲೆ ಒಂದು ಸಮಾಜವನ್ನು ಮತ್ತು ರಾಜಕೀಯ ರಚನೆಯನ್ನು ರಚಿಸುವುದರ ಮೇಲೆ ನಿರ್ಣಾಯಕವಾಗಿ ಅವಲಂಬಿತವಾಗಿದೆ. ಅದು ಎಲ್ಲಾ ನಾಗರಿಕರಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನ್ಯಾಯದ ವಿತರಣೆಯ ಮೇಲೆ ನಿಂತಿದೆ. ಆದರೆ ಭಾರತದೊಳಗೆ ಕಾಣುತ್ತಿರುವ ಪ್ರಸಕ್ತ ಕೋಮುವಾದಿ ಧ್ರುವೀಕರಣದ ಆತಂಕಕಾರಿ ಪ್ರವೃತ್ತಿಗಳನ್ನು ಸರಿಪಡಿಸದೆ ಈ ಗುರಿಯನ್ನು ಈಡೇರಿಸಲು ಸಾಧ್ಯವಿಲ್ಲ. ಆದ್ದರಿಂದ ಜಗತ್ತು ಭಾರತದ ಜಿ-20 ಅಧ್ಯಕ್ಷತೆಯ ಈ ಉದ್ದೇಶಗಳಿಗೆ ಮನ್ನಣೆ ನೀಡಬೇಕಾದರೆ ಇಂತಹ ಸರಿಪಡಿಕೆ ಅಗತ್ಯ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಭಾರತ ಜಿ-20ರ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಸಂದರ್ಭದಲ್ಲಿ ದೇಶದ ರಾಜಕೀಯ ಪಕ್ಷಗಳಿಗೆ ವಿವಿಧ ಸ್ಥಳಗಳಲ್ಲಿ 200 ಸಭೆಗಳನ್ನು ನಡೆಸುವ ಕೇಂದ್ರ ಸರಕಾರದ ಯೋಜನೆಗಳ ಕುರಿತು ತಿಳಿಸಲು ಕರೆದ ರಾಜಕೀಯ ಪಕ್ಷಗಳ ಮುಖಂಡರ ಸಭೆಯಲ್ಲಿ ಮಧ್ಯಪ್ರವೇಶಿಸಿ ಅವರು ಮಾತಾಡುತ್ತಿದ್ದರು.

ಜಿ-20 ಅಧ್ಯಕ್ಷ ಸ್ಥಾನವು ಸರದಿ ಪ್ರಕಾರ ಸಿಗುವ ಸ್ಥಾನವಾಗಿದೆ. ಜಿ-20 ರಲ್ಲಿರುವ ಪ್ರತಿಯೊಂದು ದೇಶವು ಅದರ ಸರದಿ ಬಂದಾಗ ತಂತಾನೇ ಇದರ ಅಧ್ಯಕ್ಷ ಸ್ಥಾನವನ್ನು ಪಡೆಯುತ್ತದೆ ಎಂದು ನೆನಪಿಸುವುದರೊಂದಿಗೇ,ಯೆಚುರಿಯವರು ತಮ್ಮ ಭಾಷಣದಲ್ಲಿ ಜಿ-20 ರಚನೆಗೊಂಡ ಸಂದರ್ಭವನ್ನು ಕೂಡ ನೆನಪಿಸಿದರು. ದಕ್ಷಿಣ ಏಶ್ಯಾದ ಆರ್ಥಿಕ ಬಿಕ್ಕಟ್ಟಿನ ನಂತರ 1999 ರಲ್ಲಿ ಇದರ ರಚನೆಯಾಯಿತು. ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕಿನಲ್ಲಿ ಸಾಗುವಾಗ ಅದನ್ನು ಅನುಸರಿಸಿ ಅನಿವಾರ್ಯವಾಗಿ ಬರುವ ಬಿಕ್ಕಟ್ಟಿನ ಹೊರೆಯನ್ನು ಹಂಚಿಕೊಳ್ಳಲು ಸಾಧ್ಯವಾಗುವಂತೆ ಉದಯೋನ್ಮುಖ ಅರ್ಥವ್ಯವಸ್ಥೆಗಳನ್ನು ಸೆಳೆದುಕೊಳ್ಳಲು ಶ್ರೀಮಂತ ರಾಷ್ಟ್ರಗಳು ತಮ್ಮ ಜಿ-7ನ್ನು ಜಿ-20ಕ್ಕೆ ವಿಸ್ತರಿಸಿದವು.

ಮೊದಲಿಗೆ ಇದರ ಮಂತ್ರಿಮಟ್ಟದ ಸಮಾಲೋಚನೆಗಳು ನಡೆಯುತ್ತಿದ್ದವು. 2008 ರಲ್ಲಿ ಜಾಗತಿಕ ಹಣಕಾಸು ಕುಸಿತದ ನಂತರ ಇವನ್ನು ಸರ್ಕಾರಗಳ ಮುಖ್ಯಸ್ಥರುಗಳ ಶೃಂಗಸಭೆಗಳಾಗಿ ಪರಿವರ್ತಿಸಲಾಯಿತು. ಅಂದಿನಿಂದ, ಈ ಸರದಿ ಅಧ್ಯಕ್ಷತೆಯ ವಿಧಾನವನ್ನು ಅಂಗೀಕರಿಸಲಾಯಿತು. ಆದ್ದರಿಂದ ಜಿ-20ರ ಅಧ್ಯಕ್ಷತೆ ಸಿಗುವುದಕ್ಕೂ, ಸಂಬಂಧಪಟ್ಟ ದೇಶದ ಅರ್ಥವ್ಯವಸ್ಥೆ ಮತ್ತು ಅಥವಾ ಸಾಮಾಜಿಕ- ರಾಜಕೀಯ ಪರಿಸ್ಥಿತಿಗೂ ಏನೇನೂ ಸಂಬಂಧವಿಲ್ಲ ಎಂಬ ಸಂಗತಿಯನ್ನು ಕೂಡ ಯೆಚುರಿ ನೆನಪಿಸಿದರು.

ಗೌರವಾನ್ವಿತ ಪ್ರಧಾನ ಮಂತ್ರಿಗಳು ಭಾರತದ ಜಿ-20 ಅಧ್ಯಕ್ಷತೆ "ಒಂದು ಭೂಮಿ- ಕುಟುಂಬ- ಒಂದು ಭವಿಷ್ಯ" ಎಂಬ ಏಕತ್ವದ ಸಾರ್ವತ್ರಿಕ ಪ್ರಜ್ಞೆಯನ್ನು ಉತ್ತೇಜಿಸಲು ಕೆಲಸ ಮಾಡುತ್ತದೆ" ಎಂದು ಘೋಷಿಸಿದ್ದಾರೆ.

ಆದರೆ ವಸುಧೈವಕುಟುಂಬಕಂ ಎಂಬ ಪರಿಕಲ್ಪನೆಯೆಂದರೆ ಏಕರೂಪತೆಯನ್ನು ಹೇರುವುದು ಎಂದರ್ಥವಲ್ಲ. ಅದು ಸಮಾನತೆ ಮತ್ತು ಘನತೆಯ ಆಧಾರದ ಮೇಲೆ ಎಲ್ಲಾ ವೈವಿಧ್ಯತೆಗಳನ್ನು ಪರಿಗಣಿಸುವ ಮೂಲಕ ಸಾಮಾಜಿಕ ಬಹುತ್ವಗಳನ್ನು ಆಚರಿಸುವ ಒಂದು ಜಾಗತಿಕ ಕುಟುಂಬಕ್ಕೆ ಕೊಡುವ ಮನ್ನಣೆಯಾಗಿದೆ. ಅಂತಹ ಒಂದು ಜಾಗತಿಕ ಕುಟುಂಬವು ಪ್ರತಿ ದೇಶದಲ್ಲಿ ಸ್ಥಾಪಿಸಲಾದ ಅಂತಹ ಸಮಾಜಗಳ ಮೇಲೆ ಆಧಾರಿತವಾಗಿದೆ.

ಅಂದರೆ ಅವರ ಈ ಘೋಷವಾಕ್ಯ ವಿಶ್ವಾಸಾರ್ಹವಾಗಬೇಕಾದರೆ, ಅದು ಭಾರತದ ಸಂವಿಧಾನವು ಘೋಷಿಸಿರುವಂತೆ "ಜಾತಿ, ಧರ್ಮ ಅಥವಾ ಲಿಂಗದ ಭೇದವಿಲ್ಲದೆ" ಎಲ್ಲರಿಗೂ ಸಮಾನತೆಯ ಆಧಾರದ ಮೇಲೆ ಸಮಾಜ ಮತ್ತು ರಾಜಕೀಯ ಸಂರಚನೆಯನ್ನು ರಚಿಸುವುದರ ಮೇಲೆ ನಿರ್ಣಾಯಕವಾಗಿ ಅವಲಂಬಿತವಾಗಿದೆ. ಇದು ಎಲ್ಲಾ ನಾಗರಿಕರಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನ್ಯಾಯದ ವಿತರಣೆಯನ್ನು ಆಧರಿಸಿದೆ ಎಂದು ಯೆಚುರಿಯವರು ಹೇಳಿದರು.

ಈಗ ದೇಶದಲ್ಲಿ ಕಾಣುತ್ತಿರುವ ದ್ವೇಷ, ಭಯೋತ್ಪಾದನೆ ಮತ್ತು ಹಿಂಸಾಚಾರದ ದುಷ್ಟ ಪ್ರಚಾರಗಳ ಮೇಲೆ ನಿಂತಿರುವ ಕೋಮು ಧ್ರುವೀಕರಣದ ಆತಂಕಕಾರಿ ಮಟ್ಟಗಳು ಪ್ರಧಾನಿಯವರ ಈ ಘೋಷಣೆಯ ಅಡಿಪಾಯವನ್ನೇ ನಾಶಪಡಿಸುವಂತವುಗಳು. ನಮ್ಮ ಆರ್ಥಿಕ ನಿಧಾನಗತಿಯು ಆತಂಕಕಾರಿಯಾಗಿ ಬೆಳೆಯುತ್ತಿರುವ ನಿರುದ್ಯೋಗ ಮತ್ತು ಬಡತನದೊಂದಿಗೆ ಆಳಕ್ಕೆ ಕುಸಿಯುತ್ತಿದೆ. ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಅಂಚಿನಲ್ಲಿರುವ ವಿಭಾಗಗಳ ವಿರುದ್ಧ ಸಾಮಾಜಿಕ ಅನ್ಯಾಯಗಳು ಹಲವು ಪಟ್ಟು ಹೆಚ್ಚಾಗುತ್ತಿವೆ. ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಸಾಂವಿಧಾನಿಕ ಖಾತರಿಗಳನ್ನು ಭಿನ್ನಾಭಿಪ್ರಾಯದ ಎಲ್ಲಾ ಅಭಿವ್ಯಕ್ತಿಗಳನ್ನು 'ರಾಷ್ಟ್ರ-ವಿರೋಧಿ' ಎಂದು ಪರಿಗಣಿಸುವ ಮೂಲಕ ತೀವ್ರವಾಗಿ ಮೊಟಕುಗೊಳಿಸಲಾಗಿದೆ.

ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿನ ಈ ಪ್ರಸಕ್ತ ಆತಂಕಕಾರಿ ಪ್ರವೃತ್ತಿಗಳನ್ನು ಸರಿಪಡಿಸಲಾಗುತ್ತದೆಯೇ ಮತ್ತು ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಸ್ವರೂಪವನ್ನು ನಿರೂಪಿಸುವ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ನಮ್ಮ ಸಾಂವಿಧಾನಿಕ ಅಡಿಪಾಯಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆಯೇ ಎಂಬುದರ ಮೇಲೆಯೇ ಸರ್ಕಾರವು ಘೋಷಿಸಿದ ಧ್ಯೇಯದ ಈಡೇರಿಕೆ ನಿರ್ಧಾರವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಸೀತಾರಾಂ ಯೆಚುರಿಯವರು ಭಾರತದ ಜಿ-20 ಅಧ್ಯಕ್ಷತೆಯ ಘೋಷಿತ ಉದ್ದೇಶಗಳಿಗೆ ಜಗತ್ತು ಮನ್ನಣೆ ನೀಡಬೇಕಾದರೆ ಸರ್ಕಾರವು ಇವನ್ನು ಸಾಕಾರಗೊಳಿಸಲು ಕೆಲಸ ಮಾಡಬೇಕು ಎಂದು ಹೇಳಿದರು.

ಸಿ.ಐ.ಟಿ.ಯು.ವಿನ ಅಖಿಲ ಭಾರತ ಸಮ್ಮೇಳನ: ಉತ್ಸಾಹದ ತಯಾರಿ-ಯಾರಿಂದ? ಕಾರ್ಮಿಕರಿಂದ. ಹೇಗೆ?

ಎಸ್.ವರಲಕ್ಷ್ಮಿ, ಸಿಐಟಿಯು ರಾಜ್ಯ ಅಧ್ಯಕ್ಷರು



2022 ಏಪ್ರಿಲ್ 19 ರಂದು ಬಿಸಿಯೂಟ ನೌಕರರು ಅಕ್ಷರ ದಾಸೋಹ ಯೋಜನೆಯು ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿರುವ ನಿರ್ದೇಶಕರ ಕಛೇರಿಗೆ ಮುತ್ತಿಗೆ ಹಾಕಲಾಗಿತ್ತು. ಸಾವಿರಾರು ಬಿಸಿಯೂಟ ಮಹಿಳೆಯರು ಹೋರಾಟದಲ್ಲಿ ಪಾಲ್ಗೊಂಡಿದ್ದರು. ಸಂಜೆಯಾಗುತ್ತಿದ್ದ ಹಾಗೆ ಜೋರು ಮಳೆ ಪ್ರಾರಂಭವಾಯಿತು. ಮಳೆಯಲ್ಲಿ ತೊಯ್ದೊದ್ದೆವು. ಪೊಲೀಸ್ ಹಾಗೂ ಇಲಾಖೆಯ ಅಧಿಕಾರಿಗಳು ಚರ್ಚಿಸುತ್ತಿದ್ದಾಗ ಸತತವಾಗಿ ರಿಂಗ್ ಆಗುತ್ತಿದ್ದ ಫೋನನ್ನು ರಿಸೀವ್ ಮಾಡಿದೆ. ಕಾಮ್ರೇಡ್ ತಪನ್ ಸೇನ್! ನನಗೆ ಆಶ್ಚರ್ಯ ಮತ್ತು ಸಂತೋಷ. ಮಾತಾನಾಡಿದೆ. ಕಾಮ್ರೇಡ್ ತಪನ್ ಸೇನ್ ರವರು 'ನೀವು ಸಿ.ಐ.ಟಿ.ಯು. ವಿನ ಅಖಿಲ ಭಾರತ ಸಮ್ಮೇಳನ ನಡೆಸಿಕೊಡ ಬೇಕು' ಎಂದು ಇಂಗ್ಲೀಷ್ ಭಾಷೆಯಲ್ಲಿ ವಿನಂತಿಸುತ್ತಿದ್ದರು. ನನಗೆ ಅರ್ಥವಾಯಿತು. ನಾನು ಹೇಳಿದೆ 'ನೀವು ವಿನಂತಿಸಬಾರದು, ಆದೇಶ ನೀಡಿ' ಎಂದೆ. ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಮೀನಾಕ್ಷಿಯವರ ಬಳಿ ಮಾತಾನಾಡಿ ಎಂದೆ.

ನಂತರ ನಾವು ರಾಜ್ಯದ ಇತರ ಮುಖಂಡರೊಂದಿಗೆ ಸಮಾಲೋಚಿಸಿ ಕೊಂಡೆವು. ಸಿ.ಐ.ಟಿ.ಯು.ವಿನ ಅಖಿಲ ಭಾರತ ಕಾರ್ಯಕಾರಿ ಸಮಿತಿ ಚಂಡಿಗಡ್‌ನಲ್ಲಿ 2022 ಏಪ್ರಿಲ್ 22,23,24 ರಂದು ನಡೆಯಿತು. ಆ ಸಭೆಯಲ್ಲಿ ಕರ್ನಾಟಕದಲ್ಲಿ ಅಖಿಲ ಭಾರತ ಸಮ್ಮೇಳನ ಎಂಬ ಅಧಿಕೃತ ತೀರ್ಮಾನವಾಯಿತು.

ಅಂದು ಸಿ.ಐ.ಟಿ.ಯು.ವಿನ ಕೇಂದ್ರದ ಸಂಗಾತಿಗಳೊಟ್ಟಿಗೆ ಅತ್ಯಂತ ಉತ್ಸಾಹದಿಂದಲೇ ಚರ್ಚೆಗಳು ಪ್ರಾರಂಭಿಸಿದೆವು. ಕೆಲವು ಹಿಂಜರಿಕೆಗಳಿತ್ತು, ಆದರೆ ಅದಕ್ಕೆ ಮಹತ್ವ ಕೊಡದೇ ಸಿ.ಐ.ಟಿ.ಯು.ವಿನ ಸಂಪೂರ್ಣ ಶಕ್ತಿ ಸಾಮರ್ಥ್ಯಗಳನ್ನು ಒಟ್ಟುಗೂಡಿಸುವುದು ಹೇಗೆ? ಏನೆಲ್ಲಾ ಸಾಧ್ಯತೆಗಳಿವೆ ಎಂಬ ಚರ್ಚೆಗಳ ಕರಡು ತಯಾರಿ, ಕೊನೆಗೆ ಸಿ.ಐ.ಟಿ.ಯು. ರಾಜ್ಯ ಸಮಿತಿಯಲ್ಲಿ ತೀರ್ಮಾನ, ನಂತರ ಸ್ವಾಗತ ಸಮಿತಿ ರಚನೆ.

ಸಮ್ಮೇಳನ ಮಾಡಲು ಒಂದು ಸ್ವಾಗತ ಸಮಿತಿ ಸಾಕೇ ಸಾಕಾಗಲಿಲ್ಲ! ಮತ್ತೆ ಎಷ್ಟು? ಸಾವಿರಾರು. ಏಕೆಂದರೆ ಇದು ಕಾರ್ಮಿಕರ ಮಹಾ ಸಮ್ಮೇಳನ ಕಾರ್ಮಿಕರು ಎಲ್ಲರೂ ಒಂದು ಸ್ಥಳಕ್ಕೆ ಬರಲು ಆಗುವುದಿಲ್ಲವಲ್ಲ. ಅದಕ್ಕಾಗಿ ಕಾರ್ಮಿಕರು ವಾಸ ಮಾಡುವ ಸ್ಥಳಗಳಲ್ಲಿ ಅವರು ಪಾಲ್ಗೊಳ್ಳಬೇಕಲ್ಲವೇ?

ಕಾರ್ಮಿಕರು ಯಾಕೆ ಸ್ವಾಗತ ಸಮಿತಿಯಲ್ಲಿ ಪಾಲ್ಗೊಳ್ಳಬೇಕು?

ಸಂಪತ್ತನ್ನು ಸೃಷ್ಟಿ ಮಾಡುವ ಶ್ರಮಿಕರ ಚಳುವಳಿಗಳ ಮೌಲ್ಯ ಕಡಿಮೆ ಮಾಡಿ, ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ಕಾರ್ಮಿಕರ ಹೋರಾಟ ಸೀಮಿತ, ಸ್ವಾರ್ಥ ಎಂಬ ವ್ಯಾಖ್ಯಾನಗಳ ಪ್ರಚಾರ ಹೆಚ್ಚುತ್ತಿದೆ. ಸಂಪತ್ತಿನ ಪಾಲನ್ನು ಕೇಳುವ ಕಾರ್ಮಿಕ ಚಳುಚಳಿಗಳ ಮಹತ್ವವನ್ನು ಅಲ್ಲಗಳೆಯುವ ಮಾಧ್ಯಮಗಳು ಮಾತ್ರವಲ್ಲದೆ ಕೈಗಾರಿಕಾ ಕಾರ್ಮಿಕರು ಸಂಘಗಳನ್ನು ಕಟ್ಟಿದರೆ ಕಾರ್ಖಾನೆ ಮುಚ್ಚಿಸುತ್ತಾರೆ ಎಂಬ ವ್ಯಾಪಕ ಟೀಕೆಗಳು ಮತ್ತು ಭ್ರಷ್ಟ ಸಂಘಟನೆಗಳು & ಸ್ಥಳೀಯರು ವಿರೋಧ ಮಾಡುವ ಘಟನೆಗಳು ನಡೆಯುತ್ತಲೇ ಇವೆ. ಇದಕ್ಕೆ ಮುಖ್ಯ ಕಾರಣ 'ಕಾರ್ಮಿಕರ ಸಮಸ್ಯೆಗಳು & ಈ ಸಮಸ್ಯೆಗಳಿಗೆ ಕಾರಣವಾದ ಸರ್ಕಾರದ ನೀತಿಗಳು' ಈ ನೀತಿಗಳ ಹಿಂದಿನ ಉದ್ದೇಶವನ್ನು ಅರಿಯದಿರುವುದೇ ಮುಖ್ಯ ಕಾರಣ. ಈ ವಿಚಾರವನ್ನು ಕಾರ್ಮಿಕರು ಅರಿತುಕೊಂಡು ಜನರಿಗೂ ಈ ಅಂಶಗಳನ್ನು ಅರ್ಥ ಮಾಡಿಸುವುದು ಒಂದು ಸವಾಲಿನ ಪ್ರಶ್ನೆ ನಮ್ಮ ಮುಂದಿದೆ. ಮತ್ತು ಕಾರ್ಮಿಕ ಚಳುವಳಿಯ ನಿಜವಾದ ಉದ್ದೇಶವನ್ನು ಜನರಿಗೆ ತಿಳಿಸಲು ಮನೆ ಮನೆ ಪ್ರಚಾರ ನಡೆಸಬೇಕಿದೆ.

ಇದು ಕೈಗಾರಿಕಾ ಪ್ರದೇಶಗಳಲ್ಲಿ ಮಾತ್ರವಲ್ಲ, ಕೋಟಿಗಟ್ಟಲೆಯಿರುವ ಅಸಂಘಟಿತ ಕ್ಷೇತ್ರದ ಕಾರ್ಮಿಕರು, ಯೋಜನಾ ಕಾರ್ಮಿಕರು, ಗುತ್ತಿಗೆ, ಹೊರ ಗುತ್ತಿಗೆ, ಅರೆಕಾಲಿಕ, ಸಾಂದರ್ಭಿಕ ಕಾರ್ಮಿಕರು, ಸೀಸನಲ್ ಕಾರ್ಮಿಕರು, ತುಂಡು ಗುತ್ತಿಗೆ ಕಾರ್ಮಿಕರು, ಹಮಾಲಿ ಕಾರ್ಮಿಕರು, ಕಟ್ಟಡ, ಬೀದಿ ಬದಿ, ಹೂ ಮಾರಾಟ ಮಾಡುವ ಸ್ವಯಂ ಉದ್ಯೋಗಿಗಳು, ಸಾರಿಗೆಯಲ್ಲಿ ದುಡಿಯುವ ಆಟೋ, ವ್ಯಾನ್, ಲಾರಿಗಳಲ್ಲಿ ಡ್ರೈವರ್, ಸಹಾಯಕರು, ಮೆಕ್ಯಾನಿಕ್‌ಗಳು, ಪೆಟ್ರೋಲ್ ಬಂಕ್‌ಗಳಲ್ಲಿ, ಸಣ್ಣ ವರ್ಕ್‌ಶಾಪ್‌ಗಳಲ್ಲಿ ದುಡಿಯುವ ಕಾರ್ಮಿಕರು, ಆಸ್ಪತ್ರೆಗಳಲ್ಲಿ, ಲ್ಯಾಬೋರೇಟರಿಗಳಲ್ಲಿ, ಔಷದ ಅಂಗಡಿಗಳಲ್ಲಿ ದುಡಿಯುವ ಕಾರ್ಮಿಕರು, ಹೋಟೆಲ್ & ರೆಸ್ಟೋರೆಂಟ್‌ಗಳಲ್ಲಿ, ಅಂಗಡಿ, ಶಾಪಿಂಗ್ ಮಾಲ್‌ಗಳಲ್ಲಿ ನಿಂತೇ ಕೆಲಸ ಮಾಡುವವರು, ಮನೆಗಳಲ್ಲಿಯೇ ತಯಾರಿಸುವ ಆಹಾರ ಪದಾರ್ಥಗಳು, ಬೀಡಿ, ಅಗರಬತ್ತಿ, ಶೂ ಓಲೆಯುವುದು, ಬಟ್ಟೆ ಹೊಲೆಯುವುದು, ಕುಸರಿ ಕೆಲಸ, ನೀಲಿ ಇಂಕ್ ತಯಾರಿಸುವುದು, ಊಟ ಮಾಡುವ ಪ್ಲಾಸ್ಟಿಕ್ ತಟ್ಟೆಗಳು, ಲೋಟಗಳು, ಹೀಗೆ ವಿವಿಧ ಸ್ವರೂಪದ ಕೆಲಸಗಳು ಇನ್ನು ಆನ್‌ಲೈನ್‌ನಲ್ಲಿ ಮನೆಯಲ್ಲಿಯೇ ಕುಳಿತು ಕೆಲಸ ಮಾಡುವವರು, ಅಮೆಜಾನ್, ಸ್ವಿಗ್ಗಿ ಕೆಲಸ ಮಾಡುವ ವಿದ್ಯಾವಂತ ಯುವಕ ಯುವತಿಯರು, ಸೆಕ್ಯೂರಿಟಿಯಲ್ಲಿ ಕೆಲಸ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಆದರೆ ಈ ವಿಭಾಗಗಳಿಗೆ ಬಹುತೇಕ ಕಾರ್ಮಿಕರಿಗೆ ಮಾಲೀಕರು ಯಾರು ಎಂದು ಗೊತ್ತಿಲ್ಲ ಮತ್ತು ಕಾರ್ಮಿಕ-ಮಾಲೀಕರ ಸಂಬಂಧಗಳೇ ಇಲ್ಲ. ಆದರೂ ಕೋಟಿಗಟ್ಟಲೇ ಕಾರ್ಮಿಕರು ನಿಗದಿತ ಸಂಬಳ, ಕೆಲಸಕ್ಕೆ ಭದ್ರತೆಯಿಲ್ಲದೆ ತಮ್ಮ ದೇಹ ಮತ್ತು ಮೆದುಳನ್ನು ಸವೆಸುತ್ತಲೇ ಇರುತ್ತಾರೆ.

ಈ ಕಾರ್ಮಿಕರಿಗೆ ಭೇಟಿ ಮಾಡುವ, ಅವರೊಂದಿಗೆ ಚರ್ಚಿಸುವ ಮತ್ತು ಅವರಿಗೂ ಸಂಘಟಿತರಾಗಲು ಬೇಕಾಗುವ ಮಾರ್ಗದರ್ಶನ ಮಾಡುವ ಕೆಲಸವೂ ಎಲ್ಲಕ್ಕಿಂತ ಮುಖ್ಯವಾದ ಮತ್ತೊಂದು ಸವಾಲು ನಮ್ಮ ಮುಂದಿದೆ.

ಮಾತ್ರವಲ್ಲದೇ ರಾಜ್ಯ & ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕನ ಪಾತ್ರ ಅತ್ಯಂತ ಅಮೂಲ್ಯವಾಗಿದೆ. ಜಿಡಿಪಿ ಗೆ ಲೆಕ್ಕಚಾರ ಹಾಕುವುದು ದೇಶದ ಆಂತರಿಕ ಉತ್ಪನ್ನ ಸೇವಾವಲಯ, ಕೃಷಿ ಮತ್ತು ಕೈಗಾರಿಕಾ ವಲಯ ಈ ವಲಯಗಳಲ್ಲಿ ದುಡಿಯುವವರು ಯಾರು? ನೌಕರರು, ಕಾರ್ಮಿಕರು, ಕೂಲಿಕಾರ ಕೃಷಿಕರು & ರೈತರು.

ಇವರು ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ & ಹೊಲಗಳಲ್ಲಿ ತಮ್ಮನ್ನು ತಾವು ಸೆವಸಿಕೊಂಡು ಆಂತರೀಕ ಉತ್ಪನ್ನದ ಕಾರಣ ಕರ್ತರಾಗಿದ್ದಾರೆ. **ಆದರೆ ಮೇಣದ ಬತ್ತಿಯ ರೀತಿಯಲ್ಲಿ ತಮ್ಮನ್ನು ತಾವು ಸವೆಸಿಕೊಳ್ಳುವ ಈ ಜನತೆಗೆ ಇದೇ ಬಂಡವಾಳಗಾರರ, ಭೂ ಮಾಲಿಕರು & ಸರ್ಕಾರದಿಂದ ಬರುತ್ತಿರುವ ಕಾಣಿಕೆಯೇನು?**

ಹೊಸದಾಗಿ ಏನೂ ಕೊಡದಿದ್ದರೂ ಇಂದು ರಕ್ಷಾ ಕವಚಗಳಂತಿರುವ ಕಾರ್ಮಿಕ ಕಾನೂನುಗಳನ್ನು ಸಂಹಿತೆಗಳನ್ನಾಗಿ ಮಾರ್ಪಡಿಸಿರುವುದು.

ಆರೋಗ್ಯ, ಆಹಾರ, ಶಿಕ್ಷಣ ಮುಂತಾದ ಸೇವೆಗಳನ್ನು ರೋಗಗ್ರಸ್ಥಗೊಳಿಸಿ ಆ ವಲಯಗಳ ಅರಕಾಲಿಕ ಉದ್ಯೋಗವನ್ನು ನಾಶಪಡಿಸುತ್ತಿರುವುದು. ಆರ್ಥಿಕ ಸ್ವಾವಲಂಬನೆಗೆ ಕಾರಣೀಭೂತವಾದ & ಆಂತರಿಕ ಉತ್ಪನ್ನಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡುತ್ತಿರುವ ಬ್ಯಾಂಕ್, ಎಲ್‌ಐಸಿ, ವಿದ್ಯುತ್ಶಕ್ತಿ, ರಕ್ಷಣಾ ವಿಭಾಗಗಳು, ಉತ್ಪನ್ನ ವಲಯಗಳಾದ ಬಿಹೆಚ್‌ಇಎಲ್, ಉಕ್ಕು-ಸ್ಟೀಲ್, ಕಲ್ಲಿದ್ದಲು ತಯಾರಿಸುವ ಸಾರ್ವಜನಿಕ ಕೈಗಾರಿಕೆಗಳನ್ನು ಖಾಸಗೀಕರಿಸುವುದು, ಗ್ಯಾಸ್, ಪೆಟ್ರೋಲಿಯಂ ಉತ್ಪನ್ನಗಳ ಉತ್ಪಾದನಾ ಘಟಕಗಳ ಖಾಸಗೀಕರಣ, ರೈಲ್ವೆ, ರಸ್ತೆ, ನೀರು, ಬಸ್‌ಗಳನ್ನು ಖಾಸಗೀಕರಿಸಿ ಲಕ್ಷ ಕೋಟಿಗಳ ಸಾರ್ವಜನಿಕ ಆಸ್ತಿಯನ್ನು ಸಾವಿರಾರು ರೂ.ಗಳಿಗೆ ಅಡಮಾನವಿಡುವ ಪ್ರಕ್ರಿಯೆಯನ್ನು ನಡೆಸಿ ಆ ವಿಭಾಗಗಳಲ್ಲಿರುವ ಕಾರ್ಮಿಕರಿಗೆ 50 ವರ್ಷ ಆದ ಕೂಡಲೇ ಕಡ್ಡಾಯ ನಿವೃತ್ತಿಯನ್ನು ಫಿಟ್‌ನೆಸ್ ಆಧಾರದಲ್ಲಿ ಮಾಡಲಾಗುತ್ತಿದೆ.

ಭಾರತದಲ್ಲಿ 70% ಕೃಷಿಯನ್ನಾವಲಂಭಿಸಿದ್ದ ಕೇತ್ರದಲ್ಲಿ ಇಂದು ಕೃಷಿ ಕೂಲಿಕಾರರಾಗಿ, ವಲಸೆ ಕಾರ್ಮಿಕರಾಗಿ ಮಾರ್ಪಡಿಸಿದ್ದಾರೆ. ಭೂ ರಹಿತರ ಸಂಖ್ಯೆ ಹೆಚ್ಚಾಗಿ 1 ರಿಂದ 5 ಎಕರೆಯಿರುವ ರೈತ ಕುಟುಂಬಗಳು ಇವೆ. ಈ ರೈತರನ್ನು ಉತ್ತೇಜಿಸುವ ಬದಲಿಗೆ ಈ ಭೂಮಿಯನ್ನು ವಶ ಮಾಡಿಕೊಳ್ಳುವ ಭೂ ಕಾಯ್ದೆಗಳಿಗೆ ತಿದ್ದುಪಡಿ ತಂದು ರಿಯಲ್ ಎಸ್ಟೇಟ್‌ಗಳಿಗೆ ಅವಕಾಶ ಮಾಡಿಕೊಟ್ಟಿದ್ದರ ಪರಿಣಾಮ ಅತ್ಯಂತ ಕೆಟ್ಟದಾಗಿದೆ. ಆದರೆ ಪರಿಣಾಮದ ಕಾರಣಗಳನ್ನು ಕೃಷಿಕೂಲಿಕಾರರ ಮತ್ತು ರೈತರಿಗೆ ವಿವರಿಸುವವರು ಯಾರು? ರೈತ ಕುಟುಂಬದ ಮಕ್ಕಳೇ ಇಂದಿನ ಕಾರ್ಮಿರು & ಕೃಷಿಕೂಲಿಕಾರರಲ್ಲವೇ? ಆದ್ದರಿಂದ ಜಿಲ್ಲಾ, ತಾಲ್ಲೂಕು & ವಾರ್ಡ್/ಗ್ರಾಮ ಪಂಚಾಯ್ತಿ ಹಂತದ ಕಾರ್ಮಿಕ ನಾಯಕರು ಇಂದು ತಳಹಂತದಲ್ಲಿ ಸ್ವಾಗತ ಸಮಿತಿಗಳನ್ನು ಲಿಂಗಭೇದ, ಧರ್ಮಬೇಧ ಮತ್ತು ಜಾತಿಭೇಧವಿಲ್ಲದೇ ರಚಿಸಿಕೊಳ್ಳುತ್ತಿದ್ದಾರೆ.

ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಬೆಂಗಳೂರು ಗ್ರಾಮಾಂತರ, ತುಮಕೂರು, ಮಂಗಳೂರು, ರಾಯಚೂರು, ಗುಲ್ಬರ್ಗಾ, ಹಾಸನ, ಮೈಸೂರು, ಮಂಡ್ಯ, ಉಡುಪಿ, ಬಳ್ಳಾರಿ, ವಿಜಯನಗರ ಇನ್ನು ಮುಂತಾದ ಜಿಲ್ಲೆಗಳಲ್ಲಿ ನೂರಾರು ಸಮಿತಿಗಳನ್ನು ರಚಿಸಿಲಾಗಿದೆ.

1970 ಮೇ 30 ರಂದು ಅಧಿಕೃತವಾಗಿ ಜನಿಸಿದ ಸಿಐಟಿಯು ಸ್ವಾತಂತ್ರ್ಯ ಪೂರ್ವ & ಸ್ವಾತಂತ್ರ್ಯ ನಂತರ ಹಲವಾರು ಧೀರೊದಾತ್ತ ಹೋರಾಟಗಳನ್ನು ನಡೆಸುತ್ತಿದೆ. "ದುಡಿಯುವ ವರ್ಗದ ಐಕ್ಯತೆ" ಗಾಗಿ ತನ್ನತನವನ್ನು ಬದಿಗಿಟ್ಟು ಕಾರ್ಮಿಕ ವರ್ಗದ ವಿಮೋಚನೆಗಾಗಿ ದೇಶಾದಾದ್ಯಂತ ಜಂಟೀ ಚಳುವಳಿಗಳ ಕೇಂದ್ರ ಬಿಂದುವಾಗಿ ಕೆಲಸ ಮಾಡುತ್ತಿದೆ.

ಇಂದು ದೇಶದ ಎಲ್ಲಾ ರಾಜ್ಯಗಳಲ್ಲಿಯೂ 60 ಲಕ್ಷ ಸದಸ್ಯತ್ವ ಹೊಂದಿರುವ ಕೇಂದ್ರ ಕಾರ್ಮಿಕ ಸಂಘಟನೆಯಾಗಿ, ಹೊರ ಹೊಮ್ಮಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿಯೂ 'World Federation of Trade Union' ನ ಪ್ರಮುಖ ನಿರ್ಣಯಗಳಲ್ಲಿ ಪಾಲ್ಗೊಳ್ಳುತ್ತ ದುಡಿಯುತ್ತಿದೆ. **ಇಂತಹ ಸಿಐಟಿಯು ವಿನ 1,500 ಜನ ನಾಯಕರು ಇಂದು ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್‌ನಲ್ಲಿ ಸೇರುತ್ತಿದ್ದಾರೆ.**

ಈ ಸಮ್ಮೇಳನದ ಚರ್ಚೆಗಳು ಕಾರ್ಮಿಕರನ್ನು ಪೀಡಿಸುವ ನೀತಿಗಳ ಹಿಂದಿನ ಕಾರಣ, ದೇಶದ ಅಭಿವೃದ್ಧಿಗೆ ಕಾರಣೀಭೂತರಾದ ಕಾರ್ಮಿಕರ ಕೊಡುಗೆ & ಕಾರ್ಮಿಕ ಚಳುಚಳಿಗಳ ಬಗೆಗಿನ ಅಂಶಗಳನ್ನು ಚರ್ಚಿಸಲಾಗುತ್ತಿದೆ.

ಇಂತಹ ಚರ್ಚೆಗಳನ್ನು ಮಾಡುವ ಪ್ರತಿನಿಧಿಗಳಿಗೆ ವಸತಿ, ಆಹಾರವನ್ನು ಒದಗಿಸಬೇಕಿದೆ. ಅದಕ್ಕಾಗಿ ಹೆಚ್ಚಿನ ಹಣ ಖರ್ಚು ಬರುತ್ತದೆ.

ಈ ಹಣವನ್ನು ಸಂಗ್ರಹಿಸಲು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ವಿಶಾಲವಾದ ಸ್ವಾಗತ ಸಮಿತಿಯನ್ನು ರಚಿಸಿದೆ.

ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ಹಿರಿಯ ವಕೀಲರಾದ ಕಾಮ್ರೇಡ್.ಸುಬ್ಬುರಾವ್, ಅಧ್ಯಕ್ಷರಾಗಿ ವಿಮಾ ನೌಕರರ ಸಂಘದ ನಾಯಕರಾದ ಕಾಮ್ರೇಡ್. ಅಮಾನುಲ್ಲಾ ಖಾನ್, ಗೌರವ ಸಲಹೆಗಾರರಾಗಿ ಸಾಹಿತಿಗಳಾದ ನಾಡೋಜ ಬರಗೂರು ರಾಮಚಂದ್ರಪ್ಪ, ಎಸ್.ಜಿ.ಸಿದ್ದರಾಮಯ್ಯ, ಡಾ.

ಪುಟ 12 ಕ್ಕೆ





ಮೂರು ಚುನಾವಣೆ: ಗೆದ್ದದ್ದು ಒಂದು! ಕಳೆದುಕೊಂಡಿದ್ದು ಎರಡು.........

ಪುಟ 5 ರಿಂದ

ಮುಸ್ಲಿಂ ಅಭ್ಯರ್ಥಿಗಳನ್ನು ಆಯ್ಕೆ ಮಾಡಿತ್ತು. ಆದರೆ ಅವರಿಗೆ ಅದೇ ಸಮುದಾಯದ ಮುಖಂಡರಿಂದ ಪೈಪೋಟಿ ಎದುರಾಗಿತ್ತು. ಅದರ ಲಾಭವನ್ನು ಬಿಜೆಪಿ ಪಡೆದುಕೊಂಡು 15 ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ಹೀಗೆ ಈ ಕ್ಷೇತ್ರಗಳಲ್ಲಿನ ಬಿಜೆಪಿಯ ಗೆಲುವಿನಲ್ಲಿ ಎಎಪಿ ಮತ್ತು ಅಸಾದುದ್ದೀನ್ ಓವೈಸಿ ಅವರ ಎಐಎಂಐಎಂ ಪಾತ್ರ ಸಾಕಷ್ಟಿದೆ.

ಹಿಮಾಚಲ ಪ್ರದೇಶ:

ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ಭಾರಿ ಪೈಪೋಟಿಗೆ ಕಾರಣವಾಗಿದ್ದ ಹಿಮಾಚಲ ಪ್ರದೇಶದ ವಿಧಾನಸಭೆ ಚುನಾವಣೆ ಫಲಿತಾಂಶ ಹೊರ ಬಿದ್ದಿದೆ. ಒಟ್ಟು 68 ವಿಧಾನಸಭೆ ಕ್ಷೇತ್ರಗಳಲ್ಲಿ 40 ಕ್ಷೇತ್ರಗಳನ್ನು ತನ್ನದಾಗಿಸಿಕೊಳ್ಳುವ ಮೂಲಕ ಕಾಂಗ್ರೆಸ್ ಗೆಲುವಿನ ನಗೆ ಬೀರಿದೆ.

ಕಾಂಗ್ರೆಸ್ 43.90% ಮತಗಳೊಂದಿಗೆ 40 ಸ್ಥಾನಗಳಲ್ಲಿ ಗೆಲುವು ಸಾಧಿಸಿದರೆ. ಬಿಜೆಪಿ 43% ಮತಗಳೊಂದಿಗೆ 25 ಸ್ಥಾನ ಪಡೆದಿದ್ದಾರೆ. ಎಎಪಿ 1.10% ಮತ ಪಡೆದು ಯಾವುದೆ ಸ್ಥಾನವನ್ನು ಗಳಿಸಿಲ್ಲ. ಕಳೆದ ಬಾರಿಯ ಚುನಾವಣೆಯಲ್ಲಿ ಬಿಜೆಪಿ 48.8% ನೊಂದಿಗೆ 44 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಕಾಂಗ್ರೆಸ್ 41.07% 21 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಮತ ಪ್ರಮಾಣದಲ್ಲಿ ದೊಡ್ಡ ವ್ಯತ್ಯಾಸವೇನು ಇಲ್ಲ. 10 ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು 1000 ಮತಗಳ ಒಳಗೆ ಸೋಲು ಕಂಡಿದ್ದಾರೆ.

ಬಿಜೆಪಿ ಸೋಲಿಗೆ ಕಾರಣಗಳೇನು:

ಹಿಮಾಚಲ ಪ್ರದೇಶದಲ್ಲಿ ಮತದಾರರು ತಮ್ಮ ಮೂರು ದಶಕಗಳ ಸಂಪ್ರದಾಯವನ್ನು ಮತ್ತೆ ಪಾಲಿಸಿದ್ದಾರೆ. 1985 ರಿಂದ ಅಲ್ಲಿ ಒಮ್ಮೆ ಕಾಂಗ್ರೆಸ್ ಬಂದರೆ ಮತ್ತೊಮ್ಮೆ ಬಿಜೆಪಿ ಗೆಲ್ಲುತ್ತಾ ಬಂದಿದೆ. ಈ ಬಾರಿ ಬಿಜೆಪಿ ಗೆಲ್ಲಬಹುದು ಎಂದು ಹೇಳಲಾಗಿತ್ತು. ಆದರೆ ಬಂಡಾಯದ ಬಿಸಿ, ಆಡಳಿತ ವಿರೋಧಿ ಅಲೆ ಬಿಜೆಪಿಯನ್ನು ಸೋಲಿಸುವಂತೆ ಮಾಡಿವೆ.

ಪಕ್ಷದ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಬರೋಬ್ಬರಿ 50 ರ್ಯಾಲಿಗಳನ್ನು ನಡೆಸಿದ್ದರೆ, ಪ್ರಧಾನಿ ನರೇಂದ್ರ ಮೋದಿ ಐದು, ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ 20 ರ್ಯಾಲಿ ನಡೆಸಿದ್ದರು. ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರಂತೂ ಕಣ್ಣೀರು ಕೂಡಾ ಸುರಿಸಿದ್ದರು. ಆದರೂ ಬಿಜೆಪಿ ಸೋತಿದೆ. ಇದಕ್ಕೆ ಬಂಡಾಯ ಅಭ್ಯರ್ಥಿಗಳು ಕಾರಣ ಎಂಬ ಅಂಶ ಚರ್ಚೆಯಾಗುತ್ತಿದೆ. 30 ಕಡೆ ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಬಂಡಾಯ ಅಭ್ಯರ್ಥಿಗಳಾಗಿ ಕಣದಲ್ಲಿದ್ದರು. ಈ ಪೈಕಿ ಇಬ್ಬರು ಗೆದ್ದಿದ್ದಾರೆ. ಬಿಜೆಪಿ ಟಿಕೆಟ್ ವಂಚಿತರಾಗಿದ್ದ ಹೋಶಿಯಾರ್ ಸಿಂಗ್ ದೆಹ್ರಾ ಕ್ಷೇತ್ರದಲ್ಲಿ 14 ಸಾವಿರ ಮತಗಳ ಅಂತರದಿಂದ ಗೆದ್ದಿದ್ದರೆ, ಕೆ.ಎಲ್.ಠಾಕೂರ್ ನಾಲಗಢ ಕ್ಷೇತ್ರದಿಂದ ಜಯ ಸಾಧಿಸಿದ್ದಾರೆ. 28 ಕ್ಷೇತ್ರಗಳಲ್ಲಿ ಬಂಡಾಯ ಅಭ್ಯರ್ಥಿಗಳು ಬಿಜೆಪಿಯ ಮತಬುಟ್ಟಿಗೆ ಕೈ ಹಾಕಿದ್ದರಿಂದ ಬಿಜೆಪಿ ಸೋಲು ಅನುಭವಿಸಬೇಕಾಯಿತು. ಬಂಡಾಯ ಅಭ್ಯರ್ಥಿಗಳು 8.9% ಮತಗಳನ್ನು ಪಡೆದಿದ್ದಾರೆ. ಬಂಡಾಯ ಸಮಸ್ಯೆ ಜತೆಗೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಒಂದು ಬಣ, ಠಾಕೂರ್ ನೇತೃತ್ವದ ಇನ್ನೊಂದು ಬಣ ಹಾಗೂ ಸಿಎಂ ಜೈರಾಂ ಠಾಕೂರ್ ನೇತೃತ್ವದ ಮೂರನೇ ಬಣ ಹೀಗೆ ಪಕ್ಷದ ಮುಖಂಡರಲ್ಲೇ ಆಂತರಿಕ ಬಣ ರಾಜಕೀಯ ಕೂಡಾ ಬಿಜೆಪಿಗೆ ಮುಳುವಾಯಿತು ಎಂದು ವಿಶ್ಲೇಷಿಸಲಾಗುತ್ತಿದೆ.

ಕಾಂಗ್ರೆಸ್‌ಗೆ ಲಾಭವಾಗಿದ್ದು ಹೇಗೆ:

ಬಿಜೆಪಿ ಎದುರಿಸುತ್ತಿದ್ದ ಆಡಳಿತ ವಿರೋಧಿ ಅಲೆಯು ಕಾಂಗ್ರೆಸ್ ಪಾಲಿಗೆ ವರದಾನವಾಯಿತು. ಹಿಮಾಚಲ ಪ್ರದೇಶದ ಅತ್ಯಂತ ಜನಪ್ರಿಯ ನಾಯಕರಾದ ಕಾಂಗ್ರೆಸ್‌ನ ವೀರಭದ್ರ ಸಿಂಗ್ ಮತ್ತು ಬಿಜೆಪಿಯ ಪ್ರೇಮ್ ಕುಮಾರ್ ಧುಮಾಲ್ ಅವರಿಗೂ ತಮ್ಮ ಪಕ್ಷಗಳನ್ನು ಎರಡನೇ ಬಾರಿಗೆ ಅಧಿಕಾರ ತರಲು ಸಾಧ್ಯ ಆಗಿಲ್ಲ. ನಾಯಕತ್ವದ ಗೊಂದಲದ ಮಧ್ಯೆಯೂ ಅಲ್ಲಿನ ಜನರು ಕಾಂಗ್ರೆಸ್ ಕೈ ಹಿಡಿದಿದ್ದಾರೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

ಹಿಮಾಚಲ ಪ್ರದೇಶದಲ್ಲಿ ವೀರಭದ್ರ ಸಿಂಗ್. ಅವರಿದ್ದಾರೆ ಎಂದರೆ ಹೈಕಮಾಂಡ್ ಕೂಡಾ ಹೆಚ್ಚು ತಲೆ ಬಿಸಿ ಮಾಡಕೊಳ್ಳುತ್ತಿರಲಿಲ್ಲ. . ಆದರೆ, ವರ್ಷದ ಹಿಂದೆ ವೀರಭದ್ರ ಸಿಂಗ್ ಅವರು ಮೃತಪಟ್ಟಾಗ ಅಲ್ಲೊಂದು ಅನಾಥ ಭಾವ ಸೃಷ್ಟಿಯಾಯಿತು. ಅವರ ಪುತ್ರಿಯಾಗಿರುವ ಪ್ರತಿಭಾ ಸಿಂಗ್ ಅವರನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಿದ್ದರೂ ಅವರ ಮೇಲೆ ಪೂರ್ತಿ ಭಾರವನ್ನು ಹಾಕುವಂತಿರಲಿಲ್ಲ. ಹಾಗೂ ಸಿಎಂ ಆಕಾಂಕ್ಷಿಗಳು ಡಜನ್‌ಗಟ್ಟಲೇ ಇರುವುದನ್ನು ಮನಗಂಡ ಪ್ರಿಯಾಂಕಾ ಗಾಂಧಿ (ವಾದ್ರಾ) ಹಿಮಾಚಲದಲ್ಲಿ ತಿಂಗಳ ಪೂರ್ತಿ ಠಿಕಾಣಿ ಹೂಡಿದ್ದರು. ನಾಯಕರು ಕಚ್ಚಾಡಿಕೊಳ್ಳದಂತೆ ನೋಡಿಕೊಳ್ಳುವಲ್ಲಿ ಅವರು ಯಶಸ್ವಿಯಾದರು.

ಕಾಂಗ್ರೆಸ್ ಗೆಲುವಿಗೆ ಬಿಜೆಪಿಯ ಬಂಡಾಯ ಅಭ್ಯರ್ಥಿಗಳ ಕೊಡುಗೆಯೂ ಇದೆ. ಬಿಜೆಪಿಯು 11 ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಿತ್ತು. ಇದರಿಂದ ಬಿಜೆಪಿ ಪಕ್ಷದ ಗೆಲುವಿನ ಮಾರ್ಜಿನ್ ಕೂಡ ಕಡಿಮೆಯಾಯಿತು ಅಲ್ಲದೇ, ಕೆಲವು ಕಡೆ ಕಾಂಗ್ರೆಸ್ ಗೆಲ್ಲಲು ಅನುಕೂಲವಾಯಿತು. ಹಿಮಾಚಲ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಸೇಬು ಕೃಷಿ ಮತ್ತು ಮಾರಾಟ ಪ್ರಮುಖ ಕೊಡುಗೆಯನ್ನು ನೀಡುತ್ತದೆ. ಆದರೆ, ಬಿಜೆಪಿ ಸರ್ಕಾರವು ಆದಾನಿ ಕಂಪನಿಗೆ ಅನುಕೂಲವಾಗುವಂತೆ ನಡೆದುಕೊಂಡಿದ್ದು, ಸರ್ಕಾರ ವಿರುದ್ಧ ಕೋಪಗೊಳ್ಳಲು ಕಾರಣವಾಯಿತು. ಸೇಬು ಪೆಟ್ಟಿಗೆ ಮೇಲಿನ ಜಿಎಸ್‌ಟಿ ಹೆಚ್ಚಳವು ಭಾರೀ ಹೊಡೆತ ನೀಡಿತ್ತು. ತೋಟಗಾರಿಕೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ಅಡ ಇಡಲು ಹೊರಟಿದ್ದು ಪ್ರತಿಭಟನೆ ಕಾರಣವಾಗಿತ್ತು. ಇದು ಕೂಡ ಬಿಜೆಪಿ ಸೋಲಿಗೆ ಕಾರಣವಾದರೆ, ಕಾಂಗ್ರೆಸ್ ಗೆಲುವಿನ ಅಂಶಗಳಲ್ಲಿ ಒಂದಾಗಿದೆ ಎಂಬುದು ತಜ್ಞರ ಲೆಕ್ಕಾಚಾರವಾಗಿದೆ.

ತಲೆಕೆಳಗಾದ ಆಪ್ ಲೆಕ್ಕಾಚಾರ:

ಎರಡೂ ರಾಜ್ಯಗಳಲ್ಲಿ ಭಾರಿ ನಿರೀಕ್ಷೆ ಉಂಟು ಮಾಡಿದ್ದ ಆಮ್ ಆದ್ಮಿ ಪಕ್ಷ (ಆಪ್) ಗುಜರಾತ್ನಲ್ಲಿ ಐದು ಸ್ಥಾನಗಳಿಸಿರುವುದು ಸಾಧನೆ. ಆದರೆ, ಹಿಮಾಚಲದಲ್ಲಿ ಖಾತೆ ತೆರೆಯಲು ವಿಫಲವಾಗಿದೆ. ಎಎಪಿ ಸಾಕಷ್ಟು ಹಣ ಖರ್ಚು ಮಾಡಿ ಗುಜರಾತ್‌ನಲ್ಲಿ ಅಬ್ಬರದ ಪ್ರಚಾರ ನಡೆಸಿತ್ತು.

ಗುಜರಾತ್ ನಲ್ಲಿ ಕಾಂಗ್ರೆಸ್ 31 ಅಭ್ಯರ್ಥಿಗಳ ಸೋಲಿಗೆ ಎಎಪಿ ನೇರವಾಗಿ ಕಾರಣವಾಗಿದೆ. ಇದು ಬಿಜೆಪಿಯ ಬಿ ಟೀಮ್ ಎಂಬ ಆರೋಪಗಳು ಕೇಳಿ ಬರುತ್ತಿವೆ. ಹಿಮಾಚಲದಲ್ಲಿ ಹಲವು ಕ್ಷೇತ್ರಗಳಲ್ಲಿ ನೋಟಾಗಿಂತಲೂ ಕಡಿಮೆ ಮತವನ್ನು ಪಡೆದಿವೆ. ದೆಹಲಿ ಮಹಾನಗರದ ಚುಕ್ಕಾಣಿ ಹಿಡಿದು ಬಿಜೆಪಿ ಅಧಿಕಾರದ ಅಂಗಳಕ್ಕೆ ಲಗ್ಗೆ ಹಾಕಿದ್ದು ಎಎಪಿಗೆ ಸಮಾಧಾನ ತಂದಿದ್ದು ಬಿಟ್ಟರೆ ಉಳಿದ ಕಡೆ ಕಹಿ ಅನುಭವಿಸಿದೆ. ಒಟ್ಟಾರೆ ಮಾಧ್ಯಮಗಳ ಅಬ್ಬರಕ್ಕೆ ಉಬ್ಬಿಕೊಂಡಿದ್ದ ಎಎಪಿ ಬಲೂನ್ ಟುಸ್ ಆಗಿದೆ.

ಒಟ್ಟಿನಲ್ಲಿ ಈ ಮೂರು ಚುನಾವಣೆಗಳು ಸಾಕಷ್ಟು ಪಾಠಗಳನ್ನು ಕಲಿಸಿವೆ. ಮುಂಬರುವ ಚುನಾವಣೆಗಳಲಿ ಕೋಮುವಾದಿ ಪಕ್ಷವನ್ನು ಗೆಲ್ಲಿಸಬಾರದು ಎಂದು ಹೇಳುತ್ತಿರುವ ವಿಪಕ್ಷಗಳು ಐಕ್ಯ ಹೋರಾಟ, ಸೀಟು ಹೊಂದಾಣಿಕೆ ಮಾಡಕೊಳ್ಳದೆ ಹೋದರೆ ಬಿಜೆಪಿಯ ನಾಗಾಲೋಟ ಮುಂದುವರೆಯಲಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ.

ಮೂರು ಚುನಾವಣೆಗಳಲ್ಲಿ ಎರಡರಲ್ಲಿ ಬಿಜೆಪಿಗೆ ಸೋಲು ವಿರೋಧ ಪಕ್ಷಗಳು ಪಾಠ ಕಲಿಯಬೇಕು

ರಾಜ್ಯವಾರಾಗಿ ಪರಿಣಾಮಕಾರಿ ವಿರೋಧ ಒಡ್ಡಲು ಸಜ್ಜುಗೊಳ್ಳಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಇದೀಗ ನಡೆದಿರುವ ಮೂರು ಚುನಾವಣೆಗಳಲ್ಲಿ, ಗುಜರಾತಿನಲ್ಲಿ ಬಿಜೆಪಿ ಒಂದು ಭರ್ಜರಿ ವಿಜಯ ಗಳಿಸಿದೆ. ಆದರೆ ಇನ್ನೆರಡು ಚುನಾವಣೆಗಳಲ್ಲಿ –ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆ ಮತ್ತು ದಿಲ್ಲಿ ಮಹಾನಗರಪಾಲಿಕೆ ಚುನಾವಣೆಯಲ್ಲಿ– ಸೋತಿದೆ.

ಗುಜರಾತಿನಲ್ಲಿ ಬಿಜೆಪಿಯ ಸತತ ಐದನೇ ಗೆಲುವು ಅಲ್ಲಿ ಕಳೆದ ಮೂರು ದಶಕಗಳಲ್ಲಿ ಬಿಜೆಪಿ–ಆರ್‌ಎಸ್‌ಎಸ್ ಆಳವಾದ ಕೋಮು ಧ್ರುವೀಕರಣವನ್ನು ಸೃಷ್ಟಿಸಿರುವುದನ್ನು ದೃಢೀಕರಿಸಿದೆ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಬೆಲೆ ಏರಿಕೆ, ನಿರುದ್ಯೋಗ ಮತ್ತು ಕಳಪೆ ಸಾರ್ವಜನಿಕ ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳಂತಹ ಹೆಚ್ಚು ಪ್ರಮುಖವಾದ ಬದುಕಿನ ಸಮಸ್ಯೆಗಳನ್ನು ಮೀರಿ ಗುಜರಾತೀ ಹೆಮ್ಮೆಯ ಮಾತುಗಾರಿಕೆಯೊಂದಿಗೆ ಹಿಂದೂಗಳೆಲ್ಲ ಒಂದು ಎಂಬ ಐಡೆಂಟಿಟಿಯನ್ನು ಬಿಂಬಿಸಿರುವುದರ ಕೈಮೇಲಾಗಿದೆ.

ಆದರೆ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಗೆಲುವು ಬಿಜೆಪಿಗೆ ಬಲವಾಗಿ ಕುಟುಕುವ ಸೋಲು ತಂದಿದೆ ಎಂದು ವರ್ಣಿಸುತ್ತ, ಬಿಜೆಪಿ ಅಧಿಕಾರವನ್ನು ಉಳಿಸಿಕೊಳ್ಳಲು ತನ್ನ ಎಲ್ಲಾ ಸಂಪನ್ಮೂಲಗಳನ್ನು ಮತ್ತು ಪ್ರಭುತ್ವ ಯಂತ್ರವನ್ನು ಬಳಸಿಕೊಂಡಿದ್ದರೂ ಆ ಪಕ್ಷದ ದುರಾಡಳಿತದ ಬಗ್ಗೆ ಜನಸಾಮಾನ್ಯರ ಅಸಮಾಧಾನ ಮೇಲುಗೈ ಸಾಧಿಸಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ದಿಲ್ಲಿಯಲ್ಲಿ, ಏಕೀಕೃತ ಮಹಾನಗರಪಾಲಿಕೆಗೆ ನಡೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು ಕಳೆದ ಹದಿನೈದು ವರ್ಷಗಳಿಂದ ಪಾಲಿಕೆಯನ್ನು ಹಿಡಿದುಕೊಂಡಿದ್ದ ಬಿಜೆಪಿಯನ್ನು ಸೋಲಿಸಿದೆ. ಬಿಜೆಪಿ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಆಮಿಷಗಳು ಮತ್ತು ತಂತ್ರಗಳನ್ನು ದಿಲ್ಲಿಯ ಜನರು ಎದುರಿಸಿ ನಿಂತಿದ್ದಾರೆ ಎಂದು ಪೊಲಿಟ್ ಬ್ಯುರೊ ಟಿಪ್ಪಣಿ ಮಾಡಿದೆ.

ಹಿಮಾಚಲ ಪ್ರದೇಶ ಮತ್ತು ದಿಲ್ಲಿಯ ಫಲಿತಾಂಶಗಳು ಬಿಜೆಪಿಯ ಅಪಾರ ಹಣಬಲ ಮತ್ತು ಸಂಪನ್ಮೂಲಗಳ ಹೊರತಾಗಿಯೂ ಅದು ಹೊಂದಿರುವ ದುರ್ಬಲತೆಯನ್ನು ಬಯಲಿಗೆ ತಂದಿವೆ. ಬಹು–ಪ್ರಚಾರಿತ ಮೋದಿ ಸಂಗತಿಯ ಮಿತಿಗಳೂ ಮುನ್ನೆಲೆಗೆ ಬಂದಿವೆ ಎಂದು ಹೇಳಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ವಿರೋಧ ಪಕ್ಷಗಳು ಈ ಫಲಿತಾಂಶಗಳಿಂದ ಸರಿಯಾದ ಪಾಠಗಳನ್ನು ಕಲಿಯಬೇಕು ಮತ್ತು ಎಲ್ಲಾ ಶಕ್ತಿಗಳನ್ನು ಸಜ್ಜುಗೊಳಿಸುವ ಮೂಲಕ ರಾಜ್ಯವಾರಾಗಿ ಬಿಜೆಪಿಗೆ ಪರಿಣಾಮಕಾರಿ ಐಕ್ಯ ವಿರೋಧವನ್ನು ಒಡ್ಡಲು ಯೋಜನೆಗಳನ್ನು ರೂಪಿಸಬೇಕು ಎಂದು ಹೇಳಿದೆ.

ಸಿ.ಐ.ಟಿ.ಯು.ವಿನ ಅಖಿಲ ಭಾರತ ಸಮ್ಮೇಳನ: ಉತ್ಸಾಹದ ತಯಾರಿ–ಯಾರಿಂದ?.......

ಪುಟ 11 ರಿಂದ

ಕೆ.ಪೂರ್ಣಿಮಾ, ಸಂಗೀತ ದಿಗ್ಗಜರಾದ ಮಾನ್ಯ ಹಂಸಲೇಖ, ಮುಂತಾದವರು––––.

ಉತ್ಸಾಹದಿಂದ ಕಾರ್ಮಿಕ ವರ್ಗದ ಭಾಗಿತ್ವ

ಈ ಸಮ್ಮೇಳನವನ್ನು ಯಶಸ್ವಿ ಮಾಡಲು ಕಾರ್ಮಿಕರು ಅತಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ. ಅಕ್ಟೋಬರ್ ಹಬ್ಬಗಳು, 3–4 ತಿಂಗಳಿಂದ ಬಿಸಿಯೂಟ, ಅಂಗನವಾಡಿ, ಗ್ರಾಮ ಪಂಚಾಯ್ತಿ ನೌಕರರಿಗೆ ಸಂಬಳವಿಲ್ಲ, ಬೀದಿ ಬದಿ ವ್ಯಾಪಾರಿಗಳು, ಮನೆಕೆಲಸಗಾರರು, ಸಂಘಟಿತ ಕಾರ್ಮಿಕರು, ಸಣ್ಣ–ಪುಟ್ಟ ಕೆಲಸ ಮಾಡುವವರು, ಕಟ್ಟಡ & ಹಮಾಲಿ ಕಾರ್ಮಿಕರ ಉತ್ಸಾಹ ಹೇಳತೀರದು. ಚಳ್ಳಕೆರೆ ಎಪಿಎಂಸಿ ಯ ಹಮಾಲಿ ಕಾರ್ಮಿಕರಾದ ನಿಂಗಣ್ಣ 10 ಸಾವಿರ, ಗ್ರಾಮ ಪಂಚಾಯ್ತಿ ಕಸ ಗುಡಿಸುವ ಕಾರ್ಮಿಕರಾದ ತಿಮ್ಮಪ್ಪ 5 ಸಾವಿರ, ನೌಕರರಾದ ಪವಿತ್ರ, ಮಹೇಶ್, ಕೇಶವ ಎಂಬುವವರು ತಲಾ 10 ಸಾವಿರದಂತೆ ಇನ್ನೂ ಕೆಲವರು ಘೋಷಣೆ ಮಾಡಿದ್ದಾರೆ. ಬಿಸಿಯೂಟ ನೌಕರರಾದ ಚಾಮರಾಜನಗರದ ಶಿವಮ್ಮ 3 ಸಾವಿರ, ಬಳ್ಳಾರಿ ಓಂಕಾರಿ 1 ಸಾವಿರ, ಗೌರಿಬಿದನೂರು ರಾಜಮ್ಮ 4 ಸಾವಿರ, ಕೊಪ್ಪಳ ಬಿಸಿಯೂಟ ನೌಕರರ ಸಮ್ಮೇಳನದಲ್ಲಿ ಅರ್ಧ(1/2) ಗಂಟೆಯ ಸಂಗ್ರಹ 7 ಸಾವಿರ, ಹಾಗೆಯೇ ಅಂಗನವಾಡಿ ನಿವೃತ್ತಿ ಕಾರ್ಯಕರ್ತರು ಆದ ಯಾದಗಿರಿ ಸುರೇಖಾ 5 ಸಾವಿರ, ಬಾಗಲಕೋಟೆ ದಾಸರ್ 5,000 ರೂ, 1 ತಿಂಗಳ ವೇತನವನ್ನು ಬಿಜಾಪುರದ ಸುನಂದಾ ನಾಯಕ, ಜಮಖಂಡಿಯ ಹೂಗಾರ್, ಶ್ರೀದೇವಿ ಸಂಗಿ, ಸಂತ್ತೆಮರಳ್ಳಿಯ ತುಳಸಮ್ಮ ಹಾಗೆಯೇ ಮಂಡ್ಯ ಪ್ರಮೀಳಾ 15 ಸಾವಿರ ರೂಗಳನ್ನು ಪಾವತಿ ಮಡಿದ್ದಾರೆ. ಕಾರ್ಖಾನೆಗಳ ಕಾರ್ಮಿಕರು ಒಂದು ದಿನದ ವೇತನದ ಜೊತೆಯಲ್ಲಿ 3,000–5,000 ರೂಗಳನ್ನು ಕೆಲವರು ಘೋಷಣೆ ಮಾಡಿದ್ದಾರೆ. ಹೀಗೆ ಸಿಐಟಿಯು ಸಂಯೋಜಿತ ಸಂಘಗಳ ಸದಸ್ಯರು, ಹಿತೈಷಿಗಳು ಹಣದ ಸಹಾಯದೊಂದಿಗೆ ಆಹಾರ ಸಾಮಾಗ್ರಿಗಳಾದ ಅಕ್ಕಿ, ಸಕ್ಕರೆ, ಬೆಲ್ಲ, ಮೆಣಸಿನಕಾಯಿ, ಹುಣಸೆ ಹಣ್ಣು, ಕಾಫಿ ಪುಡಿ, ಮೆಣಸು, ಶುಂಠಿ, ಆಲುಗಡ್ಡೆ. ಈರುಳ್ಳಿ, ಕೋಳಿಮೊಟ್ಟೆ, ಮಾಂಸ, ಬೇಳೆಕಾಳು ಮುಂತಾದವುಗಳನ್ನು ತಮ್ಮ ಕೈಲಾದಷ್ಟು ಕೊಡಲು ಒಪ್ಪಿದ್ದಾರೆ.

ಜಿಲ್ಲೆಗಳಲ್ಲಿ ಸ್ವಾಗತ ಸಮಿತಿಗಳು

ಇನ್ನು ಸ್ಥಳೀಯ ಸ್ವಾಗತ ಸಮಿತಿಗಳನ್ನು ವಿವಿಧ ಜಿಲ್ಲೆಗಳಲ್ಲಿ ರಚಿಸಿಕೊಂಡು ಮನೆಗಳು, ಅಂಗಡಿಗಳಲ್ಲಿ ಬೀದಿ ಸಂಗ್ರಹಕ್ಕೆ ಕಾರ್ಯಕರ್ತರು ದಿನ ನಿತ್ಯ ಕೆಂಪು ಬಾವುಟಗಳನ್ನು ಹಿಡಿದು ಡಬ್ಬಿ ಸಂಗ್ರಹ ಮಾಡುತ್ತಿದ್ದಾರೆ. ಮಂಗಳೂರಿನಲ್ಲಿ ಒಂದೇ ದಿನದಲ್ಲಿ 35 ತಂಡಗಳಲ್ಲಿ 175 ಕಾರ್ಯಕರ್ತರು 1,61,181 ರೂ ಗಳು, ಹಾಗೆಯೇ ಬೆಂಗಳೂರು ದಕ್ಷಿಣದಲ್ಲಿ 60 ತಂಡಗಳ ಮುಖಾಂತರ, ದಿನನಿತ್ಯ ಮೈಸೂರು, ರಾಯಚೂರು, ತುಮಕೂರು, ಬೆಂಗಳೂರು ಉತ್ತರ ಮುಂತಾದೆಡೆ ಮಾಡುತ್ತಿದ್ದಾರೆ. ರಾಯಚೂರಿನಲ್ಲಿ ಅಂಗನವಾಡಿ ಮಕ್ಕಳು ಕೂಡಿಟ್ಟಿರುವ ಹುಂಡಿ ಹಣವನ್ನು ಈ ಸಮ್ಮೇಳನಕ್ಕೆ ಕೊಡುತ್ತಿರುವುದು ಅತ್ಯಂತ ರೋಮಾಂಚಕವಾಗಿದೆ.

ಈ ಸಮ್ಮೇಳನವನ್ನು ಯಶಸ್ವಿ ಮಾಡಲು ಆಹಾರ, ಸಾರಿಗೆ, ಸ್ವಯಂ ಸೇವಕರು, ಕೆಂಪು ಸ್ವಯಂ ಸೇವಕರು, ಅತಿಥಿಗಳು, ಸಮ್ಮೇಳನ ವೇದಿಕೆ, ಅಲಂಕಾರ, ಮಾದ್ಯಮ, ಸ್ಮರಣ ಸಂಚಿಕೆ, ವಿಚಾರ ಸಂಕಿರಣ, ಸಾಮಾಜಿಕ ಜಾಲತಾಣ, ಪ್ರಚಾರ, ಸಾಂಸ್ಕೃತಿಕ, ಹಣಕಾಸು ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ವೈದ್ಯಕೀಯ, ಬಹಿರಂಗ, ಮುದ್ರಣ & ವಿನ್ಯಾಸ, ಅನುವಾದ–ಭಾಷಾಂತರ, ಬಹಿರಂಗ ಸಭೆ ಯನ್ನೊಳಗೊಂಡು 25 ಸಮಿತಿಗಳನ್ನು ರಚಿಸಲಾಗಿದೆ.

ಈ ಸಮ್ಮೇಳನವನ್ನು ಯಶಸ್ವಿ ಮಾಡಲು ಕಾರ್ಮಿಕ ಆಂದೋಲನದಲ್ಲಿ ನಂಬಿಕೆಯಿಟ್ಟಿರುವ ಪ್ರತಿಯೊಬ್ಬರೂ ಭಾಗವಹಿಸುವ ಮುಖಾಂತರ ಯಶಸ್ವಿಗೊಳಿಸೋಣ.

ತೆರಿಗೆ-ಜಿಡಿಪಿ ಅನುಪಾತ ಹೆಚ್ಚದೆ ಕಲ್ಯಾಣ ಪ್ರಭುತ್ವ ಅಸಾಧ್ಯ

ಉನ್ನತ ಜಿಡಿಪಿ(ಒಟ್ಟು ದೇಶೀಯ ಉತ್ಪಾದನೆ) ಬೆಳವಣಿಗೆಯಿಂದ ಮಾತ್ರವೇ ಸುಖೀ ರಾಜ್ಯದತ್ತ, ಕಲ್ಯಾಣ ಪ್ರಭುತ್ವದತ್ತ ಸಾಗಲು ಸಾಧ್ಯ ಎಂಬ ನವ-ಉದಾರವಾದಿ ಬಂಡವಾಳಶಾಹಿಯ ಪ್ರಸ್ತುತ ಯುಗದಲ್ಲಿ ಪ್ರಚುರ ಪಡಿಸಲಾಗುತ್ತಿರುವ ಜಿಡಿಪಿ-ಬೆಳವಣಿಗೆಯ ಗೀಳಿನ ಎರಡು ಎದ್ದು ಕಾಣುವ ಸಮಸ್ಯೆಗಳೆಂದರೆ: ಸರಕಾರದಿಂದ ಬಂಡವಾಳಿಗರಿಗೆ ಹೆಚ್ಚಿಸುವ ಹಣ ವರ್ಗಾವಣೆಗಳು ಹೂಡಿಕೆಯನ್ನು ಹೆಚ್ಚಿಸುತ್ತವೆ ಮತ್ತು ಆ ಮೂಲಕ ಜಿಡಿಪಿಯ ಬೆಳವಣಿಗೆಗೆ ಕಾರಣವಾಗುತ್ತವೆ ಎಂಬ ದೋಷಭರಿತ ವಿಶ್ಲೇಷಣೆ ಮತ್ತು ತೆರಿಗೆ-ಜಿಡಿಪಿ ಅನುಪಾತವು ಕೆಳ ಮಟ್ಟದಲ್ಲಿದ್ದರೂ ಸಹ ಜಿಡಿಪಿಯ ಉನ್ನತ ಬೆಳವಣಿಗೆಯೇ ಜನರ ಹೆಚ್ಚಿನ ಕ್ಷೇಮಾಭಿವೃದ್ಧಿಗೆ ಕಾರಣವಾಗುತ್ತದೆ ಎಂಬ ದಾವೆ. ಭಾರತದ್ದು ಉನ್ನತ ಜಿಡಿಪಿ ಬೆಳವಣಿಗೆಯ ಅರ್ಥವ್ಯವಸ್ಥೆಯೆಂದು ನಮ್ಮ ಆಳರಸರು ಬೆನ್ನು ತಟ್ಟಿಕೊಳ್ಳುತ್ತಲೇ ಇದ್ದಾರಾದರೂ, ಅದರ ಜನ-ಹಿತ ಕ್ರಮಗಳ ಮಟ್ಟ ಕಳಪೆಯೇ. ಭಾರತದ ತೆರಿಗೆ-ಜಿಡಿಪಿ ಅನುಪಾತವೂ ಸಹ (18.08%) ಕೆಳಮಟ್ಟದಲ್ಲಿ ಇರುವುದು ಆಶ್ಚರ್ಯದ ಸಂಗತಿಯೇನಲ್ಲ. ಸುಖೀ ರಾಜ್ಯವನ್ನು ಸ್ಥಾಪಿಸುವ ಸಲುವಾಗಿ ಹಣ ಹೊಂದಿಸುವ ಸರಕಾರದ ಪ್ರಯತ್ನಗಳನ್ನು ಅಪಾರವಾಗಿ ಹೆಚ್ಚಿಸುವ, ಅದಕ್ಕಾಗಿ ತೆರಿಗೆ-ಜಿಡಿಪಿ ಅನುಪಾತವನ್ನು ಹೆಚ್ಚಿಸುವ ಅಗತ್ಯವಿದೆ ಎಂಬುದನ್ನು ವಿಶ್ವದ ಎಲ್ಲೆಡೆಯ ಅನುಭವ ಹೇಳುತ್ತದೆ.

ಪ್ರೊ.ಪ್ರಭಾತ್ ಪಟ್ನಾಯಕ್

ಅನು: ಕೆ.ಎಂ.ನಾಗರಾಜ್



ಸೋವಿಯತ್ ಒಕ್ಕೂಟವು ಆಚರಣೆಗೆ ತಂದಿದ್ದ ಕಲ್ಯಾಣ ಪ್ರಭುತ್ವದ ಹಲವಾರು ಜನ-ಹಿತ ಕ್ರಮಗಳನ್ನು, ಮುಂದುವರೆದ ಬಂಡವಾಳಶಾಹಿ ದೇಶಗಳು, ವಿಶೇಷವಾಗಿ ಯೂರೋಪಿನ ದೇಶಗಳು, ಎರಡನೆಯ ಮಹಾಯುದ್ಧದ ನಂತರದ ವರ್ಷಗಳಲ್ಲಿ ಅನುಕರಿಸಿದವು. ಈ ಕಲ್ಯಾಣ ಕ್ರಮಗಳ ಬಗ್ಗೆ ವಿರೋಧವಿದ್ದರೂ ಸಹ, ಅವುಗಳನ್ನು ಬಂಡವಾಳಶಾಹಿಯು ಒಪ್ಪಿಕೊಳ್ಳಲೇ ಬೇಕಾಯಿತು. ಏಕೆಂದರೆ, ಆ ಸಂದರ್ಭದಲ್ಲಿ, ಬಂಡವಾಳಶಾಹಿ ಯುದ್ಧದಿಂದ ದುರ್ಬಲಗೊಂಡಿತ್ತು. ಕಾರ್ಮಿಕ ವರ್ಗದ ಆಕ್ರೋಶದಿಂದ ತಲ್ಲಣಗೊಂಡಿತ್ತು. ಪೂರ್ವ ಯೂರೋಪಿನ ದೇಶಗಳಲ್ಲಿ ಸಮಾಜವಾದದ ಹರಡುವಿಕೆಯಿಂದ ಅದು ಭಯಭೀತವಾಗಿತ್ತು. ಹಾಗಾಗಿ, ಬಂಡವಾಳಶಾಹಿಯ ಅಸ್ತಿತ್ವವೇ ಅಪಾಯದಲ್ಲಿತ್ತು. ತನ್ನ ಪರಿಸ್ಥಿತಿ ಸುಧಾರಿಸಿದ ನಂತರ, ಕಲ್ಯಾಣ ಪ್ರಭುತ್ವದ ಕ್ರಮಗಳ ಬಗ್ಗೆ ಬಂಡವಾಳಶಾಹಿಯ ಹಗೆತನವು ಬಹಿರಂಗವಾಗಿ ಪ್ರಕಟಗೊಂಡಿತು. ಜನ-ಕಲ್ಯಾಣ ಕ್ರಮಗಳನ್ನು ಬಂಡವಾಳಶಾಹಿಯು ರದ್ದುಗೊಳಿಸಲು ಪ್ರಯತ್ನಿಸಿತಾದರೂ, ಕಾರ್ಮಿಕರ ಪ್ರತಿರೋಧದಿಂದಾಗಿ ಆ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಬ್ರಿಟನ್‌ನಲ್ಲಿ ರಾಷ್ಟ್ರೀಯ ಆರೋಗ್ಯ ಸೇವೆಯನ್ನು ಮಾರ್ಗರೆಟ್ ಥ್ಯಾಚರ್ ರಂತಹ ನಾಯಕಿಯೂ ಸಹ ರದ್ದುಪಡಿಸಲಾಗಲಿಲ್ಲ. ವಿಪರ್ಯಾಸವೆಂದರೆ, ಲೂಟಿಕೋರತನಕ್ಕೆ ಹೆಸರಾಗಿದ್ದ ಬಂಡವಾಳಶಾಹಿಯು, ಅದೇ ಸಮಯದಲ್ಲಿ, ಜನ-ಹಿತ ಕ್ರಮಗಳನ್ನು ಜಾರಿಗೊಳಿಸಿದ್ದರಿಂದಾಗಿ ಖಂಡಿತಾ ತಾನೊಂದು ಲೂಟಿಕೋರ ವ್ಯವಸ್ಥೆಯಲ್ಲ, ನಿಜವಾಗಿಯೂ ಜನತೆಯ ಕಲ್ಯಾಣವನ್ನು ಖಾತ್ರಿಪಡಿಸುವ ವ್ಯವಸ್ಥೆ ಎಂಬ ರೀತಿಯ ಸಮರ್ಥನೆಯನ್ನೇ ಪಡೆಯಿತು.


ಕಲ್ಯಾಣ ಪ್ರಭುತ್ವದ ಜನ-ಹಿತ ಕ್ರಮಗಳನ್ನು ಮುಂದುವರೆಸಿಕೊಂಡು ಹೋಗಲು ತೆರಿಗೆ-ಜಿಡಿಪಿ ಅನುಪಾತವು ಯುರೋಪಿಯನ್ ದೇಶಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಮತ್ತು ಜನ-ಹಿತ ಕ್ರಮಗಳಿಗೆ ಹೆಚ್ಚು ಒತ್ತು ಕೊಡದಿರುವ ದೇಶಗಳ ಪ್ರಸ್ತುತ ಪರಿಸ್ಥಿತಿಗೆ ಹೋಲಿಸಿದರೆ, ಗಣನೀಯವಾಗಿ ಹೆಚ್ಚಿರಬೇಕಾಗುತ್ತದೆ. ತೆರಿಗೆ-ಜಿಡಿಪಿ ಅನುಪಾತವನ್ನು ಅವರೋಹಣ ಕ್ರಮದಲ್ಲಿ ಸಿದ್ಧಪಡಿಸಿದ 2020ರ ವರ್ಷದ ಪಟ್ಟಿಯಲ್ಲಿ, ಅಗ್ರ 30 ದೇಶಗಳ ಪೈಕಿ 29 ದೇಶಗಳು, ಕಮ್ಯುನಿಸ್ಟ್ ಪಕ್ಷದ ಆಳ್ವಿಕೆಯ ಪರಂಪರೆಯನ್ನು ಅಥವಾ ಸೋಷಿಯಲ್ ಡೆಮಾಕ್ರಟಿಕ್ ಆಳ್ವಿಕೆಯ ಪರಂಪರೆಯನ್ನು ಹೊಂದಿರುವ ಯುರೋಪಿಯನ್ ದೇಶಗಳೇ. ಯೂರೋಪಿಗೆ ಸೇರದ ಏಕೈಕ ದೇಶವೆಂದರೆ ಕ್ಯೂಬಾ. ಅದರ ಕಮ್ಯುನಿಸ್ಟ್ ಆಡಳಿತವನ್ನು ಮಾತ್ರವಲ್ಲ, ಅದರ ಕಲ್ಯಾಣ ಪ್ರಭುತ್ವದ ಜನ-ಹಿತ ಕ್ರಮಗಳನ್ನೂ ಸಹ ಪ್ರಪಂಚದಾದ್ಯಂತ ಪ್ರಶಂಸಿಸಲಾಗಿದೆ.

ಕಮ್ಯುನಿಸ್ಟ್ ಸರ್ಕಾರಗಳು ಜನ-ಕಲ್ಯಾಣ ಕ್ರಮಗಳನ್ನು ಆಚರಣೆಗೆ ತಂದಿರುವುದು ಮತ್ತು ಅದಕ್ಕಾಗಿ ಅಗತ್ಯ ಸಂಪನ್ಮೂಲಗಳನ್ನು ಹೆಚ್ಚಿನ ಮಟ್ಟದ ತೆರಿಗೆಗಳ ಮೂಲಕ ಒದಗಿಸಿಕೊಳ್ಳುವುದು ಆಶ್ಚರ್ಯದ ಸಂಗತಿಯಲ್ಲ. ಕಮ್ಯುನಿಸಂನ ಪತನದ ನಂತರವೂ ಜನ-ಕಲ್ಯಾಣ ವ್ಯವಸ್ಥೆಯು ಅಲ್ಲಿ ಮುಂದುವರೆಯುತ್ತಿರುವುದೂ ಸಹ ಆಶ್ಚರ್ಯದ ಸಂಗತಿಯಲ್ಲ. ಆದರೆ, ಗಮನಾರ್ಹವಾದ ಸಂಗತಿಯೆಂದರೆ, ಪಶ್ಚಿಮ ಯುರೋಪಿನ ಸೋಷಿಯಲ್ ಡೆಮಾಕ್ರಸಿಯೂ ಸಹ ತನ್ನ ಜನ-ಹಿತ ಕ್ರಮಗಳ ನಿರ್ವಹಣೆ ನಿಮಿತ್ತ ಹಣ ಒದಗಿಸಿಕೊಳ್ಳಲು ಹೆಚ್ಚಿನ ತೆರಿಗೆ-ಜಿಡಿಪಿ ಅನುಪಾತವನ್ನು ಉಳಿಸಿಕೊಂಡಿದೆ ಎಂಬುದು. ಶೇ.46.2 ರಷ್ಟು ತೆರಿಗೆ-ಜಿಡಿಪಿ ಅನುಪಾತದೊಂದಿಗೆ ಫ್ರಾನ್ಸ್ ಅಗ್ರ ಸ್ಥಾನದಲ್ಲಿದ್ದರೆ, ನಂತರದ ಸ್ಥಾನಗಳಲ್ಲಿ, ಡೆನ್ಮಾರ್ಕ್ (46.0), ಬೆಲ್ಜಿಯಂ (44.6), ಸ್ವೀಡನ್ (44.0), ಫಿನ್ಲ್ಯಾಂಡ್ (43.3), ಇಟಲಿ (42.4) ಮತ್ತು ಆಸ್ಟ್ರಿಯಾ (41.8) ದೇಶಗಳಿವೆ. ಅಂದರೆ, ಕಲ್ಯಾಣ ಪ್ರಭುತ್ವದ ಕ್ರಮಗಳ ನಿರ್ವಹಣೆಗೆ ಹೆಚ್ಚಿನ ಮಟ್ಟದ ತೆರಿಗೆಗಳನ್ನು ವಿಧಿಸುವುದು ಅಗತ್ಯವಾಗುತ್ತದೆ ಎಂಬ ತೀರ್ಮಾನಕ್ಕೆ ಬರಲೇ ಬೇಕಾಗುತ್ತದೆ. ಅಂದರೆ, ಮಾರುಕಟ್ಟೆಯಲ್ಲಿ ಸಹಜವಾಗಿ ಉತ್ಪತ್ತಿಯಾಗುವ ಆದಾಯ ಹಂಚಿಕೆಯ ಮಾದರಿಯಲ್ಲಿ ಪ್ರಭುತ್ವದ ಹಸ್ತಕ್ಷೇಪವು ಅನಿವಾರ್ಯವಾಗಿ ದೊಡ್ಡ ಮಟ್ಟದಲ್ಲಿ ಇರಬೇಕಾಗುತ್ತದೆ

ಬಂಡವಾಳಶಾಹಿಯ ಸುವರ್ಣಯುಗ ಎಂದು ಕರೆಯಲಾದ ಮಹಾಯುದ್ಧಾನಂತರದ ಅವಧಿಯಲ್ಲೂ ಸಹ, ಯೂರೋಪಿನ ಈ ಯಾವುದೇ ದೇಶದ ಜಿಡಿಪಿ ಬೆಳವಣಿಗೆಯ ದರ, ಇಂದಿನ ಉನ್ನತ-ಬೆಳವಣಿಗೆಯ ಅರ್ಥವ್ಯವಸ್ಥೆಗಳ ಜಿಡಿಪಿ ಬೆಳವಣಿಗೆಯ ದರಗಳ ಮಟ್ಟಕ್ಕೆ ಬಂದಿರಲಿಲ್ಲ. 2008ರ ವಸತಿ ಗುಳ್ಳೆ ಕುಸಿತದ ನಂತರವಂತೂ ಯೂರೋಪಿನ ಈ ದೇಶಗಳ ಜಿಡಿಪಿ ಬೆಳವಣಿಗೆಯ ದರಗಳು ಇನ್ನೂ ಕೆಳಗೆ ಇಳಿದಿವೆ. ಇದಕ್ಕೆ ತದ್ವಿರುದ್ಧವಾಗಿ, ಭಾರತದ್ದು ಉನ್ನತ ಬೆಳವಣಿಗೆಯ ಅರ್ಥವ್ಯವಸ್ಥೆಯೆಂದು ಅದರ ಅಧಿಕಾರಿಗಳು ಬೆನ್ನು ತಟ್ಟುತ್ತಲೇ ಇದ್ದಾರಾದರೂ, ಅದರ ಜನ-ಹಿತ ಕ್ರಮಗಳ ಮಟ್ಟ ಕಳಪೆಯೇ. ಭಾರತದ ತೆರಿಗೆ-ಜಿಡಿಪಿ ಅನುಪಾತವೂ ಸಹ (18.08%) ಸಹ ಮಾಪನದಲ್ಲಿ ಕೆಳಭಾಗದಲ್ಲಿರುವುದು ಆಶ್ಚರ್ಯದ ಸಂಗತಿಯೇನಲ್ಲ.

ಟ್ರಿಕ್ಲ್ ಡೌನ್ ಪರಿಕಲ್ಪನೆ ಅರ್ಥಶೂನ್ಯ

ಈ ವಾಸ್ತವಾಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಮೂರು ಪ್ರತಿಪಾದನೆಗಳು ಸಿದ್ಧಿಸುತ್ತವೆ. ಮೊದಲನೆಯದಾಗಿ, "ಜಿನುಗು" ('ಟ್ರಿಕ್ಲ್ ಡೌನ್') ಪರಿಣಾಮ ಎಂದು ಕರೆಯಲಾಗುವ ಜಿಡಿಪಿ ಬೆಳವಣಿಗೆಯ ಪರಿಕಲ್ಪನೆಯು ಸಂಪೂರ್ಣವಾಗಿ ಒಂದು ಅರ್ಥಶೂನ್ಯ ಪರಿಕಲ್ಪನೆಯೇ ಸರಿ. ಬಂಡವಾಳಶಾಹಿಯ ಅನಿರ್ಬಂಧಿತ ಕಾರ್ಯಚರಣೆಯ ಫಲಿತಾಂಶವಾಗಿ ದುಡಿಯುವ ಜನಸಮೂಹದ ಕ್ಷೇಮಾಭಿವೃದ್ಧಿಯು ಎಂದಿಗೂ ಸಹಜವಾಗಿ ಹೆಚ್ಚುವುದಿಲ್ಲ. ಏಕೆಂದರೆ, ಒಂದು ಮೀಸಲು ಶ್ರಮಪಡೆಯ ಅಸ್ತಿತ್ವವಿಲ್ಲದೆ ಬಂಡವಾಳಶಾಹಿಯು ಕಾರ್ಯನಿರ್ವಹಿಸುವುದು ಸಾಧ್ಯವೇ ಇಲ್ಲ. ಕಾರ್ಮಿಕರ ಉತ್ಪಾದಕತೆಯು ಹೆಚ್ಚುತ್ತಲೇ ಇದ್ದರೂ ಸಹ, ಕೂಲಿಯ/ವೇತನದ ಮಟ್ಟವನ್ನು ಆದಷ್ಟು ಕೆಳ ಮಟ್ಟದಲ್ಲಿ ಇಡುವ ಉದ್ದೇಶದಿಂದಲೇ ಈ ಶ್ರಮ ಮೀಸಲು ಪಡೆಯನ್ನು ಸೃಷ್ಟಿಸಲಾಗುತ್ತದೆ. ಹಾಗಾಗಿ, ಸಾಮಾಜಿಕ ಉತ್ಪತ್ತಿಯಲ್ಲಿ ಮಿಗುತಾಯದ ಪಾಲು ಹೆಚ್ಚುತ್ತದೆ. ಮಿಗುತಾಯದ ಈ ಪಾಲನ್ನು ಬಂಡವಾಳಶಾಹಿಗಳು ಮತ್ತು ಅವರಿಗೆ "ಆತುಕೊಂಡವರು" ಬಳಸಿಕೊಳ್ಳುತ್ತಾರೆ, ಅವರ ಬಳಕೆ ಪ್ರಮಾಣ ಇನ್ನಷ್ಟು ಹೆಚ್ಚುತ್ತದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರು ತಂತಾನೇ ನಿರಾಯಾಸವಾಗಿ ಆರ್ಥಿಕ ಬೆಳವಣಿಗೆಯ ಪ್ರಯೋಜನಗಳನ್ನು ಪಡೆಯಲಾಗದು. ತಮ್ಮನ್ನು ತಾವು ಸಂಘಟಿಸಿಕೊಂಡರೆ, ತಮ್ಮ ಜೀವನ ಪರಿಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳಲು ಕಾರ್ಮಿಕರು ಹೋರಾಡಬಹುದು ಮತ್ತು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬಹುದು ನಿಜ. ಆದರೆ, ಅಂತಹ ಈಡೇರಿಕೆಯೊಂದಿಗೆ ತಮಗೆ ಹೆಚ್ಚಿನ ಸಾಮಾಜಿಕ ವೇತನವನ್ನು (ಜನ-ಹಿತ ಕ್ರಮಗಳನ್ನು) ಒದಗಿಸಿದ ನಿಮಿತ್ತ ಸರ್ಕಾರವು ತೆರಿಗೆ-ಜಿಡಿಪಿ ಅನುಪಾತವನ್ನು ಹೆಚ್ಚಿಸುವಂತೆ ಮಾಡುತ್ತಾರೆ. ಬೇರೆ ಮಾತುಗಳಲ್ಲಿ ಇದನ್ನು ಹೇಳುವುದಾದರೆ, ಕಾರ್ಮಿಕರ ಜೀವನ ಪರಿಸ್ಥಿತಿಗಳು ಉತ್ತಮಗೊಳ್ಳುವುದು ಜಿಡಿಪಿ ಬೆಳವಣಿಗೆಯ ದರದ "ಜಿನುಗು" ಪರಿಣಾಮದಿಂದಲ್ಲ, ಅದು ನಿರ್ಣಾಯಕವೇನಲ್ಲ, ಬದಲಿಗೆ, ಪರಿಣಾಮಕಾರಿಯಾಗಿ ಹೋರಾಡುವ ಕಾರ್ಮಿಕರ ಸಾಮರ್ಥ್ಯವೇ ಇದರಲ್ಲಿ ನಿಜಕ್ಕೂ ನಿರ್ಣಾಯಕ ಅಂಶ.



ತೆರಿಗೆಗಳು ಕೆಳ ಮಟ್ಟದಲ್ಲಿದ್ದರೂ ಸಹ, ಜಿಡಿಪಿಯ ಬೆಳವಣಿಗೆಯ ದರವು ಉನ್ನತ ಮಟ್ಟದಲ್ಲಿದ್ದಾಗ ಅನೇಕ ಸಂಪನ್ಮೂಲಗಳು ಸರ್ಕಾರಕ್ಕೆ ನಿರಾಯಾಸವಾಗಿ ದೊರಕುವುದರಿಂದ ದುಡಿಯುವ ಜನರಿಗೆ ಕಲ್ಯಾಣ ಕ್ರಮಗಳನ್ನು ಒದಗಿಸುವುದು ಸಾಧ್ಯವಾಗುತ್ತದೆ ಎಂಬ ಒಂದು ನಂಬಿಕೆ ಇದೆ. ಈ ನಂಬಿಕೆಕೂಡ ಸಂಪೂರ್ಣವಾಗಿ ತಪ್ಪಾಗಿದೆ: ಕಲ್ಯಾಣ ಪ್ರಭುತ್ವದತ್ತ, ಅಂದರೆ ಸುಖೀರಾಜ್ಯದತ್ತ ಪರಿವರ್ತನೆಯು ಎಂದಿಗೂ ಗುಪ್ತ ವಿಧಾನಗಳಿಂದ ಅಥವಾ ದಯಾಪರವೆಂದು ಹೇಳಲಾಗುವ ಕ್ರಮಗಳ ಮೂಲಕ ಸಂಭವಿಸುವುದಿಲ್ಲ. ಆ ಪರಿವರ್ತನೆಯು ತನಗೆ ಎದುರಾಗುವ ಎಲ್ಲ ಅಡ್ಡಿ ಅಡಚಣೆಗಳನ್ನು ಭೇದಿಸಿ ಮುನ್ನುಗ್ಗುವ ಮೂಲಕ ಸಂಭವಿಸುತ್ತದೆ. ತೆರಿಗೆ-ಜಿಡಿಪಿ ಅನುಪಾತದಲ್ಲಿ ಗಮನಾರ್ಹ ಹೆಚ್ಚಳದ ಮೂಲಕ ಸಾಕಾರಗೊಳ್ಳುವ ಸಂಪನ್ಮೂಲಗಳ ಕ್ರೋಢೀಕರಣ ಈ ವಿದ್ಯಮಾನದ ಒಂದು ಪ್ರತಿಬಿಂಬ.

ಜಿಡಿಪಿ ಹೆಚ್ಚಳವಷ್ಟೇ ಸುಖೀ ರಾಜ್ಯದತ್ತ ಒಯ್ಯುವುದಿಲ್ಲ

ವಾಸ್ತವಾಂಶಗಳ ವಿಶ್ಲೇಷಣೆ ಮುಂದಿಡುವ ಎರಡನೆಯ ಪ್ರತಿಪಾದನೆಯು ಹೀಗಿದೆ. ಜಿಡಿಪಿ ಬೆಳವಣಿಗೆಯೇ ವಸ್ತುತಃ ದೇಶವನ್ನು ಸುಖೀ ರಾಜ್ಯದತ್ತ ಕೊಂಡೊಯ್ಯುವುದಿಲ್ಲ. ಆದರೆ, ಅಂತಹ ಕಲ್ಯಾಣ ಪ್ರಭುತ್ವವನ್ನು ಸ್ಥಾಪಿಸಲು ಸಂಪನ್ಮೂಲಗಳನ್ನು ತಮಗೆ ವರ್ಗಾಯಿಸುವಂತೆ ದುಡಿಯುವ ಜನರು ಒತ್ತಾಯಿಸುವುದರ ಬದಲಾಗಿ, ಬಂಡವಾಳಗಾರರು ಹೆಚ್ಚಿನ ಹೂಡಿಕೆಯನ್ನು ಕೈಗೊಳ್ಳುವಂತಾಗಲು ಮತ್ತು ಆ ಮೂಲಕ ಉನ್ನತ ಮಟ್ಟದ ಜಿಡಿಪಿ ಬೆಳವಣಿಗೆಯನ್ನು ಸಾಧಿಸುವಂತಾಗಲು ಸರ್ಕಾರವು ಸಂಪನ್ಮೂಲಗಳನ್ನು ಬಂಡವಾಳಶಾಹಿಗಳಿಗೆ ವರ್ಗಾಯಿಸಲು ಅವಕಾಶ ನೀಡುವ ಮೂಲಕ ದುಡಿಯುವ ಜನರು ನಿಜವಾಗಿಯೂ ಉತ್ತಮ ಸ್ಥಿತಿಯಲ್ಲಿ ಇರುವವರಾಗುತ್ತಾರೆ ಎಂಬ ಒಂದು ತಪ್ಪು ನಿರೂಪಣೆಯನ್ನು ಸೃಷ್ಟಿಸಲು ಜಿಡಿಪಿಯನ್ನು ಒಂದು ಸಾಧನವಾಗಿ ಬಳಸಿಕೊಳ್ಳಲಾಗುತ್ತದೆ. ಮತ್ತು, ಜಿಡಿಪಿ ಬೆಳವಣಿಗೆಯ ಬಗ್ಗೆ ಹೊಂದಿರುವ ಈ ಗೀಳು ಸುಖೀ ರಾಜ್ಯದ ಕಡೆಗೆ ಹೊರಳುವ ಸ್ಥಿತ್ಯಂತರವನ್ನು ತಡೆಗಟ್ಟುವ ಒಂದು ಸಾಧನವಾಗುತ್ತದೆ. ದುಡಿಯುವ ಜನರಿಗೆ ಮಾಡುವ ವರ್ಗಾವಣೆಗಳು "ಜನಮರುಳು" ಕ್ರಮಗಳು ಎಂದು ತುಚ್ಛವಾಗಿ ಕರೆಯಲಾಗಿದೆ ಮತ್ತು ಅದನ್ನು ವ್ಯರ್ಥಪೂರ್ಣ ಹಾಗೂ ದೂರದೃಷ್ಟಿಯಿಲ್ಲದ್ದು ಎಂದು ಬಿಂಬಿಸಲಾಗಿದೆ. ಏಕೆಂದರೆ, ಇದು "ಪುಕ್ಕಟೆ ಕೊಡುಗೆಗಳು" ಎಂದು ಕರೆಯಲ್ಪಡುವ ಹಂಚಿಕೆಗಳನ್ನು ಒಳಗೊಂಡಿರುತ್ತದೆ. ಜಿಡಿಪಿ ಬೆಳವಣಿಗೆಯ ಬಗ್ಗೆ ಹೊಂದಿರುವ ಅಂಧಶ್ರದ್ಧೆಯನ್ನು ತೆರಿಗೆ-ಜಿಡಿಪಿ ಅನುಪಾತವನ್ನು ಕೆಳ ಮಟ್ಟದಲ್ಲೇ ಇಟ್ಟುಕೊಂಡಿರುವ ನೀತಿಯನ್ನು ಸಮರ್ಥಿಸಿಕೊಳ್ಳಲು ಬಳಸಿಕೊಳ್ಳಲಾಗುತ್ತಿದೆ. ತೆರಿಗೆ-ಜಿಡಿಪಿ ಅನುಪಾತವನ್ನು ಹೆಚ್ಚಿಸಬೇಕು ಎಂದಾದರೆ, ಬಂಡವಾಳಗಾರರ ಮೇಲೆ ಹೆಚ್ಚು ತೆರಿಗೆಗಳನ್ನು ವಿಧಿಸಬೇಕಾಗುತ್ತದೆ. ಪುಟ 15 ಕ್ಕೆ

ಹರಿವ ನದಿಗೆ ಮೈಯೆಲ್ಲಾ ಕಾಲು.....

ಪುಟ 16 ರಿಂದ

ತವಕಿಸುವ ಅವನು, ಅದಿರನ್ನು ತೆಗೆದು ನಿಸ್ಸಾರವಾದ ಬೋಳು ಗುಡ್ಡಗಳನ್ನು, ಕೆಟ್ಟು ನಿಂತ ಮೋಟಾರು ವಾಹನಗಳನ್ನು, ಶಿಥಿಲವಾಗಿರುವ ಪಾಳು ಗೋಡೆಗಳನ್ನು ತನ್ನ ಬದುಕಿನ ನಿರ್ವಹಣೆಗಾಗಿ ಚಿತ್ರಿಸಬೇಕಾದ ಬದುಕಿನ ವ್ಯಂಗ್ಯದೊಂದಿಗೆ ಸದಾ ಸೆಣಸಬೇಕಾದ ಪರಿಸ್ಥಿತಿ ಅವನದ್ದಾಗಿದೆ. ಅವನ ಬಗ್ಗೆ ಅನುಕಂಪ ತೋರಿಸಿಯೂ ಪತ್ರಿಕೆಯ ಹಿತಾಸಕ್ತಿಯನ್ನು ಕಾಪಾಡಬೇಕಾದ ವಾಸ್ತವವನ್ನು ನೆನಪಿಸುವ ಪತ್ರಿಕೆಯ ಸಂಪಾದಕನ ನಿರೀಕ್ಷೆಮತ್ತು ಸಂವೇದನಾ ರಹಿತ ಸಹೋದ್ಯೋಗಿಯ ಸಹಯೋಗದಲ್ಲಿ ಕೆಲಸಮಾಡಬೇಕಾದ ಅನಿವಾರ್ಯತೆಗೆ ಸಿಕ್ಕಿ, ಸಂತೋಷ ರಹಿತ ಯಾಂತ್ರಿಕ ಬದುಕನ್ನು ನಡೆಸುತ್ತಿದ್ದಾನೆ. ಇವುಗಳ ಜೊತೆ ಜೊತೆಗೇ ಸೃಜನಶೀಲ ಬರವಣಿಗೆಯ ಆಸೆ, ಅನುಭಾವದ ಆಕರ್ಷಣೆಗೆ ಸಿಕ್ಕಿದ್ದಾನೆ. ಪತ್ರಿಕೆಗಾಗಿ ಮತ್ತು ಸ್ವಂತಕ್ಕಾಗಿ ಚಿತ್ರಗಳ ಬೇಟೆಗಾಗಿ ಅಲೆಯುತ್ತಿದ್ದಾಗ ಭೇಟಿಯಾಗುವ ಫಕೀರನೊಬ್ಬನ ಬೆನ್ನು ಹತ್ತಿ, 'ನೀನು ಸೂಫಿಯೇ?, ನಿನ್ನದೊಂದು ಫೋಟೋ ತೆಗೆಯಲೇ'ಎಂದು ಕೇಳುತ್ತಾನೆ. 'ಸ್ಮಶಾನದಲ್ಲಿ ಭೇಟಿಯಾಗೋಣ' ಎಂಬ ಅವನ ಸಂದಿಗ್ಧ ಮಾತನ್ನು ನಂಬಿ ಸ್ಮಶಾನವೊಂದರಲ್ಲಿ ಕಣ್ಮುಚ್ಚಿ ಕುಳಿತು ಅವನಿಗಾಗಿ ಕಾಯುತ್ತಾ ನಿದ್ರೆಗೆ ಜಾರುತ್ತಾನೆ. ಅವನೇ ಮತ್ತೆ ಬಂದು ತಟ್ಟಿ ಎಬ್ಬಿಸಿದಂತೆ, ಅವನನ್ನು ಕಂಡಂತೆ ಅನುಭವವಾಗುವುದು ಕನಸೋ, ವಾಸ್ತವವೋ ಎಂದ ಹೇಳಲಾಗದ ಸಂಧಿಗ್ಧದಲ್ಲಿ ಅವನನ್ನು ಹುಡುಕುತ್ತಾ ಹರಿವ ನದಿಯ ಮುಂದೆ ಸುಮ್ಮನೆ ನಿಲ್ಲುತ್ತಾನೆ.

ಮತ್ತೊಂದು ಘಟನೆಯಲ್ಲಿ ಕುಮಾರ್‌ನ ಕ್ಯಾಮರಾ ಕಣ್ಣಿಗೆ ವಾಸ್ತವದ ದೃಶ್ಯವೊಂದು ಬೀಳುತ್ತದೆ. ಬಡತನದಿಂದಲೋ, ಅಪಘಾತದಿಂದಲೋ ಪ್ರಾಣ ಕಳೆದುಕೊಂಡ, ಅಥವಾ ಹಸಿವು ಬಳಲಿಕೆಗಳಿಂದ ಪ್ರಜ್ಞೆತಪ್ಪಿ ರಸ್ತೆಯಲ್ಲಿ ಮಲಗಿದ ಅಜ್ಞಾತ ಮನುಷ್ಯನೊಬ್ಬ ಬಿದ್ದಿರುವುದು, ಅವನ ಸುತ್ತ ಜನರ ಗುಂಪೊಂದು ನಿಂತಿರುವುದು ಕಾಣಿಸುತ್ತದೆ. ಅವನು ಆ ಗುಂಪಿನ ಸಾಮಾನ್ಯ ಜನರ ಪೈಕಿ ಒಬ್ಬನಾದ ವಲಸೆ ಕಾರ್ಮಿಕನೋ, ರೈತನೋ, ಶ್ರಮಿಕನೋ ಆಗಿರಬಹುದೆಂಬ ಮೌನ ಕುತೂಹಲ, ಮತ್ತು ಆತಂಕಭರಿತ ಅನುಮಾನ, ಸುತ್ತ ನಿಂತು ನೋಡುವ ಜನರಿಗೆ ಮತ್ತು ಫೋಟೋಗ್ರಾಫರನಿಗೆ ಇರಬಹುದಾದಂತೆ, ಪ್ರೇಕ್ಷಕರನ್ನೂ ಆವರಿಸುತ್ತದೆ.

ಅಮರೇಶ..

ಚಿತ್ರದ ಎರಡನೆಯ ಮುಖ್ಯ ಪಾತ್ರವಾದ ಅಮರೇಶ ಯಾವುದೋ ಅಪರಾಧಕ್ಕಾಗಿ ಜೀವಾವಧಿ ಶಿಕ್ಷೆಗೆ, ಅಥವಾ ಸುದೀರ್ಘ ಜೈಲು ಶಿಕ್ಷೆಗೆ ಗುರಿಯಾಗಿ ಜೈಲಿನ ಸೆಲ್ ಒಂದರಲ್ಲಿ ಒಂಟಿಯಾಗಿ ಜೀವಿಸುವ ವಿಷಣ್ಣಸಾಧು ಮನುಷ್ಯ. ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯಾಗಲು ಜೈಲು ಅಧಿಕಾರಿಯ ಶಿಫಾರಸು ಪಡೆದರೂ ಬಿಡುಗಡೆಯಾಗಲು ಯಾವುದೋ ಕಾರಣಕ್ಕಾಗಿ ಅನುಮತಿ ಸಿಗದೆ ಬಂದಿಯಾಗೇ ಜೀವ ಸವೆಸುತ್ತಿರುವ ನತದೃಷ್ಟ. ತನಗೆ ಜ್ಯೋತಿಷ್ಯ ಗೊತ್ತಿಲ್ಲವೆಂದು, ತನಗೆ ಅದರಲ್ಲಿ ನಂಬಿಕೆಯಿಲ್ಲವೆಂದು ಘೋಷಿಸಿಕೊಂಡರೂ, ತನ್ನ ಸಹಜೀವಿಗಳ ಹಸ್ತಗಳನ್ನು ಮಾತ್ರವಲ್ಲ, ಜೈಲಿನ ಸಿಬ್ಬಂದಿಯ ಹಸ್ತವನ್ನೂ ಅವರ ಅಪೇಕ್ಷೆಯ ಮೇರೆಗೆ ಪರಿಶೀಲಿಸಿ ಭವಿಷ್ಯ ನುಡಿಯುವ ಮನುಷ್ಯ. ತಾನು ಆಶಾವಾದಿಯಾಗಿದ್ದಾಗ ಅವರಲ್ಲಿ ಸಂತೋಷವನ್ನೂ, ತಾನೇ ನಿರಾಶೆಯ ಸ್ಥಿತಿಯಲ್ಲಿದ್ದಾಗ ಅವರಲ್ಲಿ ಅಸಂತೋಷವನ್ನೂ ಹುಟ್ಟಿಸಬಲ್ಲ 'ಹಸ್ತ ಸಾಮುದ್ರಿಕ'. ಬಂದಿಯಾಗಿ ಸ್ಥಗಿತಗೊಂಡ ತನ್ನ ಕಾಲುಗಳ ಚಲನೆಗೆ, ಅಥವಾ ತನ್ನ ಪ್ರಕೃತಿ ಪ್ರೇಮದ ಅಭಿವ್ಯಕ್ತಿಗೆ ಎಂದು, ಜೈಲಿನ ಗೋಡೆಗಳ ಆಚೆ ಇರುವ ನರ್ಸರಿಯಲ್ಲಿ ಕೆಲಸ ಮಾಡಲು ಅನುಮತಿ ಪಡೆಯುವ ನಿಸರ್ಗಪ್ರೇಮಿ.

ಅವನು ನರ್ಸರಿಯಲ್ಲಿ ಕೆಲಸ ಮಾಡುವಾಗ ಪೊಲೀಸ್ ಪೇದೆಯು ಓದುವ ವೃತ್ತ ಪತ್ರಿಕೆಯ 3–4 ಸೆಕೆಂಡ್ ಗಳ ಇಣುಕು ನೋಟದಲ್ಲಿ ಕುಮಾರ್ ತೆಗೆದ ಛಾಯಾಚಿತ್ರ ವಾದ ರಸ್ತೆಯಲ್ಲಿ ಬಿದ್ದಿದ್ದ ಕಾರ್ಮಿಕನ ಚಿತ್ರದೊಂದಿಗೆ ಕಾಣಸಿಗುವ ದೇಶ–ವಿದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ, ಸ್ಥಿತಿ–ಗತಿಗಳು ಮಿಂಚಿ ಮಾಯವಾಗುತ್ತವೆ.

ಅಮರೇಶ ಜೈಲಿನ ಗೋಡೆಗಳ ನಡುವಿನ ಏಕಾಂಗಿತನದಲ್ಲಿ, ರಾತ್ರಿ ಹೊತ್ತು ನಿದ್ದೆ ಬಾರದಿದ್ದಾಗಎದ್ದು ಕುಳಿತು, ನರ್ಸರಿಯ ಕುಂಡದಲ್ಲಿ ಸಿಕ್ಕ, ಕದ್ದು ತಂದ ಇದ್ದಿಲನ್ನು ಬಳಸಿ ತನ್ನ ಸೆಲ್ಲ ಗೋಡೆಯ ಮೇಲೆ ತನ್ನ ಅಭೀಪ್ಸೆಯ ಪ್ರತೀಕಗಳ ಚಿತ್ರ ಬಿಡಿಸುವ ನಿರ್ಬಂಧಿತ ಚಿತ್ರಕಾರನಾಗುತ್ತಾನೆ. ಹತ್ತಿರ ಬರುವ ಬೆಕ್ಕಿನ ಮರಿಯೊಂದಿಗೆ ತನ್ನ ಪ್ರೀತಿಯನ್ನು ಹಂಚಿಕೊಳ್ಳುತ್ತಾನೆ. ಚಿತ್ರದ ಉಳಿದ ಎರಡು ಪಾತ್ರಗಳಿಗಿಂತಾ ತನ್ನ ಹಿಂದಿನ ಜೀವನದ ವಿವರಗಳನ್ನು ಒಮ್ಮೆಯೂ ನೆನಪಿಸಿಕೊಳ್ಳದ, ಯಾವ ಬಂಧುವಾಗಲಿ, ಪರಿಚಿತರಾಗಲಿ ಅವನ ಸಂದರ್ಶನಕ್ಕಾಗಿ ಬಾರದ, ಜೈಲು ಸೇರಲು ಕಾರಣವಾಗಿರಬಹುದಾದ ಯಾವ ಘಟನೆಯನ್ನಾಗಲಿ, ವ್ಯಕ್ತಿಗಳನ್ನಾಗಲಿ ನೆನಪಿಸಿಕೊಳ್ಳದ, ನರ್ಸರಿಯಲ್ಲಿ ಅವನನ್ನು ಸದಾ ಗಮನಿಸುವ ಸಹ ಕೈದಿಯ ಗಮನವನ್ನು ತನ್ನ ಕೃತ್ಯಗಳಿಂದ ಆಗಾಗ ಸೆಳೆಯುವ ರಹಸ್ಯಮಯತೆ, ಕಣ್ಣನೋಟ ಮತ್ತು ಮುಖದಲ್ಲಿ ಬಿಂಬಿಸುವ ಭಾವನೆಗಳಿಂದಾಗಿ ಪ್ರೇಕ್ಷಕರಲ್ಲಿ ಮೂಕವೇದನೆಯನ್ನು ಹುಟ್ಟಿಸುತ್ತಾನೆ.

ನೀಲಾ?

ಚಿತ್ರದ ಮೂರನೆಯ ಮುಖ್ಯ ಪಾತ್ರವಾದ ನೀಲಾ ಯಾವುದೋ ಕೌಟುಂಬಿಕ ವಿಷಮತೆಯ ಕಾರಣದಿಂದಾಗಿ ಮನೆಯಿಂದ ದೂರವಾಗಿ, ಮನೆ ಜನರ, ಬಂಧುಗಳ ಪಾಲಿಗೆ ಸತ್ತಂತೆ ಇದ್ದರೂ ದೂರದ ಊರಿನಲ್ಲಿ 'ತನ್ನ ಕಾಲಮೇಲೆ ತಾನು ನಿಂತ', ಬಹುಮಹಡಿ ಕಟ್ಟಡದ ಮೇಲಂತಸ್ತಿನ ಸಣ್ಣದೊಂದು ಭಾಗದಲ್ಲಿ ಒಂಟಿಯಾಗಿ ಬದುಕುವ ಬಡ ಯುವತಿ. ದಿನವೂ ಲಿಫ್ಟ್ ಇಲ್ಲದ ಕಟ್ಟಡದ ಮೆಟ್ಟಿಲುಗಳನ್ನು, ಹತ್ತಿ ಇಳಿದು, ರಸ್ತೆಯುದ್ದಕ್ಕೂ ನಡೆಯುತ್ತಾ, ತನ್ನಂತೆಯೇ ರಸ್ತೆಯಲ್ಲಿ ನಡೆಯುತ್ತಲೇ ಸಾಗುವ ಜನರ ಪಾದರಕ್ಷೆಗಳನ್ನು ಗಮನಿಸುತ್ತಾ ಕೆಲಸದ ಸ್ಥಳವನ್ನು ಸೇರಿ ಹೆಸರು ಪ್ರಸ್ತುತವಲ್ಲದ ಒಂದು ಶೂ ಅಂಗಡಿಯಲ್ಲಿ ಕೆಲಸ ಮಾಡುವ ಉದ್ಯೋಗಿ. ಸಿನೆಮಾದಲ್ಲಿನ ಎಲ್ಲವೂ ಫೋಟೋಗ್ರಾಫರನ ಕಣ್ಣುಗಳ ಮೂಲಕವೇ ಪ್ರೇಕ್ಷಕರಿಗೆ ದಕ್ಕುವಂತೆ, ಈ ಚಿತ್ರದಲ್ಲಿ ಕಾಣಸಿಗುವ ಎಲ್ಲರ ವ್ಯಕ್ತಿತ್ವಗಳೂ ಈ ಹುಡುಗಿಯ ಕಣ್ಣಿಗೆ ಬೀಳುವ ಅವರ ಕಾಲುಗಳ–ಪಾದಗಳ ಮೂಲಕ, ಅವರು ಧರಿಸಿದ ಅಥವಾ ಧರಿಸದ, ವಿವಿಧ ವಿನ್ಯಾಸಗಳ, ಸವೆದ ಹಳೆಯ ಅಥವಾ ಅವಳು ಅಂಗಡಿಯಲ್ಲಿದ್ದಾಗ ಮಾರುವ ಹೊಸ ಚಪ್ಪಲಿ–ಶೂಗಳ ಮೂಲಕ ಪ್ರೇಕ್ಷಕರ ಗಮನಕ್ಕೆ ಬರುತ್ತವೆ. ಸಾಮಾನ್ಯ ಹೋಟೆಲೊಂದರಲ್ಲಿ ಕುಳಿತಾಗಲೂ, ಅವಳ ಊರಿನ ಸಹಾನುಕಂಪದ 'ಬಂಧು– 'ಗೆಳೆಯ', ಹಿತೈಷಿ' ಯೊಂದಿಗಿನ ಅವಳ ನಿರ್ದಿಷ್ಟ ಸಂಬಂಧ ಸೂಚ್ಯವಾಗಿಯಾದರೂ ಪ್ರಕಟಗೊಳ್ಳುವುದಿಲ್ಲ. ಮನೆ ಬದಲಾಯಿಸಿದ್ದನ್ನು ಅವನಿಗೂ ಹೇಳಿರುವುದಿಲ್ಲ ಎಂಬ ಸಂಗತಿಗಾಗಲಿ, ಅವಳೊಂದಿಗೆ ಪ್ರೀತಿ–ಸಹಾನುಭೂತಿಗಳ ಆತ್ಮೀಯ ಸಂಬಂಧವನ್ನು ಹೊಂದಿರಬಹುದಾದ ಅವನನ್ನು ಮನೆಗೆ ಕರೆಯದೆ ಹೋಟೆಲಿನಲ್ಲಿ ಮೌನವಾಗಿ ಕುಳಿತು, ಅವನು ಹೇಳಿದ್ದನ್ನು ಮಾತ್ರ ಕೇಳಿಸಿಕೊಂಡು ಬೀಳ್ಕೊಡುವುದಕ್ಕಾಗಲಿ ಕಾರಣ ತಿಳಿಯುವುದಿಲ್ಲ. ಆದರೆ ಅವನೊಂದಿಗೆ ಕುಳಿತು ಟೀ ಕುಡಿಯುವಾಗಲೂ ಎದುರಿನ ಟೇಬಲ್ ಮುಂದೆ ಕುಳಿತ ಸ್ತ್ರೀ–ಪುರುಷರ ಕಾಲುಗಳು, ಪಾದರಕ್ಷೆಗಳು ಮತ್ತು ಅವರು ಕುಳಿತ ಭಂಗಿಗಳು, ಪಾದರಕ್ಷೆಗಳನ್ನು ಧರಿಸಿದ, ಧರಿಸದ ಅವರ ಪಾದಗಳ ಚಲನೆಗಳಲ್ಲಿ ಅವಳಿಗಿರುವ ಆಸಕ್ತಿ ವ್ಯಕ್ತವಾಗುತ್ತದೆ. ಆ ವಿವರಗಳಲ್ಲಿ ಅಲ್ಲಿ ಕುಳಿತ ಜನರ ವ್ಯಕ್ತಿತ್ವಗಳು ಮಾತ್ರವಲ್ಲದೆ, ಕಂಡೂ ಕಾಣದಂತೆ ವೇದ್ಯವಾಗುವ ಅವರ ಭಾವನೆ–ಧೋರಣೆಗಳು, ಅವರ ಆರ್ಥಿಕ ಹಿನ್ನೆಲೆಯನ್ನು ಬಿಂಬಿಸುವ ವರ್ಗ ಹಿನ್ನೆಲೆ, ಅವುಗಳಲ್ಲಿರಬಹುದಾದ ತರ–ತಮಗಳು ನೀಲಾಳ ಗಮನಿಕೆಯ ಮೂಲಕ ಪ್ರೇಕ್ಷಕರ ಗಮನಕ್ಕೂ ಬಾರದೆ ಹೋಗುವುದಿಲ್ಲ.

ಆದರೆ ನೀಲಾ ತಾನಿರುವ ಕಟ್ಟಡದಲ್ಲಿ ಒಂಟಿಯಾಗಿ ಆಡಿಕೊಳ್ಳುವ ಹುಡುಗನೊಂದಿಗೆ ಆತ್ಮೀಯತೆಯನ್ನು ಪ್ರಕಟಿಸುವ, ದಾರಿಯಲ್ಲಿ, ತಾನು ತಪ್ಪಿಸಿಕೊಂಡಿದ್ದೇನೆಂದು ಹೇಳುವ ಪುಟ್ಟ ಹುಡುಗಿಗೆ ಸಹಾಯ ಮಾಡಲು ಉತ್ಸುಕಳಾಗುವ ನೀಲಾ ರಾತ್ರಿ ನಿದ್ರೆ ಬಾರದಿದ್ದಾಗ ತೆಗೆದು ನೋಡುವ ಬಾಲ್ಯದ ಫೋಟೋಗಳಲ್ಲಿ ಮಾತ್ರ ಅವಳ ಹಿನ್ನೆಲೆ ಮತ್ತು ಹಳೆಯ ಸಂಬಂಧಗಳ ಬಗ್ಗೆ ಅಸ್ಪಷ್ಟವಾಗಿ ಕೊಂಚ ತಿಳಿಯುತ್ತದೆ. ಹೆಚ್ಚಿನ ಹೊಣೆಯನ್ನು ಚಿತ್ರ ನಿರ್ದೇಶಕರು ಪ್ರೇಕ್ಷಕರ ಮೇಲೇ ಹಾಕಿಬಿಡುತ್ತಾರೆ.



ತನ್ನ ಕೆಲಸದ ಸ್ಥಳವನ್ನು ತಲುಪಲು ಹೋಗುತ್ತಿರುವ ನೀಲಾ ಇರುವ ಚಿತ್ರ ಚೌಕಟ್ಟಿನಲ್ಲೇ ಕಾಣ ಸಿಗುವ ವ್ಯಕ್ತಿಯೊಬ್ಬನನ್ನು ಪೋಲೀಸ್ ಅಧಿಕಾರಿಯೊಬ್ಬನು ಹಿಂಬಾಲಿಸುತ್ತಾ ನಡೆಯುವಾಗ ನೀಲಾಳ ಗಮನ ಅವರಿಬ್ಬರ ಪಾದರಕ್ಷೆಗಳ ಮೇಲೆ ಹರಿಸುತ್ತಾ ಅವರ ಹಿಂದೆ ನಡೆಯುವಾಗ ಒಂದು ಸ್ಥಳದಲ್ಲಿ ಅವನು ಯಾರಿಗಾಗಿಯೋ ಕಾಯುತ್ತಿದ್ದಂತೆ ತೋರುವಾಗ, ಪೊಲೀಸ್ ಅಧಿಕಾರಿಯು ಏಕಾಏಕಿ ಅವನ ಬಗಲು ಚೀಲದಲ್ಲಿ ಸಿಗುವ ಪುಸ್ತಕವನ್ನು ತಪಾಸಿಸಿ ಆ ವ್ಯಕ್ತಿಯನ್ನು ತನ್ನೊಂದಿಗೆ ಕರೆದುಕೊಂಡು ಹೋಗುವ ಚಿತ್ರಿಕೆಯು ಹೆಚ್ಚಿನ ಯಾವ ವಿವರಣೆಯೂ ಇಲ್ಲದೆ, ನೀಲಾಳೊಂದಿಗೆ ಪಾದರಕ್ಷೆಯ ಹೊರತಾಗಿ ಬೇರೆ ಯಾವ ಸಂಬಂಧವೂ ಇಲ್ಲವೇನೋ ಎಂಬಂತೆ ರಚಿತವಾಗಿದೆ. ಆ ಸಂಧಿಗ್ಧ ವ್ಯಕ್ತಿಯ ಬಂಧನದ ಕಾರಣಗಳನ್ನು ಊಹಿಸುವ ಹೊಣೆಯನ್ನು ನಿರ್ದೇಶಕರು ಪ್ರೇಕ್ಷಕರಿಗೇ ಬಿಟ್ಟುಬಿಡುತ್ತಾರೆ. ಪ್ರಸ್ತುತ ರಾಜಕೀಯದ ಸಂದರ್ಭದಲ್ಲಿ ಆತ ಮಾವೋವಾದಿ, ಅರ್ಬನ್ ನಕ್ಸಲೈಟ್, ಆಳುವ ಸರ್ಕಾರಕ್ಕೆ ಅಪಾಯಕಾರಿಯಾದ ಬುದ್ಧಿಜೀವಿ, ಅಥವಾ ಯಾವುದೋ ನಿಷೇಧಿತ ಪಕ್ಷದ ರಾಜಕೀಯ ಕಾರ್ಯಕರ್ತ ಹೀಗೆ ಯಾರು ಬೇಕಾದರೂ ಆಗಿರುವುದು ಸಾಧ್ಯ.

ಕುಮಾರ್, ಅಮರೇಶ, ನೀಲಾ?.

ಕುಮಾರ್, ಅಮರೇಶ ಮತ್ತು ನೀಲಾ ರಾತ್ರಿ ಹೊತ್ತು ಹಳೆಯ ನೆನಪುಗಳು ಕಾಡುತ್ತಾ ನಿದ್ರೆ ಬಾರದಿದ್ದಾಗ ಅಥವಾ ಒಂಟಿತನ ಕಾಡಿದಾಗ ಅವರವರ ಬಾಲ್ಯದ, ಹಿಂದಿನ ಜೀವನದ ನೆನಪುಗಳನ್ನು ಕೆದಕಿ ನೋಡುವ ಚಿತ್ರಿಕೆಗಳು ಈ ಚಿತ್ರದಲ್ಲಿ ರಚಿತವಾಗಿವೆ.

ವರ್ತಮಾನದಲ್ಲಿ ಡಿಜಿಟಲ್ ಕ್ಯಾಮರಾ ಬಳಸುವ ಫೋಟೋಗ್ರಾಫರ್ ತನ್ನ ಸೃಜನಶೀಲತೆಯನ್ನು ನಿರ್ಬಂಧಿಸುವ ನೌಕರಿಯಿಂದ ಬಿಡುಗಡೆಗೊಳ್ಳುವ ಮೊದಲು ತನ್ನ ನೆನಪುಗಳಿಗೆ ಹೋಗುತ್ತಾನೆ. ರಾತ್ರಿ ನಿದ್ರೆ ಬಾರದೆ ತನ್ನ ಸೃಜನಶೀಲತೆಗೆ ಭಂಗ ತರುವ ಸದ್ದುಗಳ ನಡುವೆಯೂ ಸಾಹಿತ್ಯ ರಚಿಸಲು ಯತ್ನಿಸುತ್ತಾನೆ. ಫೋಟೋಗ್ರಫಿ ಮತ್ತು ಸಿನೆಮಾ ಛಾಯಾಗ್ರಹಣದ ಬಗೆಗಿನ ತನ್ನ ಕನಸುಗಳನ್ನು ಪರಿಶೀಲಿಸುತ್ತಾನೆ. ತನ್ನ ಹದಿ ಹರೆಯದ ಹಳಹಳಿಕೆಯನ್ನು ಬಿಂಬಿಸುವ ಬಾಕ್ಸ್ ಕ್ಯಾಮರಾದಲ್ಲಿ ತೆಗೆದ ಸ್ಥಿರಚಿತ್ರಗಳ ಫಿಲ್ಮ್ ಪ್ರಿಂಟ್ಗಳು, ಹಳೆಯ ಫಿಲ್ಮ್ ಕ್ಯಾಮರಾ, ಫಿಲ್ಮ್ ನೆಗೆಟಿವ್ಗಳನ್ನು ಪರಿಶೀಲಿಸುತ್ತಾ ಯೋಚಿಸುವ ಚಿತ್ರಿಕೆಗಳು 'ಹರಿವ ನದಿಗೆ ಮೈಯೆಲ್ಲಾ ಕಾಲು' ಚಿತ್ರದಲ್ಲಿ ಇವೆ. ಸ್ಥಿರಚಿತ್ರ ಗ್ರಹಣದಿಂದ ಚಲನಚಿತ್ರ ಗ್ರಹಣಕ್ಕೆ ಹೋಗಲು ದಾರಿ ಮಾಡಿಕೊಟ್ಟ ಮೂಯ್ಬ್ರಿಜ್ ಪ್ರಯೋಗಗಳ ನಾಗಾಲೋಟದ ಕುದುರೆಯ ಚಿತ್ರಸರಣಿಯನ್ನು ಆಡಿಸಿ ಚಿತ್ರದ ಕುದುರೆಗೆ ಚಲನೆಯನ್ನು ಕೊಟ್ಟಾಗ ಅವನಿಗಿರುವ ಚಲನೆಯ ಪ್ರೀತಿ ಮತ್ತು ಸಿನೆಮಾ ಕುರಿತಾದ ಮಹತ್ವಾಕಾಂಕ್ಷೆಗಳೂ ಮುನ್ನೆಲೆಗೆ ಬರುತ್ತವೆ.

ಕುಮಾರ್ ಗೆ ಫೋಟೋಗ್ರಾಫರ್ ಆಗಿ ಗುಡ್ಡ–ಬೆಟ್ಟಗಳ ಮೇಲೆ ಕಾಲುಹಾದಿ–ಕಿರುದಾರಿ ಮತ್ತು ಏರುಹಾದಿಗಳ ಬಗ್ಗೆ ವಿಶೇಷ ಆಕರ್ಷಣೆ ಇರುವಂತೆ ತೋರುತ್ತದೆ. ಮಣ್ಣು ದಿಬ್ಬಗಳು, ಮರಳ ರಾಶಿ, ಉಪ್ಪಿನ ರಾಶಿಗಳು ಅವನ ಛಾಯಾಚಿತ್ರ ಗ್ರಹಣದ ವಸ್ತುಗಳ ಪೈಕಿ ಎದ್ದು ತೋರುತ್ತವೆ. ಶಿಥಿಲವಾದ ಇಲ್ಲವೆ ಹಾಳುಗೆಡವಿದ ಚರ್ಚ್ ಅಥವಾ ಮಸೀದಿ–ಈದ್ಗಾಗಳಂತೆ ತೋರುವ ವಾಸ್ತುಶಿಲ್ಪಗಳ ಕಮಾನುಗಳು, ಮುರಿದ ಗೋಳ ಮತ್ತು ಮಿನರೆಟ್ಟುಗಳು ಅವನ ಛಾಯಾಚಿತ್ರ ರಚನೆಯಲ್ಲಿ ವಿಶೇಷ ಸ್ಥಾನ ಪಡೆಯುತ್ತವೆ.

ಕುಮಾರ್‌ಗೆ ಫೋಟೋಗ್ರಫಿಯು ಜೀವನಯಾಪನೆಯ ಸಾಧನವಾಗಿರುವುದಕ್ಕಿಂತಾ ತನ್ನ ಸೃಜನಶೀಲತೆ ಮತ್ತು ಸಂವೇದನೆಗಳ ಅಭಿವ್ಯಕ್ತಿಯ ಸಾಧನವಾಗಿರುವುದು ಹೆಚ್ಚು ಮುಖ್ಯವೆಂದು ತೋರುತ್ತದೆ. ಹೀಗಾಗಿಯೇ ಅವನಿಗೆ ತಾನು ಪತ್ರಿಕೆಗಾಗಿ ಸೆರೆಹಿಡಿಯುತ್ತಿದ್ದ ರಾಶಿ ಹಾಕಿದ ನಿಸ್ಸಾರ ಮಣ್ಣಿನ ಗುಡ್ಡಗಳ ಚಿತ್ರಗಳಿಗಿಂತ, ರಾಶಿ ಮಾಡಿದ ಮಣ್ಣುಗುಡ್ಡೆಯ ಮೇಲೆ ಕಡ್ಡಿಗಳನ್ನು ಸಿಕ್ಕಿಸಿ ಗುಡ್ಡ ರಚಿಸಿದ, ತೆಂಗಿನಗರಿಗಳ ಕಡ್ಡಿಗಳನ್ನು ಬಿಡಿಸುತ್ತಾ ಕುಳಿತ ಗ್ರಾಮೀಣ ಮಹಿಳೆಯ ಸೃಜನಶೀಲತೆ ಹೆಚ್ಚು ಮುಖ್ಯವಾಗುತ್ತದೆ. ಅವಳ ಅನುಮತಿ ಪಡೆದೇ ಅವುಗಳ ಡಿಜಿಟಲ್ ಚಿತ್ರ ತೆಗೆದರೂ, ಚಿತ್ರ ತೆಗೆದಾಕ್ಷಣ 'ಅವುಗಳಿಗೆ ಕಿಮ್ಮತ್ತು ಬಂದಿತೆಂಬ' ಕಾರಣದಿಂದಾಗಿ, ಆ ಗುಡ್ಡೆಗಳ ಮಣ್ಣನ್ನು ಸಿಟ್ಟಿನಿಂದ, ಅಸಂತೋಷದಿಂದ ಎಂಬಂತೆ, ಆಕೆ ಹರಡಿಬಿಡುವಕ್ರಿಯೆ ಅವನನ್ನು ಸ್ವಲ್ಪ ಮಟ್ಟಿಗೆ ಘಾಸಿಗೊಳಿಸಿದರೂ ಅವನ ಸೃಜನಶೀಲ ಸಂವೇದನೆಯನ್ನು ಚುರುಕುಗೊಳಿಸುತ್ತದೆ.

ತೆರಿಗೆ–ಜಿಡಿಪಿ ಅನುಪಾತ ಹೆಚ್ಚದೆ ಕಲ್ಯಾಣ ಪ್ರಭುತ್ವ....

ಪುಟ 13 ರಿಂದ

ಆದರೆ, ಈ ಕ್ರಮವು ಬಂಡವಾಳಗಾರರ "ಉದ್ಯಮಶೀಲತೆ"ಯನ್ನು ನಾಶಪಡಿಸುತ್ತದೆ ಮತ್ತು ಅದರಿಂದಾಗಿ ಹೂಡಿಕೆ ಮಾಡುವ ಅವರ ಉತ್ಸಾಹ ತಗ್ಗುತ್ತದೆ, ಅದರಿಂದಾಗಿ ಜಿಡಿಪಿ ಬೆಳವಣಿಗೆಗೆ ಹಾನಿಯಾಗುತ್ತದೆ ಎಂದು ಭಾವಿಸಲಾಗಿದೆ.

ನವ ಉದಾರವಾದ ಈ ತರ್ಕವು ವಿಶ್ಲೇಷಣಾತ್ಮಕವಾಗಿ ತಪ್ಪಾಗಿದೆ. ಬಂಡವಾಳಗಾರರು ತಾವು ಹೆಚ್ಚು ಸಂಪನ್ಮೂಲಗಳನ್ನು ಹೊಂದಿರುವ ಕಾರಣದಿಂದ ತಮ್ಮ ಹೂಡಿಕೆಯನ್ನು ಹೆಚ್ಚಿಸುವುದಿಲ್ಲ. ಅವರ ಹೂಡಿಕೆಯ ನಿರ್ಧಾರಗಳು ಮಾರುಕಟ್ಟೆಯ ನಿರೀಕ್ಷಿತ ಬೆಳವಣಿಗೆಯನ್ನು ಅವಲಂಬಿಸುತ್ತವೆ. ಆದ್ದರಿಂದ, ಹೆಚ್ಚು ಸಂಪನ್ಮೂಲಗಳನ್ನು ಕೊಡುಗೆಯಾಗಿ ಪಡೆದ ಕಾರಣದ ಮೇಲೆ ಬಂಡವಾಳಗಾರರು ತಮ್ಮ ಹೂಡಿಕೆಯನ್ನು ಹೆಚ್ಚಿಸುವುದಿಲ್ಲ. ವಿಶ್ಲೇಷಣಾತ್ಮಕವಾಗಿ ತಪ್ಪಾಗಿರುವ ಈ ವಾದವನ್ನೂ ಸುಖೀ ರಾಜ್ಯಕ್ಕೆ ಸಂಬಂಧಿಸಿದ ಯಾವುದೇ ಒತ್ತಾಯಕ್ಕೆ ಅಪಖ್ಯಾತಿ ಹಚ್ಚಲು ಮತ್ತು ಅದರೆಡೆಗೆ ಇಡಬಹುದಾದ ಯಾವುದೇ ನಡೆಯನ್ನು ಬುಡಮೇಲು ಮಾಡಲು ಬಳಸಲಾಗುತ್ತದೆ. ಆದಾಗ್ಯೂ, ಸುಖೀ ರಾಜ್ಯದ ಗುರಿ ಸಾಧಿಸಲು ತೆರಿಗೆ–ಜಿಡಿಪಿ ಅನುಪಾತವನ್ನು ಬಹಳಷ್ಟು ಹೆಚ್ಚಿಸಬೇಕಾಗುತ್ತದೆ ಎಂಬುದನ್ನೇ ವಿಶ್ವಾದ್ಯಂತದ ಕಲ್ಯಾಣ ಪ್ರಭುತ್ವಗಳ ಅನುಭವವು ತೋರಿಸುತ್ತದೆ. ಈ ಪ್ರಕ್ರಿಯೆಯು ಬಂಡವಾಳಗಾರರ ಮೇಲೆ ಗಣನೀಯ ಪ್ರಮಾಣದ ತೆರಿಗೆಗಳ ಹೇರಿಕೆಯನ್ನು ಒಳಗೊಂಡಿರುತ್ತದೆ ಮತ್ತು ಬಂಡವಾಳಗಾರರ ಮೇಲಿನ ತೆರಿಗೆಗಳ ಹೆಚ್ಚಳವು ಜಿಡಿಪಿ ಬೆಳವಣಿಗೆಯ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರಬಹುದು ಎಂಬ ವಾದವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸುಖೀ ರಾಜ್ಯದ ಆಗ್ರಹವು, ಜಿಡಿಪಿ ಬೆಳವಣಿಗೆಯ ಗೀಳನ್ನು ತೊಲಗಿಸಬೇಕಾಗುತ್ತದೆ. ಇಂತಹ ಗೀಳು ಬೂರ್ಜ್ವಾಗಳು ಕೊಡುವ ನೆವಗಳ ಭಾಗವಾಗಿದೆ.

ಜಿಡಿಪಿ ಬೆಳವಣಿಗೆ ಮತ್ತು ಬೇಡಿಕೆ ಇಳಿಕೆಯ ದ್ವಂದ್ವ

ಮೂರನೆಯ ಪ್ರತಿಪಾದನೆಯು ಬಹಿಷ್ಕರಣದ ಅಂದರೆ ಹೊರತುಪಡಿಸುವುದರ ತತ್ವ ಜಿಜ್ಞಾಸೆಗೆ ಸಂಬಂಧಿಸಿದೆ. ಜಿಡಿಪಿ ಬೆಳವಣಿಗೆಯನ್ನು ಉತ್ತೇಜಿಸುವ ಸಲುವಾಗಿ ಸರ್ಕಾರದ ಬಜೆಟ್‌ನಿಂದ ಬಂಡವಾಳಗಾರರೆಡೆಗೆ ಸಂಪನ್ಮೂಲಗಳ ವರ್ಗಾವಣೆಗಳು ನಡೆಯುತ್ತವೆ. ಇತ್ತ ನವ–ಉದಾರವಾದಿ ಬಂಡವಾಳಶಾಹಿಗೆ ವಿಶಿಷ್ಟವೂ ಮತ್ತು ಅದರ ಅಂತ್ಯ ಪರಿಣಾಮವೂ ಆಗಿರುವ ಆರ್ಥಿಕ ಹಿಂಜರಿತ ಮತ್ತು ಸ್ಥಗಿತತೆ ಆರಂಭವಾಗುತ್ತಿದ್ದಂತೆ ಈ ವರ್ಗಾವಣೆಗಳ ಪ್ರಮಾಣವು ಕೂಡ ತುಲನಾತ್ಮಕವಾಗಿ ಹೆಚ್ಚಾಗುತ್ತದೆ. ಇದರಿಂದಾಗಿ, ಈ ಹಿಂದೆ ಕಲ್ಯಾಣ ಕ್ರಮಗಳಿಗಾಗಿ ಬಜೆಟ್‌ನಲ್ಲಿ ಬಿಡುಗಡೆ ಮಾಡುತ್ತಿದ್ದ ಅಲ್ಪ–ಸ್ವಲ್ಪ ವೆಚ್ಚಗಳಿಗಾಗಿ ಉಳಿಯುವ ಸಂಪನ್ಮೂಲಗಳೂ ಕಡಿಮೆಯಾಗುತ್ತವೆ. ಇದರ ಫಲಿತಾಂಶವೆಂದರೆ, ಶಿಕ್ಷಣ, ಆರೋಗ್ಯ ಮತ್ತು ಇತರ ಅಗತ್ಯ ಸೇವೆಗಳ ಖಾಸಗೀಕರಣ. ಇದು ದುಡಿಯುವ ಜನರನ್ನು ಈ ಎಲ್ಲಾ ಸೇವೆಗಳಿಂದ ಮತ್ತಷ್ಟು ಹೊರ ತಳ್ಳುತ್ತದೆ. ಬಂಡವಾಳಗಾರರಿಗೆ ಮಾಡುವ ವರ್ಗಾವಣೆಗಳು ಹೂಡಿಕೆಯನ್ನೂ ಹೆಚ್ಚಿಸುವುದಿಲ್ಲ ಅಥವಾ ಅವರ ಬಳಕೆಯ ವೆಚ್ಚಗಳಲ್ಲಿ ಕೂಡ ತಕ್ಷಣದ ಹೆಚ್ಚಳವನ್ನೂ ತರುವುದಿಲ್ಲ. ಅತ್ತ, ಈ ವರ್ಗಾವಣೆಗಳಿಗೆ ಕೊಡುವ ಮೊತ್ತವನ್ನು ಸರಿದೂಗಿಸಲು ಸರ್ಕಾರದ ಕಲ್ಯಾಣ ವೆಚ್ಚಗಳಲ್ಲಿ ಕಡಿತ ಮಾಡುವ ಕ್ರಮದ ಪರಿಣಾಮವಾಗಿ ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆ ಇಳಿಯುತ್ತದೆ. ಇದರ ಪರಿಣಾಮವೆಂದರೆ ಜಿಡಿಪಿ ಬೆಳವಣಿಗೆ ದರದಲ್ಲಿ ಇಳಿಕೆ. ಆದ್ದರಿಂದ, ಬೆಳವಣಿಗೆ ದರವನ್ನು ಈ ರೀತಿಯಲ್ಲಿ ಹೆಚ್ಚಿಸುವ ಪ್ರಯತ್ನವು, ವಿರೋಧಾಭಾಸವೆನಿಸುವಂತೆ, ಒಂದು ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಆದರೆ, ಈ ವ್ಯತಿರಿಕ್ತ ಪರಿಣಾಮವೇ ಬಂಡವಾಳಶಾಹಿಗಳಿಗೆ ಮಾಡುವ ವರ್ಗಾವಣೆಗಳ ಮತ್ತಷ್ಟು ಹೆಚ್ಚಳಗಳಿಗೆ ಒಂದು ನೆಪವಾಗುತ್ತದೆ ಮತ್ತು ಈ ಪರಿಯ ವರ್ಗಾವಣೆಗಳು ಬೆಳವಣಿಗೆಯ ದರವನ್ನು ಮತ್ತಷ್ಟು ಇಳಿಕೆ ಮಾಡುವ ಪರಿಣಾಮವನ್ನು ಹೊಂದಿವೆ. ಇಂತಹ ವರ್ಗಾವಣೆಗಳ ಇನ್ನೊಂದು ಮುಖವು ಕಲ್ಯಾಣ ವೆಚ್ಚಗಳ ಕಡಿತವಾಗಿರುವುದರಿಂದ, ಕಲ್ಯಾಣ ವೆಚ್ಚಗಳ ಪ್ರಮಾಣವು ಹಂತಹಂತವಾಗಿ ಕಡಿಮೆಯಾಗುತ್ತಾ ಹೋಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸುಖೀ ರಾಜ್ಯದ ಅನ್ವೇಷಣೆಯಲ್ಲಿ ನಾವು ಸುಖೀ ರಾಜ್ಯದಿಂದ, ಕಲ್ಯಾಣ ಪ್ರಭುತ್ವದಿಂದ ಮತ್ತಷ್ಟು ದೂರ ಸಾಗುತ್ತೇವೆಯೇ ಹೊರತು ಅದರೆಡೆಗೆ ಚಲಿಸುವುದಿಲ್ಲ.

ಭಾರತದಲ್ಲಿ ನಾವು ಪ್ರಸ್ತುತ ಅಂತಹ ಒಂದು ದ್ವಂದ್ವದ ಮಧ್ಯದಲ್ಲಿದ್ದೇವೆ. ಕಡಿಮೆ ತೆರಿಗೆ–ಜಿಡಿಪಿ ಅನುಪಾತ ಮತ್ತು, ಹೂಡಿಕೆಯನ್ನು ಹಾಗೂ ಜಿಡಿಪಿ ಬೆಳವಣಿಗೆಯನ್ನು ಉತ್ತೇಜಿಸುವ ದಾರಿತಪ್ಪಿದ ಕಲ್ಪನೆಯ ಅಡಿಯಲ್ಲಿ ಬಂಡವಾಳಶಾಹಿಗಳಿಗೆ ಹೆಚ್ಚೆಚ್ಚು ವರ್ಗಾವಣೆಗಳಿಂದಾಗಿ ವಿತ್ತೀಯ ಸಂಪನ್ಮೂಲಗಳ ಮೇಲಿನ ಒತ್ತಡ ಎಷ್ಟಿದೆಯೆಂದರೆ, ಈ ಹಿಂದೆ ಗ್ರಾಮೀಣ ಬಡವರಿಗೆ ಜೀವನಾಡಿಯಾಗಿ ಪರಿಣಮಿಸಿದ್ದ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನೂ ಸಹ ಕೇಂದ್ರ ಸರ್ಕಾರವು ಮುಚ್ಚಲು ಹೊರಟಿದೆ.

ಒಟ್ಟಿನಲ್ಲಿ, ನವ–ಉದಾರವಾದಿ ಬಂಡವಾಳಶಾಹಿಯ ಪ್ರಸ್ತುತ ಯುಗದಲ್ಲಿ ಪ್ರಚುರಪಡಿಸಲಾಗುತ್ತಿರುವ ಜಿಡಿಪಿ–ಬೆಳವಣಿಗೆಯ ಗೀಳಿನ ಎರಡು ವಿಭಿನ್ನ ಸಮಸ್ಯೆಗಳೆಂದರೆ, ಮೊದಲನೆಯದು, ಬಂಡವಾಳಶಾಹಿಗಳಿಗೆ ನೀಡುವ ಹೆಚ್ಚಿನ ವರ್ಗಾವಣೆಗಳು ಹೂಡಿಕೆಯನ್ನು ಹೆಚ್ಚಿಸುತ್ತವೆ ಮತ್ತು ಆ ಮೂಲಕ ಜಿಡಿಪಿಯ ಬೆಳವಣಿಗೆಗೆ ಕಾರಣವಾಗುತ್ತವೆ ಎಂಬ ವಾದದ ತಳದಲ್ಲಿರುವ ವಿಶ್ಲೇಷಣಾತ್ಮಕ ದೋಷ. ಎರಡನೆಯದು, ತೆರಿಗೆ–ಜಿಡಿಪಿ ಅನುಪಾತವು ಕೆಳ ಮಟ್ಟದಲ್ಲಿದ್ದರೂ ಸಹ ಜಿಡಿಪಿಯ ಉನ್ನತ ಬೆಳವಣಿಗೆಯೇ ಜನರ ಹೆಚ್ಚಿನ ಕ್ಷೇಮಾಭಿವೃದ್ಧಿಗೆ ಕಾರಣವಾಗುತ್ತದೆ ಎಂಬ ವಾದ.

ಕಲ್ಯಾಣ ಪ್ರಭುತ್ವವನ್ನು, ಅಂದರೆ ಸುಖೀ ರಾಜ್ಯವನ್ನು ಸ್ಥಾಪಿಸುವ ಸಲುವಾಗಿ ಹಣ ಹೊಂದಿಸುವ ಪ್ರಯತ್ನಗಳನ್ನು ಅಪಾರವಾಗಿ ಹೆಚ್ಚಿಸುವ ಅಗತ್ಯವಿದೆ ಎಂಬುದನ್ನು ವಿಶ್ವದ ಎಲ್ಲೆಡೆಯ ಅನುಭವ ಹೇಳುತ್ತದೆ.

➘ ಚಿತ್ರದ ಕೊನೆಯಲ್ಲಿ ಕುಮಾರ್ ಕಂಪೋಸ್ ಮಾಡುವ ಹಳೆಯ ಚಾರಿತ್ರಿಕ ವಾಸ್ತು ಶಿಲ್ಪಗಳ ಅವಶೇಷಗಳ ಸುಂದರ ಚಿತ್ರಗಳು ಕಾಣಿಸುತ್ತವೆ. ಸದಾ ಚಲಿಸುವ ಅಲೆಗಳ ಸಮುದ್ರ ತೀರದ ಮರಳಿನ ಮೇಲೆ ಕಾಲುಚಾಚಿ ನಿರಾಳವಾಗಿ ಕುಳಿತ ಫೋಟೋಗ್ರಾಫರ್ ಕಾಣಿಸುತ್ತಾನೆ. ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಗುಡ್ಡದ ಕಿರುಹಾದಿಯಲ್ಲಿ ಮೇಲೆ ಸಾಗುತ್ತಾ ಕೊನೆಗೆ ತುದಿ ತಲುಪಿ ನೀಲಾಕಾಶವನ್ನು ನಿಟ್ಟಿಸುವ ಫೋಟೋಗ್ರಾಫರ್, ತನ್ನ ಸೃಜನಶೀಲತೆಯ ಅಭಿವ್ಯಕ್ತಿಯನ್ನು, ಸೂಫಿ ಸಂತರ ಅನುಭಾವದಲ್ಲಿ ತನ್ನ 'ಬಿಡುಗಡೆಯ ಸಾಧ್ಯತೆ'ಯನ್ನು ಕಂಡ ಸ್ವತಂತ್ರ ಮನುಷ್ಯನಂತೆ ತೋರುತ್ತಾನೆ.

ಕುಮಾರ್ ತನ್ನ ನೆನಪು–ಕನಸು–ಅನುಭಾವ ಮತ್ತು ಸೃಜನಶೀಲತೆಗಳ ಬಗ್ಗೆ ಮಾಡುವ ಆಲೋಚನೆಯ ಭಾಗವಾಗಿ ಮಿನಿ ಟಿವಿ ಸೆಟ್ಟಿನ ಪರದೆಯಲ್ಲಿ ಪದ್ಮಾಸನದ ಭಂಗಿಯ ಬುದ್ಧನ ಪ್ರತಿಮೆಯನ್ನು ಬಿಂಬಿಸುವ ಮೂಲಕ, ಇವನ್ನು ಒಟ್ಟಿಗೆ ಬೆಸೆಯುವ ಸಾಧನದ ಸಾಧ್ಯತೆಯಾಗಿ ಸಿನೆಮಾವನ್ನು ಈಗಾಗಲೇ ಕಂಡುಕೊಂಡಿದ್ದಾನೆ.

ಇದಕ್ಕೆ ವ್ಯತಿರಿಕ್ತವಾಗಿ ಜೈಲಿನ ಗೋಡೆಗಳನ್ನೇ ನೆನಪಿಸುವ, ಆದರೆ ತೆರೆದ ಬೃಹತ್ ಕಮಾನುಗಳ ಹಳೆಯ ಕಟ್ಟಡಗಳ ರಚನೆಗಳ ನಡುವೆ ಬಂದಿಯಾಗಿ ಬಿಡುಗಡೆಗಾಗಿ ಒದ್ದಾಡುವಂತೆ ಕನಸು ಕಾಣುವ ಅಮರೇಶ್ ಕನಸು–ಎಚ್ಚರ ಎರಡೂ ಅಲ್ಲದ ಅಥವಾ ಎರಡೂ ಆಗಿರಬಹುದಾದ ಸಿಮೆಂಟ್ ಹಾದಿಯ ವರ್ತುಲದ ಅಂಚಿನಲ್ಲಿ ವಿಷಣ್ಣನಾಗಿ ಗಡಿಯಾರದ ಸಮಯದ ಶಬ್ದದ ಲಯಕ್ಕೆ ಭಾರವಾದ ಹೆಜ್ಜೆಗಳನ್ನಿಡುತ್ತಾ ಸುತ್ತುಹಾಕುವ ದಾರುಣ ಚಿತ್ರಿಕೆಯೊಂದಿಗೆ ಚಿತ್ರ ಕೊನೆಗೊಳ್ಳುತ್ತದೆ. ಅಂದರೆ 'ಹರಿವ ನದಿಗೆ ಮೈಯೆಲ್ಲಾ ಕಾಲು' ಪ್ರಾರಂಭವಾಗುತ್ತದೆ.

3.

ಮನುಷ್ಯ ಜೀವನದ ವಿಕಾಸದ ಚರಿತ್ರೆಯಲ್ಲಿ ಕಾಲುಗಳ ಮಹತ್ವವು ಅಲೆಮಾರಿಯಾಗಿ ಜೀವಿಸುತ್ತಿದ್ದ ಆದಿ ಮಾನವರ ಬದುಕಿನ ಬಹು ಮುಖ್ಯ ಅಂಗವಾಗಿದೆ. ಮರಗಳ ಮೇಲಿನ ಜೀವನದಲ್ಲಿ ಕೈಕಾಲುಗಳ ನಡುವೆ ಭೇದವಿಲ್ಲದ ಬದುಕಿನ ಕ್ರಮದ ಆರ್ಬೊರಿಯಲ್ ವಾನರರು, ಕೈ ಮತ್ತು ಕಾಲುಗಳ ಬಳಕೆಯನ್ನು ಪ್ರತ್ಯೇಕಿಸಿಕೊಂಡು ಕೈಗಳನ್ನು ಮನುಷ್ಯರ ಅತ್ಯಂತ ಪ್ರಾಚೀನ ಸೃಷ್ಟಿಯಾದ ಹತಾರಗಳನ್ನು ಸೃಷ್ಟಿಸಲು, ಕಾಲುಗಳನ್ನು ಆಹಾರ, ವಾಸಸ್ಥಳ ಮೊದಲಾದ ಜೀವನಾಧಾರದ ಮೂಲಗಳನ್ನು ಅರಸಲು ಬಳಸುತ್ತಾ ಟೆರೆಸ್ಟ್ರಿಯಲ್ ಏಪ್, ಅಂದರೆ ಭೂಮಿಯ ಮೇಲೆ ವಾಸಿಸುವ ಜೀವಿಗಳಾಗಿ ತೊಡಗುವುದರ ಮೂಲಕ ನಿಜವಾದ ಮನುಷ್ಯ ಜೀವನ ಬೆಳೆದು ಬಂದಿತು. ಜೀವನಾಧಾರವನ್ನು ಅರಸುವ ಸ್ಥಿತಿಯಿಂದ ಅವನ್ನು ಸೃಷ್ಟಿಕೊಳ್ಳುವ ಸ್ಥಿತಿಗೆ ವಿಕಾಸಗೊಂಡಾಗ ಬೇಟೆ–ಮೀನುಗಾರಿಕೆಯ ಅಲೆಮಾರಿ ಜೀವನದಿಂದ ಕೃಷಿಯ ಫಲವತ್ತಾದ ಭೂಪ್ರದೇಶಗಳ ಮತ್ತು ನದಿಗಳ ದಡದ ಊರು, ಗ್ರಾಮಗಳ, ನಗರ ಪಟ್ಟಣಗಳ, ಬದುಕಿಗೆ ಕಾಲಿಟ್ಟಿದ್ದು ಈಗಲೂ ಆ ಪ್ರಕ್ರಿಯೆಯು ಮುಂದುವರೆದಿದೆ. ವಿಶ್ವದ ಎಲ್ಲ ಪ್ರಮುಖ ಪಟ್ಟಣ, ನಗರಗಳೂ ನದಿಗಳ ದಡದಮೇಲೆ ಬೆಳೆದು ನದಿಗಳ ಹೆಸರನ್ನೇ ಹೊಂದಿರುವುದು ನದಿಗಳಿಗೂ, ಮನುಷ್ಯರ ನಾಗರಿಕತೆಗೂ ಇರುವ ಬಿಡಿಸಲಾಗದ ನಂಟನ್ನು ಕುರಿತು ಹೇಳುತ್ತಿವೆ. ಇದಕ್ಕೆ ಹೊಂದಿಕೊಂಡಂತೆ ಅಲೆಮಾರಿ ಜೀವನ ಮತ್ತು ಆಧುನಿಕ ವಲಸೆಗಳಿಗೂ, ಕಾಲುಗಳು ಮತ್ತು ಕಾಲಿನ ವಿಸ್ತರಣೆಗಳಾದ ಭೂಮಿ ಮತ್ತು ಆಕಾಶದಲ್ಲಿ ಚಲಿಸುವ ವಾಹನಗಳಿಗೂ ಇರುವ ನಂಟು ಇಂದಿಗೂ ಜೀವಂತವಾಗೇ ಇದೆ. ಚಲನೆ ಭೌತಿಕ ಸ್ವರೂಪದಿಂದ ರಾಸಾಯಿನಿಕ, ಯಾಂತ್ರಿಕ ಮತ್ತು ಡಿಜಿಟಲ್ ಸ್ವರೂಪವನ್ನು ಪಡೆದುಕೊಂಡ ಮೇಲೂ ಕಾಲುಗಳ ಮಹತ್ವೇನೂ ಕಡಿಮೆಯಾಗಿಲ್ಲ. ಹಾಗೆ ನೋಡಿದರೆ ಅದು ಇನ್ನೂ ಅನೇಕ ಪಟ್ಟು ಹೆಚ್ಚಿದೆ. ಇದಕ್ಕೆ ಕೋವಿಡ್ ಕಾಲದ ಶ್ರಮಿಕರ ವಲಸೆಯ ಉದಾಹರಣೆ ಸಾಕು. ಸಾಮಾನ್ಯ ಜನರಿರಲಿ, ಬಹುಕೋಟಿ ಉದ್ಯಮಿಗಳೇ ಇರಲಿ ದಿನಬೆಳಗಾದರೆ ಇದ್ದಲ್ಲಿಂದ ಮತ್ತೆಲ್ಲಿಗೋ ಚಲಿಸುವುದೇ ಜೀವನ ಎಂದಾಗಿದೆ. ಜೀವನಾಧಾರವನ್ನು ಸೃಷ್ಟಿಸುವ ಕೋಟ್ಯಾಂತರ ಕೈ, ಕಾಲುಗಳಿಗಿಂತಾ ಶಸ್ತ್ರಾಸ್ತ್ರಗಳ ಸಂಗ್ರಹವನ್ನು ನಿಯಂತ್ರಿಸಲು ಸಹಿ ಹಾಕುವ ಬೆರಳೆಣಿಕೆಯ ಕೈಗಳ ಬೆರಳುಗಳು; ಯಂತ್ರಗಳನ್ನು, ವಾಹನಗಳನ್ನು ನಡೆಸುವ ಕೋಟ್ಯಾಂತರ ಕೈ, ಕಾಲುಗಳಿಗಿಂತಾ ತನ್ನಂತೆಯೇ ನರ ಮನುಷ್ಯರಾಗಿರುವ ದುರ್ಬಲರನ್ನು ತುಳಿಯುವ ಕೆಲವೇ ಸಾವಿರ ನರರಾಕ್ಷಸರ ಕಾಲುಗಳು ಇಂದಿನ ಮನುಷ್ಯ ಜೀವನವನ್ನು ನಿಯಂತ್ರಿಸುತ್ತಿವೆ. 'ದೇವಭಾಷೆ'ಯಾದ ಸಂಸ್ಕೃತದಲ್ಲಿ ನೀರಿಗೂ, ಬದುಕಿಗೂ 'ಜೀವನ'ವೆಂಬ ಸಾಮಾನ್ಯ ಪದವನ್ನು ಬಳಸಲಾಗುತ್ತದೆ. ಹರಿಯುವುದು ನದಿಯ ಮೂಲಗುಣವಾದ್ದರೂ, 'ಹರಿವ ನದಿ' ಎಂಬ ಅತ್ಯೋಕ್ತಿಯು ಬಳಕೆಯಲ್ಲಿದೆ. ಜೀವನದಿ ಎಂಬ ಪ್ರಯೋಗದಲ್ಲಿ ಧ್ವನಿಗೊಳ್ಳುವುದೂ ಸಹ ನದಿಯ ಚಲನೆಯ ಗುಣವೇ. ಹಾಗೆಯೇ ಜೀವನವೆಂಬುದು ವಿವಿಧ ಚಲನೆಗಳ ಮೊತ್ತ. ಬದುಕುವ ಕ್ರಿಯೆಯಲ್ಲಿ ಪ್ರಮುಖ ಅಂಗಗಳ ವಿವಿಧ ಬಗೆಯ ಚಲನೆಗಳ ಮೊತ್ತವೇ ಜೀವ. ಈ ಚಲನೆಗಳ ಪ್ರಾರಂಭ ಹುಟ್ಟು. ಇವುಗಳ ಸ್ಥಗಿತತೆ ಸಾವು. ಬದುಕು ಎಂಬುದು ಇವುಗಳ ನಡುವೆ ಇರುವ ಚಲನೆಗಳ ಕ್ರಿಯೇ. ಇದಕ್ಕೆ ಅನುವಾಗುವುದೆಲ್ಲವೂ ಜೀವನಾಧಾರವೇ.

12ನೇ ಶತಮಾನದ ಅನುಭಾವಿಯಾದ ಅಲ್ಲಮಪ್ರಭು ಹೇಳುವ 'ಹರಿವ ನದಿಗೆ ಮೈಯೆಲ್ಲಾ ಕಾಲು' ಜೀವಂತ ನದಿಗೆ ಮಾತ್ರ ಅನ್ವಯವಾಗುತ್ತದೆಯೇ? ಅದನ್ನು 21ನೇ ಶತಮಾನದ ಈ ಕಾಲಘಟ್ಟದಲ್ಲಿ ತಮ್ಮ ಚಿತ್ರದ ಶೀರ್ಷಿಕೆಯನ್ನಾಗಿ ಬಳಸಿಕೊಳ್ಳುವ ಬಾಬು ತಮ್ಮ ಚಿತ್ರದಲ್ಲಿ ನಡೆಯುತ್ತಲೇ ಇರುವ ಫೋಟೋಗ್ರಾಫರ್ ಕುಮಾರ್, ಅಮರೇಶ, ನೀಲಾ, ಸೂಫೀಸಂತ ಫಕೀರರ, ಹಾಗೆಯೇ ಬರಿಗಾಲಲ್ಲಿ, ವಿವಿಧ ಬಗೆಯ ಪಾದರಕ್ಷೆ, ಚಪ್ಪಲಿ, ಎಕ್ಕಡ, ಹಾವುಗೆ, ಕಾಲೊತ್ತು, ಶೂ, ಬೂಟುಗಳನ್ನು ಧರಿಸಿದ, ಹೆಸರಿಲ್ಲದ, ಜಾತಿ ಗೊತ್ತಿಲ್ಲದ, ನೋಡಿದರೆ ಬಡವರೆಂದು, ಕಾರ್ಮಿಕರೆಂದು ತೋರುವ ಸಾಮಾನ್ಯ ಜನರ ಚಲನೆಗಳ ವಿನ್ಯಾಸಗಳ ಬಗ್ಗೆ ಮಾತ್ರ ಹೇಳುತ್ತಿದ್ದಾರೆಯೇ. ಪುರುಷ ಸೂಕ್ತದ ಪುರುಷನ ಪಾದಗಳಿಂದ ಬಂದವರೆಂದು ಹೇಳುವ ಜನರಿಗೂ, ಚಪ್ಪಲಿ ಧರಿಸಿ ಅಥವಾ ಧರಿಸದೆ ಬರಿಗಾಲಿನಲ್ಲಿ ನಡೆಯುವ ಜನರಿಗೂ ಏನಾದರೂ ಸಂಬಂಧವಿದೆಯೇ? ನೀಲಾ ಶೂ ಅಂಗಡಿಯಲ್ಲೇ ಏಕೆ ಕೆಲಸಮಾಡುತ್ತಾಳೆ? ಪ್ರಯತ್ನಿಸಿದ್ದರೆ ಚಿನ್ನದ ಅಂಗಡಿಯಲ್ಲಿ ಕೆಲಸ ಸಿಗುತ್ತಿರಲಿಲ್ಲವೆ? ಕುಮಾರ್ ಬಗ್ಗೆ ಸಹಾನುಭೂತಿ ಇರುವ, ಮೆದು ಭಾಷೆ, ಮೃದು ನಡವಳಿಕೆಯ ಶುಭ್ರ ವಸ್ತ್ರದ, ನೀಟಾಗಿ ಕಾಣುವ ಪತ್ರಿಕಾ ಸಂಪಾದಕರು, ಕೈದಿಗಳ ಪರಿವರ್ತನೆಗಾಗಿ ಜೈಲಿನ ಬಂಧಿಗಳಿಂದ ನಾಟಕ ಆಡಿಸುವಷ್ಟು ಸುಸಂಸ್ಕೃತರಾದ ಮತ್ತು ಅಮರೇಶನ ಹೆಬ್ಬೆಟ್ಟಿನ ಗ್ಯಾಂಗ್ರೀನ್ ಬಗ್ಗೆ ಕಾಳಜಿ ಇರುವ, ಅವನ ಬಗ್ಗೆ ಕರುಣೆ ತೋರಿಸಿ ನರ್ಸರಿಯಲ್ಲಿ ಕೆಲಸ ಮಾಡಲು ಸಮ್ಮತಿಸುವ, ಅಚ್ಚುಕಟ್ಟಿನ ನಡೆ–ನುಡಿಯ ಜೈಲಿನ ಅಧಿಕಾರಿ, ಈ ಇಬ್ಬರೂ ಚಿತ್ರದಲ್ಲಿನ ಉಳಿದ ಪಾತ್ರಗಳಂತೆ ನಡೆಯದೆ, ಕುಳಿತಲ್ಲೇ ವ್ಯವಹರಿಸುವುದು ಕೇವಲ ಆಕಸ್ಮಿಕವೇ? ಚಿತ್ರದ ನಿರ್ದೇಶಕರು ಭರತ ಖಂಡದ ಜಂಬೂ ದ್ವೀಪದ ಭರತ ವರ್ಷದ ದಕ್ಷಿಣ ಭಾಗದ ಕರುನಾಡ ಜನರ ಸುಂದರ ಭಾಷೆಯಾದ ಕನ್ನಡದಲ್ಲಿ ತಮ್ಮ ಈ ಚಿತ್ರವನ್ನು ಏಕೆ ನಿರ್ಮಿಸಿದ್ದಾರೆ?

ಈ ಮತ್ತು ಇಂಥ ಪ್ರಶ್ನೆಗಳು ಪ್ರೇಕ್ಷಕರಲ್ಲಿ ಎದ್ದರೆ ಅವು ಅಪ್ರಸ್ತುತವಾಗದೆ ಚಿತ್ರದ ಅರ್ಥವಂತಿಕೆಯನ್ನು ಹೆಚ್ಚಿಸುತ್ತವೆ ಎಂದು ನಾನು ನಂಬುತ್ತೇನೆ. ಏಕೆಂದರೆ ಬಾಬು ಈಶ್ವರ ಪ್ರಸಾದ್ ತಾವು ನಿರ್ಮಿಸಿರುವ ಚಿತ್ರವನ್ನು ಅರ್ಥೈಸಿಕೊಳ್ಳುವ ಹೊಣೆಯನ್ನು ಹೆಚ್ಚಾಗಿ ಪ್ರೇಕ್ಷಕರ ಹೆಗಲಿಗೇ ಹೊರಿಸಿದ್ದಾರೆ. ಇದಕ್ಕೆ ಸಿನೆಮಾ ತಯಾರಕರಾಗಿ, ನಿರ್ದೇಶಕರಾಗಿ ಪ್ರೇಕ್ಷಕರ ಸಂವೇದನೆಯ ಮೇಲೆ ಅವರು ಇರಿಸಿರುವ ನಂಬಿಕೆ ಮತ್ತು ಭರವಸೆಗಳೇ ಕಾರಣ ಎಂದು ನನಗೆ ತೋರುತ್ತದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE December 12-18, 2022 Price: Rs. 10/- Date of Publication: 12 December 2022 RNI No. KARKAN /2006/17926 Posted on 12-12-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಬಾಬು ಈಶ್ವರ ಪ್ರಸಾದ್ ಅವರ ಚಿತ್ರದಲ್ಲಿ ನಡೆಯುತ್ತಲೇ ಇರುವ ಫೋಟೋಗ್ರಾಫರ್ ಕುಮಾರ್, ಅಮರೇಶ, ನೀಲಾ, ಸೂಫೀಸಂತ ಫಕೀರರ, ಹಾಗೆಯೇ ಬರಿಗಾಲಲ್ಲಿ, ವಿವಿಧ ಬಗೆಯ ಪಾದರಕ್ಷೆ, ಚಪ್ಪಲಿ, ಎಕ್ಕಡ, ಹಾವುಗೆ, ಕಾಲೊತ್ತು, ಶೂ, ಬೂಟುಗಳನ್ನು ಧರಿಸಿದ, ಹೆಸರಿಲ್ಲದ, ಜಾತಿಗೊತ್ತಿಲ್ಲದ, ನೋಡಿದರೆ ಬಡವರೆಂದು, ಕಾರ್ಮಿಕರೆಂದು ತೋರುವ ಸಾಮಾನ್ಯ ಜನರ ಚಲನೆಗಳ ವಿನ್ಯಾಸಗಳ ಬಗ್ಗೆ ಮಾತ್ರ ಹೇಳುತ್ತಿದ್ದಾರೆಯೇ. ಪುರುಷ ಸೂಕ್ತದ ಪುರುಷನ ಪಾದಗಳಿಂದ ಬಂದವರೆಂದು ಹೇಳುವ ಜನರಿಗೂ, ಚಪ್ಪಲಿ ಧರಿಸಿ ಅಥವಾ ಧರಿಸದೆ ಬರಿಗಾಲಿನಲ್ಲಿ ನಡೆಯುವ ಜನರಿಗೂ ಏನಾದರೂ ಸಂಬಂಧವಿದೆಯೇ? ನೀಲಾ ಶೂ ಅಂಗಡಿಯಲ್ಲೇ ಏಕೆ ಕೆಲಸ ಮಾಡುತ್ತಾಳೆ? ಕುಮಾರ್ ಬಗ್ಗೆ ಸಹಾನುಭೂತಿ ಇರುವ, ಮೆದು ಭಾಷೆ, ಮೃದು ನಡವಳಿಕೆಯ ಶುಭ್ರ ವಸ್ತ್ರದ, ನೀಟಾಗಿ ಕಾಣುವ ಪತ್ರಿಕಾ ಸಂಪಾದಕರು, ಕೈದಿಗಳ ಪರಿವರ್ತನೆಗಾಗಿ ಜೈಲಿನ ಬಂಧಿಗಳಿಂದ ನಾಟಕ ಆಡಿಸುವಷ್ಟು ಸುಸಂಸ್ಕೃತರಾದ ಮತ್ತು ಅಮರೇಶನ ಹೆಬ್ಬೆಟ್ಟಿನ ಗ್ಯಾಂಗ್ರೀನ್ ಬಗ್ಗೆ ಕಾಳಜಿ ಇರುವ, ಅವನ ಬಗ್ಗೆ ಕರುಣೆ ತೋರಿಸಿ ನರ್ಸರಿಯಲ್ಲಿ ಕೆಲಸ ಮಾಡಲು ಸಮ್ಮತಿಸುವ, ಅಚ್ಚುಕಟ್ಟಿನ ನಡೆ-ನುಡಿಯ ಜೈಲಿನ ಅಧಿಕಾರಿ, ಈ ಇಬ್ಬರೂ ಚಿತ್ರದಲ್ಲಿನ ಉಳಿದ ಪಾತ್ರಗಳಂತೆ ನಡೆಯದೆ, ಕುಳಿತಲ್ಲೇ ವ್ಯವಹರಿಸುವುದು ಕೇವಲ ಆಕಸ್ಮಿಕವೇ? ಈ ಮತ್ತು ಇಂಥ ಪ್ರಶ್ನೆಗಳು ಪ್ರೇಕ್ಷಕರಲ್ಲಿ ಎದ್ದರೆ ಅವು ಅಪ್ರಸ್ತುತವಾಗದೆ ಚಿತ್ರದ ಅರ್ಥವಂತಿಕೆಯನ್ನು ಹೆಚ್ಚಿಸುತ್ತವೆ. ಏಕೆಂದರೆ ಬಾಬು ಈಶ್ವರ ಪ್ರಸಾದ್ತಾವು ನಿರ್ಮಿಸಿರುವ ಚಿತ್ರವನ್ನು ಅರ್ಥೈಸಿಕೊಳ್ಳುವ ಹೊಣೆಯನ್ನು ಹೆಚ್ಚಾಗಿ ಪ್ರೇಕ್ಷಕರ ಹೆಗಲಿಗೇ ಹೊರಿಸಿದ್ದಾರೆ. ಇದಕ್ಕೆ ಸಿನೆಮಾ ತಯಾರಕರಾಗಿ, ನಿರ್ದೇಶಕರಾಗಿ ಪ್ರೇಕ್ಷಕರ ಸಂವೇದನೆಯ ಮೇಲೆ ಅವರು ಇರಿಸಿರುವ ನಂಬಿಕೆ ಮತ್ತು ಭರವಸೆಗಳೇ ಕಾರಣ.



'ಹರಿವ ನದಿಗೆ ಮೈಯೆಲ್ಲಾ ಕಾಲು'

ಚಿತ್ರದ ಕುಮಾರ್, ಅಮರೇಶ್ ಮತ್ತು ನೀಲಾ ಏನಂತಾರೆ?

ಪ್ರೊ.ವಿ.ಎನ್.ಲಕ್ಷ್ಮೀನಾರಾಯಣ

1.

ಕರ್ನಾಟಕದಲ್ಲಿ ತಯಾರಾಗುವ ಸಿನೆಮಾಗಳಲ್ಲಿ ಸಿನೆಮಾ ಉದ್ಯಮದ ಉತ್ಪನ್ನಗಳಾಗಿ ಮಾರುಕಟ್ಟೆಗಾಗಿ ತಯಾರಾಗುವ ಸರಕು ಚಿತ್ರಗಳಲ್ಲದೆ ಪ್ರಸಿದ್ಧಿ ಮತ್ತು ಪ್ರಶಸ್ತಿಗಳಿಕೆ ಇತ್ಯಾದಿ ಸೀಮಿತ ಉದ್ದೇಶಗಳಿಗಾಗಿ, ಸಾಹಿತ್ಯ ಕೃತಿಗಳ ದೃಶ್ಯ ಅವತರಣಿಕೆಗಳಾಗಿ ತಯಾರಾಗುವ, ವಿವಿಧ ಬಗೆಯ, ವಿವಿಧ ಗುಣಮಟ್ಟದ ಚಿತ್ರಗಳು ಈ ಕಾಲಘಟ್ಟದಲ್ಲಿ ಸದ್ದು ಮಾಡುತ್ತಿರುತ್ತವೆ. ಕನ್ನಡ ಸಿನೆಮಾ ಪರಂಪರೆಯನ್ನು ಗುರುತಿಸುವಾಗ ಈ ಎರಡು ಬಗೆಯ ಚಿತ್ರಗಳು ಮಾತ್ರ 'ಚಿತ್ರ ವಿಮರ್ಶಕರು' ಮತ್ತು ಸಿನಿ ಪತ್ರಕರ್ತರ ಗಣನೆಯಲ್ಲಿ ಸ್ಥಾನ ಪಡೆಯುತ್ತವೆ. ಸೃಜನಶೀಲರು ಸಿನೆಮಾವನ್ನು ತಮ್ಮ ಸಂವೇದನಾ ಶೀಲತೆ ಮತ್ತು ಚಿಂತನ ಶೀಲತೆಯ ಅಭಿವ್ಯಕ್ತಿ ಭಾಷೆಯನ್ನಾಗಿ ಬಳಸಿ ಸೃಜಿಸುವ ಸಿನೆಮಾ ಕೃತಿಗಳು ಕನ್ನಡ ಸಿನೆಮಾ ಪರಂಪರೆಯ ಅವಿಭಾಜ್ಯ ಅಂಗವೆಂಬ ಅಂಶ ಕರ್ನಾಟಕದಲ್ಲಿ ಆಯೋಜನೆಗೊಳ್ಳುವ ಚಿತ್ರೋತ್ಸವಗಳು, ಕನ್ನಡ ಸಿನೆಮಾ ಅಧ್ಯಯನ ಮತ್ತು ವಿಮರ್ಶಾ ಪರಂಪರೆಯಲ್ಲಿ ಕಾಣಸಿಗುವುದೇ ಇಲ್ಲ. ಹೀಗಾಗಲು ಕನ್ನಡದ 'ಸಿನೆಮಾ ವಿಮರ್ಶಕರು' ಸಿನೆಮಾ ಭಾಷೆಯ ವ್ಯಾಕರಣ ಮತ್ತು ನುಡಿಗಟ್ಟನ್ನು ಬಲ್ಲ ಸಹೃದಯರಾಗಿರುವುದಕ್ಕಿಂತಾ ಹೆಚ್ಚಾಗಿ ಸಮಾಜ ಶಾಸ್ತ್ರಜ್ಞರೋ, ಸಾಹಿತ್ಯ ವಿಮರ್ಶಕರೋ ಅಥವಾ ಪರದೆಯ ಮೇಲೆ ಓಡಿದ್ದೆಲ್ಲವೂ ಸಿನೆಮಾ ಕೃತಿಗಳೇ ಎಂಬ ಗ್ರಹಿಕೆಯಿಂದ ನೋಡುವ, ನಿರಕ್ಷರಿಗಳಾಗಿರುವುದು ಮುಖ್ಯ ಕಾರಣ.

ಚಿತ್ರೋದ್ಯಮದ ಉತ್ಪನ್ನಗಳಾಗಿ ತಯಾರಾಗುವ ಸಿನೆಮಾ ಸರಕುಗಳಿಗೆ ಬಂಡವಾಳದ ಹೂಡಿಕೆ ಮತ್ತು ಗಳಿಸಬಹುದಾದ ಲಾಭ ಮುಖ್ಯ. ಪ್ರಶಸ್ತಿ ಮತ್ತು ಚಿತ್ರೋತ್ಸವದ ಮಾರುಕಟ್ಟೆಗಳಲ್ಲಿ ಭಾಗವಹಿಸುವ ಸಿನೆಮಾಗಳಿಗೆ ಹಣಗಳಿಕೆ ಅಷ್ಟು ಮುಖ್ಯವಲ್ಲದಿದ್ದರೂ ಪ್ರಶಸ್ತಿ ಮತ್ತು ಪ್ರಸಿದ್ಧಿಯ ಜೊತೆಗೆ ಒಂದಿಷ್ಟು ಹಣವೂ ಬರುವುದಾದರೆ ನಿರ್ಮಾಪಕರಿಗೆ ಸಂತೋಷವೇ. ಆದರೆ ಚಿಂತನಾ ಪ್ರಧಾನವಾದ ಸೃಜನಶೀಲ ಸಿನೆಮಾಕ್ಕೆ, ಹಣ ಬರಲಿ ಬರದಿರಲಿ, ಸಿನೆಮಾ ಭಾಷೆಯ ಕನಿಷ್ಠ ಪರಿಚಯವಾದರೂ ಇರುವ ಸಹೃದಯರನ್ನು ತಲುಪುವುದು ಅತ್ಯಂತ ಮುಖ್ಯ. ಹೀಗಾಗಿ ಅವರೊಂದಿಗೆ ಸಿನೆಮಾ ಕಲಾಕಾರರು ಸಿನೆಮಾ ಮೂಲಕ ಹಂಚಿಕೊಳ್ಳುವ ಸಹಮತ ಮತ್ತು ಭಿನ್ನಾಭಿಪ್ರಾಯಗಳು, ಮಾಡುವ ಸಂವಾದ ಮತ್ತು ಚರ್ಚೆಗಳು ಅವರ ಸಿನೆಮಾ ಕೃತಿಗಳ ವೀಕ್ಷಣೆಯ ಭಾಗವೇ ಆಗಿರುತ್ತದೆ.

ಚಿಂತನ ಶೀಲತೆ ಮತ್ತು ಸೃಜನ ಶೀಲತೆಗಳು ಯಾವುದೇ ಅಭಿವ್ಯಕ್ತಿ ಮಾಧ್ಯಮದಲ್ಲಿ (ಉದಾಹರಣೆಗೆ, ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪ, ನೃತ್ಯ ಮತ್ತು ನಾಟಕಗಳ ಭಾಷೆಯ) ಆಯಾ ಭಾಷೆಯಲ್ಲಿ ಕಲಾಕೃತಿಗಳಾಗಿ ಮೈದಾಳಬಹುದು. ಅವುಗಳ ಶೈಲಿ, ಗುಣಮಟ್ಟ, ದೃಷ್ಟಿಕೋನ ಮತ್ತು ಕಲಾಸೌಷ್ಠವಗಳು ಭಿನ್ನ ಭಿನ್ನವಾಗಿರಬಹುದು. ಸಿನೆಮಾ ಭಾಷೆಗಿರುವ, ಉಳಿದ ಭಾಷೆಗಳಿಗಿಲ್ಲದ ವಿಶೇಷ ಸೌಕರ್ಯ, – ಅದರ ವ್ಯಾಕರಣದ ಸಂಕೀರ್ಣತೆ, ದೃಶ್ಯ ಶ್ರೀಮಂತಿಕೆ, ತಾಂತ್ರಿಕ ಅನನ್ಯತೆ ಮತ್ತು ಎಂಥಾ ಅಮೂರ್ತ ಅನುಭವವನ್ನು ಬೇಕಾದರೂ ದೃಶ್ಯ ವಿನ್ಯಾಸಗಳಲ್ಲಿ ಮೂರ್ತಗೊಳಿಸಬಲ್ಲ ಕಲಾಶಕ್ತಿ. ಸಿನೆಮಾದ ದೌರ್ಬಲ್ಯ ಅದೊಂದು ಭಾಷೆ ಎಂದು ಅರಿಯದ ನಿರಕ್ಷರಿಗಳ ನಿರೀಕ್ಷೆಗಳನ್ನು ಅವರವರ ಪರಿಣತಿ ಮತ್ತು ಹಿನ್ನಲೆಗೆ ತಕ್ಕಂತೆ ಬಿಡಿ ಬಿಡಿಯಾಗಿ, ಅಥವಾ ಅವೆಲ್ಲವುಗಳ ಮೊತ್ತವಾಗಿ ಸಾಹಿತ್ಯ, ಸಂಗೀತ, ಚಿತ್ರಕಲೆ, ನಾಟಕ, ನೃತ್ಯಗಳ ದೃಶ್ಯ ರೂಪವನ್ನು ಸಿನೆಮಾ ಹೆಸರಿನಲ್ಲಿ ಪೂರೈಸಬಲ್ಲದು ಎಂಬ ತಪ್ಪುಕಲ್ಪನೆಯನ್ನು ಹುಟ್ಟಿಸುವಷ್ಟು ಜಟಿಲವಾಗಿರುವುದು.

ಪರದೆಯಮೇಲೆ ಮೂಡುವ ಒಂದು ಚಿತ್ರ ಒಂದು ಸಿನೆಮಾಕೃತಿ ಹೌದೇ ಅಲ್ಲವೇ ಎಂದು ವಿಂಗಡಿಸಿಕೊಳ್ಳುವುದು ಹೇಗೆ? ಇದನ್ನು ತಿಳಿಯಲು ಒಂದು ಸ್ಥೂಲ ವಿಧಾನವಿದೆ. ಬಹಳಷ್ಟು ಚಿತ್ರಗಳು ಚಿತ್ರಮಂದಿರದಲ್ಲಿ ದೀಪಗಳು ಆರುವುದರೊಂದಿಗೆ ಪ್ರಾರಂಭವಾಗುತ್ತವೆ. ದೀಪಗಳು ಹತ್ತಿದಾಗ ಅವು ಮುಗಿಯುತ್ತವೆ. ಅಥವಾ ಮುಗಿದಿವೆ ಎಂದು ಹೊರಬರುತ್ತೇವೆ. ಸಿನೆಮಾ ಕೃತಿಗಳೂ ಸಹ ಇತರ ಚಿತ್ರಗಳಂತೆಯೇ ದೀಪಗಳು ಆರುವುದರೊಂದಿಗೆ ಪ್ರಾರಂಭವಾಗುತ್ತವೆ. ಆದರೆ ದೀಪಗಳು ಹತ್ತಿದಾಗ ಮುಗಿಯುವುದಿಲ್ಲ. ನಿಜವಾಗಿ ಆಗ ಪ್ರಾರಂಭವಾಗುತ್ತವೆ. ಅರೆಗತ್ತಲಲ್ಲಿ ಹೊರಗಣ್ಣುಗಳಿಗೆ ದಕ್ಕಿದ ಸಿನೆಮಾ ಬೆಳಕಿನ ಒಳಗಣ್ಣುಗಳಲ್ಲಿ ಹರಿಯಲು ತೊಡಗುತ್ತದೆ. (ಇದು ಸಿನೆಮಾಕ್ಕೆ ಮಾತ್ರ ವಿಶಿಷ್ಟವಾಗಿರದೆ, ಎಲ್ಲ ಪ್ರಕಾರದ ಕಲಾಕೃತಿಗಳ ಆಸ್ವಾದನೆಯಲ್ಲೂ ಸಮಾನವಾಗಿರುವ ಸಂಗತಿ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು). ಹೀಗಾಗಿಯೇ ಸಿನೆಮಾ ನೋಡಲು ಎರಡು ಕಣ್ಣು ಸಾಲದು.

ಸಿನೆಮಾ ಸಹ ಸೇರಿದಂತೆ ಎಲ್ಲ ಕಲಾಕೃತಿಗಳಲ್ಲಿಯೂ ಕಾಣಸಿಗುವ ಮತ್ತೊಂದು ಸಾಮಾನ್ಯ ಅಂಶ ಅವುಗಳ ಚಿಂತನಾ ವಿನ್ಯಾಸ. ಸಿನೆಮಾ ಕಲಾಕೃತಿಯ ವಿಷಯದಲ್ಲಿ ಚಿಂತನ ಶೀಲತೆಯು ಸಿನೆಮಾ ಭಾಷೆಯ ಸಂಕೀರ್ಣತೆಯಿಂದಾಗಿ ಬಹುಮುಖಿಯಾಗಿರುತ್ತದೆ ಮತ್ತು ಬಹುಪದರಗಳನ್ನು ಹೊಂದಿರುತ್ತದೆ. ಅಂದರೆ ಸಿನೆಮಾ ಕಲಾಕಾರರ ಮತ್ತು ಸಹೃದಯರ ಸೃಜನ ಶೀಲತೆ, ಸಂವೇದನಾ ಶೀಲತೆ ಮತ್ತು ಜೀವನಾನುಭವಗಳು ಒಂದು ಸಿನೆಮಾ ಕೃತಿಯ ನಿರ್ಮಾಣ ಮತ್ತು ಆಸ್ವಾದನೆಯಲ್ಲಿನ ಚಿಂತನ ಶೀಲತೆಯನ್ನು ನಿರ್ಧರಿಸುತ್ತವೆ. ಯಾವುದೇ ಕಲಾಕೃತಿಗೆ, ವಿಶೇಷವಾಗಿ ಸಿನೆಮಾ ಕಲಾಕೃತಿಗೆ ತಾತ್ವಿಕ ಹರಹನ್ನು ಕೊಡುವ ಅಂಶಗಳೂ ಸಹ ಇವೇ ಆಗಿವೆ.



2.

ಚಿತ್ರಕಲಾಕಾರರ ಸೃಜನಶೀಲತೆಯೊಂದಿಗೆ ಸಿನೆಮಾ ಭಾಷೆಯ ಸೃಜನ ಶೀಲತೆ ಮತ್ತು ಸಂವೇದನಾ ಶೀಲತೆಗಳನ್ನು ಬೆಸೆದು ಸಿನೆಮಾ ಮಾಡುವ ಬಾಬು ಈಶ್ವರ ಪ್ರಸಾದ್ ಅವರ ಎರಡನೆಯ ಚಿತ್ರ 'ಹರಿವ ನದಿಗೆ ಮೈಯೆಲ್ಲಾ ಕಾಲು' ಅವರ ಮೊದಲ ಚಿತ್ರ 'ಗಾಳಿ ಬೀಜ' ಅದರ ಸಿನೆಮಾತನದ ಬಗ್ಗೆಯೇ ಸೆನ್ಸಾರ್ ಬೋರ್ಡಿನ 'ಪರಿಣತರು' ತಕರಾರು ತೆಗೆಯಲು ಪ್ರೇರೇಪಿಸಿದ ಸಿನೆಮಾ ಕೃತಿ.

'ಹರಿವ ನದಿಗೆ ಮೈಯೆಲ್ಲಾ ಕಾಲು' ಚಿತ್ರದ ಶೀರ್ಷಿಕೆಯೇ ಸೂಚಿಸುವಂತೆ ಮನುಷ್ಯ ಜೀವನದ ವಿವಿಧ ಮಗ್ಗಲುಗಳನ್ನು ಅಲ್ಲಮ ಪ್ರಭುವಿನ ಅನುಭಾವದ ಭಿತ್ತಿಯಲ್ಲಿ ಚಿತ್ರಿಸುವ ಚಿಂತನಾ ಪ್ರಧಾನ ಸಿನೆಮಾ ಕೃತಿ. ಎಲ್ಲಿಂದಲೋ ಬರುತ್ತಿರುವ, ಎಲ್ಲಿಗೋ ಹೋಗಲು ಧಾವಂತದಿಂದ ಹೆಜ್ಜೆ ಹಾಕುತ್ತಿರುವ ಜನರ ಕಾಲುಗಳ ಚಿತ್ರಿಕೆಗಳೊಂದಿಗೆ ಚಿತ್ರ ಪ್ರಾರಂಭವಾಗುತ್ತದೆ. ನೋಡು ನೋಡುತ್ತಲೇ ಬರಿಗಾಲುಗಳಿಂದ ಹಿಡಿದು ವಿವಿಧ ಬಗೆಯ, ವಿವಿಧ ಬಣ್ಣಗಳ, ವಿನ್ಯಾಸಗಳ, ಆಕಾರಗಳ, ಚಪ್ಪಲಿ, ಶೂ, ಪಾದರಕ್ಷೆ, ಹಾವುಗೆ, ಮುಳ್ಳೊತ್ತುಗಳನ್ನು ಧರಿಸಿ ಚಲಿಸುವ ಸ್ತ್ರೀ-ಪುರುಷ ಕಾಲುಗಳು ಕ್ಷಣ ಅರೆಕ್ಷಣಗಳಲ್ಲಿ ವಿವಿಧ ಕಸುಬು, ಆದಾಯ, ಸಾಮಾಜಿಕ ಹಿನ್ನಲೆ, ಆರ್ಥಿಕ ಮಟ್ಟ, ದೈಹಿಕ ಶಕ್ತಿ ಮತ್ತು ಪಾದ ಸೌಂದರ್ಯಗಳನ್ನು ಬಿಂಬಿಸಿಬಿಡುತ್ತವೆ. ಹರಿಯುವ ನದಿಯಂತೆ ಚಲಿಸುತ್ತಲೇ ಇರುವ ಈ ಜನರ ಪೂರ್ಣರೂಪಗಳು ಗೋಚರವಾಗುತ್ತಾ ಹೋದಂತೆ ನಡೆಯುತ್ತಾ ಸಾಗುವ ಜನಸಾಮಾನ್ಯರ ನಡುವಿನಿಂದ ಚಿತ್ರದ ಮೂರು ಮುಖ್ಯ ಪಾತ್ರಗಳು ನಿರ್ದಿಷ್ಟ ಚಹರೆಗಳ ವ್ಯಕ್ತಿಗಳಾಗಿ ಫೋಕಸ್ ಪಡೆದು ನಮ್ಮ ಗಮನಕ್ಕೆ ಬರುತ್ತಾರೆ. ಈ ಪಾತ್ರಗಳು ಏಕಕಾಲಕ್ಕೆ ವ್ಯಕ್ತಿಗಳೂ ಹೌದು, ಜನ ಸಾಮಾನ್ಯರ ಮಾದರಿಗಳೂ ಹೌದು ಎಂಬುದನ್ನು ಇಲ್ಲಿ ಗಮನಿಸಬಹುದು.

ಕುಮಾರ್?

ಈ ಮೂವರು ವ್ಯಕ್ತಿಗಳಲ್ಲಿ ಮೊದಲ ವ್ಯಕ್ತಿ ಪತ್ರಿಕೆಯೊಂದರಲ್ಲಿ ಫೋಟೋಗ್ರಾಫರ್ ಆಗಿ ಕೆಲಸಮಾಡುವ. ಕುಮಾರ್. ಎರಡನೆಯ ವ್ಯಕ್ತಿ ಜೈಲಿನಲ್ಲಿ ಬಂದಿಯಾಗಿದ್ದು ಬಿಡುಗಡೆಗಾಗಿ ತವಕಿಸುತ್ತಿರುವ ಅಮರೇಶ. ಮೂರನೆಯ ವ್ಯಕ್ತಿ ಶೂ ಅಂಗಡಿಯಲ್ಲಿ ಮಾರಾಟಗಾರಳಾಗಿ ಕೆಲಸ ಮಾಡುತ್ತಿರುವ ನೀಲಾ ಎಂಬ ಯುವತಿ. ಬಿಡಿ ಬಿಡಿಯಾಗಿ, ಈ ಮೂವರು ವ್ಯಕ್ತಿಗಳ ಏಕತಾನತೆಯ, ಬರಡು ಬದುಕಿನ ದೈನಂದಿನ ವಿವರಗಳು ಅವರ ಓಡಾಟ, ಕನಸು, ನಿರೀಕ್ಷೆ ಮತ್ತು ಅವರವರದೇ ಆದ ಸೀಮಿತ ಸಂಬಂಧಗಳ ಹೆಣಿಗೆಯು ವರ್ತಮಾನ ಬದುಕಿನ ವಿಷಮತೆಗಳ ಹಿನ್ನಲೆಯಲ್ಲಿ ಒಂದು ಚಿತ್ರವಾಗಿ ರೂಪುಗೊಂಡಿದೆ.

ವರ್ಗ ಸಮಾಜದಲ್ಲಿ ಜೀವನ ನಿರ್ವಹಣೆಗಾಗಿ ಮಾಡುವ ಜನರ ಉದ್ಯೋಗಗಳು ಅವರ ಸೃಜನಶೀಲತೆ ಮತ್ತು ಸ್ವಾತಂತ್ರ್ಯಗಳನ್ನು ಮುರುಟಿ ಅವರ ಅಸ್ತಿತ್ವವನ್ನೇ ಅರ್ಥಹೀನವಾಗಿ ಮಾಡಿದೆಯೆಂಬ ನೋಟ, ಕುಮಾರ್ನ ಸಪ್ಪೆ ಮುಖದಲ್ಲಿ ಕಾಣುತ್ತದೆ. ಯಾರೊಂದಿಗೂ ಮುಕ್ತವಾಗಿ ಮಾತನಾಡಲಾಗದ ವಿಷಣ್ಣತೆ ಅವನನ್ನು ಆವರಿಸಿದೆ. ಅಭಿವ್ಯಕ್ತಿಸಲು ಸೂಕ್ತ ಅವಕಾಶ ಸಿಗದ ಅವನ ಸೃಜನಶೀಲತೆ ಮತ್ತು ಕನಸುಗಳಿಗೆ ಹೊದಿಸಿದ ಮುಸುಕಿನಂತೆ ಅವನ ವಿರಳ ಮಾತು, ನೋಟಗಳು ಕಾಣುತ್ತವೆ. ಛಾಯಾಗ್ರಾಹಕನಾಗಿ ತನಗೆ ಎದುರಾಗುವ ಎಲ್ಲವನ್ನೂ ಫೋಟೋ ಸಾಧ್ಯತೆಗಳನ್ನಾಗಿ ನೋಡುವ ವೃತ್ತಿಪರತೆಯೂ ಅವನ ನಡವಳಿಕೆಯ ಭಾಗವಾಗಿರುವಂತೆ ತೋರುತ್ತದೆ.ನೈಸರ್ಗಿಕ ಗುಡ್ಡ-ಬೆಟ್ಟಗಳ ಸೌಂದರ್ಯವನ್ನು ತನ್ನ ಕ್ಯಾಮರಾದಲ್ಲಿ ಮೂಡಿಸಲು

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**